# ಸಮಾಜವಿಜ್ಞಾನ



## ೯ನೇ ತರಗತಿ

# ಎಕ್ಸಲೆಂಟ್

## ಪ್ರಶ್ನೋತ್ತರ ಮಾಲಿಕೆ

(ಪರಿಷ್ಕೃತ ಪಠ್ಯ ಆಧಾರಿತ)














ಒಂದು ಹೆಜ್ಜೆ ಡಿಜಿಟಲ್ ಕರ್ನಾಟಕದ ಕಡೆಗೆ



## ಸಮಾಜವಿಜ್ಞಾನ

## ಎಸ್.ಟಿ.ಎಫ್. ಕರ್ನಾಟಕ ಡಿಜಿಟಲ್ ಗ್ರೂಪ್

# ಸಮಾಜವಿಜ್ಞಾನ ಎಸ್.ಟಿ.ಎಫ್. ಕರ್ನಾಟಕ ಡಿಜಿಟಲ್ ಗ್ರೂಪ್

# ಎಕ್ಸಲೆಂಟ್

## ೯ನೇ ತರಗತಿ
## ಸಮಾಜವಿಜ್ಞಾನ ನೋಟ್ಸ್
## (ಪರಿಷ್ಕೃತ ಪಠ್ಯ ಆಧಾರಿತ)


ರಚನೆ

**ವೀರೇಶ್**
ಎಕ್ಸ್ ಮುನ್ಸಿಪಲ್ ಪ್ರೌಢಶಾಲೆ
ದಾವಣಗೆರೆ ತಾ. ಜಿ.

**ಕಾಂತೇಶ್**
ಸರ್ಕಾರಿ ಪ್ರೌಢಶಾಲೆ ಸೋಮನಹಳ್ಳಿ
ಕಡೂರು ತಾ. ಚಿಕ್ಕಮಗಳೂರು ಜಿ.

**ಪ್ರಶಾಂತ್ ಟಿ.ಕೆ.**
ಜಿ.ಜೆ.ಸಿ. ಲಿಂಗದಹಳ್ಳಿ
ಕಡೂರು ತಾ. ಚಿಕ್ಕಮಗಳೂರು ಜಿ.

**ಪ್ರೇಮನಗೌಡ ಪಾಟೀಲ್**
ಸರ್ಕಾರಿ ಪ್ರೌಢಶಾಲೆ ಜೋಡಿಹೋಚಿಹಳ್ಳಿ
ಕಡೂರು ತಾ. ಚಿಕ್ಕಮಗಳೂರು ಜಿ.

ಸಹಕಾರ

**ಸಂತೋಷ್ ಕುಮಾರ್**
ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು ಹಗರಿಬೊಮ್ಮನಹಳ್ಳಿ ತಾ. ಬಳ್ಳಾರಿ ಜಿ.

ಮುಖಪುಟ ವಿನ್ಯಾಸ:

**ರಾಮಚಂದ್ರ ಕೆ.ಎಸ್.**
ಸರ್ಕಾರಿ ಪ್ರೌಢಶಾಲೆ ಟಿ.ಗೋಪಗೊಂಡನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿ.

ಸಹಕಾರ: ಸಮಾಜವಿಜ್ಞಾನ ಎಸ್.ಟಿ.ಎಫ್. ಕರ್ನಾಟಕ ಡಿಜಿಟಲ್ ಗ್ರೂಪ್ ಸದಸ್ಯರು

# ಇತಿಹಾಸ

## ಅಧ್ಯಾಯ-1

# ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು

**. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಏಸುಕ್ರಿಸ್ತರು ಹುಟ್ಟಿದ ಸ್ಥಳ ______________
2. ಏಸುಕ್ರಿಸ್ತರನ್ನು ಶಿಲುಬೆಗೇರಿಸಿದ ಬೆಟ್ಟ _____________
3. ಮೊಹಮ್ಮದ್ ಪೈಗಂಬರರು ಹುಟ್ಟಿದ ಸ್ಥಳ ___________
4. ಇಸ್ಲಾಂ ಧರ್ಮದ ಗ್ರಂಥ ______________
5. ಮೊಹಮ್ಮದ್ ಪೈಗಂಬರರ ಉತ್ತರಾಧಿಕಾರಿಗಳನ್ನು ______ ಎನ್ನುವರು.
6. ಇಸ್ಲಾಂ ಧರ್ಮದ ಮೊದಲ ಖಲೀಫ ___________
7. ಮುಸ್ಲಿಂ ಧರ್ಮ ______ ರಲ್ಲಿ ಹುಟ್ಟಿತು.
8. _________ ಕ್ರೈಸ್ತ ಧರ್ಮದ ಪವಿತ್ರ ಗ್ರಂಥವಾಗಿದೆ.

**ಉತ್ತರಗಳು:- (1) ಬೆತ್ಲೆಹೆಂ (2) ಗೊಲ್ಗೋಥ (3) ಮೆಕ್ಕಾ (4) ಕುರಾನ್ (5) ಖಲೀಫರು (6) ಅಬೂಬಕರ್ (7) ಅರೇಬಿಯಾ (8) ಬೈಬಲ್**

**. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಏಸುಕ್ರಿಸ್ತರ ಜೀವನವನ್ನು ಕುರಿತು ಬರೆಯಿರಿ.**

ಏಸುಕ್ರಿಸ್ತರು ಸಾ.ಶ. 1ನೆಯ ಶತಮಾನದಲ್ಲಿ ಜೆರೂಸಲಂ ಬಳಿಯ ಬೆತ್ಲಹ್ಯಾಂ ಎಂಬ ಹಳ್ಳಿಯಲ್ಲಿ ಒಂದು ಬಡಕುಟುಂಬವೊಂದರಲ್ಲಿ ಮೇರಿ ಮತ್ತು ಜೋಸೆಫ್‌ರ ಮಗನಾಗಿ ಜನಿಸಿದರು. ಅವರಿಗೆ ಬಾಲ್ಯದಲ್ಲಿ ಅಪಾರವಾದ ಧಾರ್ಮಿಕ ಜ್ಞಾನವನ್ನು ಹೊಂದಿ ಯಹೂದಿಗಳ ಧರ್ಮಗ್ರಂಥಗಳನ್ನು, ತತ್ವಗಳನ್ನು ಸರಳವಾಗಿ ವಿವರಿಸಿ ಅಚ್ಚರಿಗೊಳಿಸಿದರು. ಜೀಸಸ್‌ರು ತನ್ನ 30ನೆಯ ವಯಸ್ಸಿನಲ್ಲಿ ಜಾನ್ ಬ್ಯಾಪ್ಟಿಸ್ಟ್ ಎಂಬುವವರ ಪ್ರಭಾವಕ್ಕೆ ಒಳಗಾಗಿ ಅವರಿಂದ ದೀಕ್ಷಾ ಸ್ನಾನ ಪಡೆದರು. ದೀಕ್ಷೆಯನ್ನು ನೀಡಿದ ಜಾನ್ ಜೀಸಸರನ್ನು ಮಸೀಹ ಅಥವಾ ಮಹಾರಕ್ಷಕನೆಂದು ಕರೆದರು. ದೀಕ್ಷೆಯ ಸ್ವೀಕಾರದ ನಂತರ ಕಷ್ಟದಲ್ಲಿದ್ದ ಜನರಿಗೆ ದಿವ್ಯ ಜ್ಞಾನವನ್ನು ಬೋಧಿಸಿ ಅವರಿಗೆ ಮಾನಸಿಕ ನೆಮ್ಮದಿಯನ್ನು ತಂದುಕೊಡುತ್ತಿದ್ದರು. ದಿನೇ ದಿನೇ ಜೀಸಸ್‌ರ ಸೇವಾ ಮನೋಭಾವನೆಗಳು ಮತ್ತು ಅನುಕಂಪಗಳು ಎಲ್ಲಾ ವರ್ಗಗಳನ್ನು ಆಕರ್ಷಿಸಿ ಜನಪ್ರಿಯವಾದವು. ಕ್ರಮೇಣ ಅವರು ಜನರ ದೃಷ್ಟಿಯಲ್ಲಿ ರಕ್ಷಕನಾಗಿ ದೈವತ್ವ ಸ್ಥಾನ ಹೊಂದಲಾರಂಭಿಸಿದರು. ಇದನ್ನು ಯಹೂದಿಯರಲ್ಲಿದ್ದ ಸಂಪ್ರದಾಯ ವರ್ಗ ವಿರೋಧಿಸಿತು. ಇವರು ಜೀಸಸ್‌ರ ಬಗ್ಗೆ ರೋಮನ್ ಸಾಮ್ರಾಜ್ಯದ ರಾಜ್ಯಪಾಲನಾದ ಪಾಂಟಿಯಸ್‌ಪಿಲಾತನಿಗೆ ದೂರನ್ನು ನೀಡಿ ರಾಜದ್ರೋಹದ ಆರೋಪ ಮಾಡಿದರು. ವಿಚಾರಣೆಯ ನಂತರ ಜೀಸಸ್‌ರನ್ನು ಗೋಲ್ಗೋಥ ಎಂಬ ಬೆಟ್ಟದಲ್ಲಿ ಒಂದು ಶುಕ್ರವಾರದ ದಿನ ಶಿಲುಬೆಗೆ ಏರಿಸಿದರು.

**2. ಜೀಸಸ್‌ಕ್ರಿಸ್ತರ ಬೋಧನೆಗಳನ್ನು ಪಟ್ಟಿ ಮಾಡಿ.**

ಜೀಸಸ್‌ಕ್ರಿಸ್ತರ ಬೋಧನೆಗಳು ಹೀಗಿವೆ,

1) ದೇವರು ಒಬ್ಬನೇ, ದಯಾಮಯನಾದ ದೇವರು ಸರ್ವ ಜೀವರಾಶಿಗಳ ತಂದೆ.

2) ಪ್ರತಿಯೊಬ್ಬರಲ್ಲಿ ಸಹೋದರತ್ವ ಭಾವನೆಯಿರಬೇಕು.

3) ನಾವು ಕಷ್ಟದಲ್ಲಿರುವವರನ್ನು ಪ್ರೀತಿಸಿದರೆ ದೇವರನ್ನು ಪ್ರೀತಿಸಿದಂತೆ.

4) ಪರರಿಂದ ಯಾವುದನ್ನು ಬಯಸದೇ ನಾವು ಅವರ ಸೇವೆಯನ್ನು ಮಾಡಬೇಕು.

5) ಮಾನವನ ಸೇವೆಯು ದೇವರ ಸೇವೆಗೆ ಸಮಾನವಾದುದು.

6) ಮಾನವನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ, ಅದಕ್ಕೆ ದೇವರಿಂದ ಕ್ಷಮಾಪಣೆ ಇದೆ.

7) ನಿನ್ನ ಶತ್ರುವನ್ನು ನೀನು ಪ್ರೀತಿಸು; ನಿನಗೆ ಕೆಟ್ಟದ್ದನ್ನು ಬಯಸುವವರಿಗೆ ನೀನು ಒಳ್ಳೆಯದನ್ನು ಬಯಸು.

**3. ಕ್ರೈಸ್ತ ಧರ್ಮವು ಹೇಗೆ ಪ್ರಸಾರವಾಯಿತು?**

ಜೀಸಸ್‌ರು ಕಷ್ಟದಲ್ಲಿರುವವರನ್ನು ರಕ್ಷಿಸಬೇಕೆಂಬ ಜವಾಬ್ದಾರಿಯನ್ನು ಮತ್ತು ದೀಕ್ಷೆಯನ್ನು ತನ್ನ 12 ಜನ ಶಿಷ್ಯರಿಗೆ ವಹಿಸಿದರು. ಅವರನ್ನು ಅಪೋಸಲ್ಸ್ ಎಂದು ಕರೆಯಲಾಗಿದೆ. ಇವರಲ್ಲಿ ಸಂತ ಪೀಟರನು ಅತೀ ಪ್ರಮುಖನಾಗಿದ್ದು ರೋಮಿಗೆ ತೆರಳಿ ಚರ್ಚ್ ಸ್ಥಾಪಿಸಿ ಪ್ರಪಂಚದಾದ್ಯಂತ ಧರ್ಮ ಪ್ರಚಾರಕರನ್ನು ಕಳುಹಿಸಿ ಕ್ರೈಸ್ತ ಧರ್ಮದ ಸುವಾರ್ತೆಗಳ ಪ್ರಚಾರ ಆರಂಭಿಸಿದನು. ಪ್ರಾರಂಭದಲ್ಲಿ ರೋಮನ್ ಚಕ್ರವರ್ತಿಗಳು ಕ್ರೈಸ್ತ ಧರ್ಮದ ಪ್ರಚಾರಕ್ಕೆ ಅಡ್ಡಿಪಡಿಸಲಿಲ್ಲ. ಇದರಿಂದ ರೋಮನ್ ಸಾಮ್ರಾಜ್ಯದಾದ್ಯಂತ ತ್ವರಿತವಾಗಿ ಧರ್ಮ ಹರಡಿತು. ಆದರೆ 1ನೆಯ ಶತಮಾನದ ನಂತರ ಕ್ರಮೇಣ ರೋಮನ್ ಚಕ್ರವರ್ತಿಗಳು ಪ್ರಚಾರಕರಿಗೆ ಹಿಂಸೆ ನೀಡಲಾರಂಭಿಸಿ ಧರ್ಮಪ್ರಚಾರಕ್ಕೆ ಅಡ್ಡಿಪಡಿಸಿದರು. ಇದನ್ನು ಲೆಕ್ಕಿಸದೆ ಪ್ರಚಾರಕರು ತಮ್ಮ ಕಾರ್ಯವೈಖರಿಯನ್ನು ಮುಂದುವರೆಸಿದರು. ನಂತರ 4ನೆಯ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಕಾನ್‌ಸ್ಟಂಟೈನ್ ಸಾ.ಶ. 313ರಲ್ಲಿ ಕ್ರೈಸ್ತ ಧರ್ಮವನ್ನು ರಾಜ್ಯಧರ್ಮವಾಗಿ ಸ್ವೀಕರಿಸಿದನು. ಅಂದಿನಿಂದ ಈ ಧರ್ಮ ರಾಜ್ಯಾಧಿಕಾರದ ಬೆಂಬಲವನ್ನು ಪಡೆದು ರೋಮ್, ಗ್ರೀಕ್, ಮ್ಯಾಸಿಡೋನಿಯ, ಏಷ್ಯಾಮೈನರ್‌ಗಳಲ್ಲಿ ಹರಡಲಾರಂಭಿಸಿತು. ರೋಮನ್ ಚರ್ಚ್ ಹಾಗೂ ಮತಪ್ರಚಾರಕರು ನಡೆಸಿದ ಮತಾಂತರದಿಂದ ಹೆಚ್ಚಿನ ಪ್ರಚಾರ ಪಡೆಯಿತು.

**4. ಮೊಹಮ್ಮದ್ ಪೈಗಂಬರರ ಜೀವನವನ್ನು ತಿಳಿಸಿರಿ.**

ಮಹಮ್ಮದ್ ಪೈಗಂಬರ್‌ರವರು ಸಾ.ಶ. 570ರಲ್ಲಿ ಮೆಕ್ಕಾದಲ್ಲಿ ಜನಿಸಿದರು. ಇವರ ತಂದೆ ಅಬ್ದುಲ್ಲಾ ಹಾಗೂ ತಾಯಿ ಅಮೀನಾ. ಬಾಲ್ಯದಲ್ಲಿ ತನ್ನ ತಂದೆತಾಯಿಯನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಚಿಕ್ಕಪ್ಪನ ಜೊತೆಯಲ್ಲಿ ವ್ಯಾಪಾರಕ್ಕೆ ಮೆಕ್ಕಾ ಹಾಗೂ ಸಿರಿಯಾ

SS STF DIGITAL GROUP

ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದರು. ಆಗ ಮೆಕ್ಕಾದ ಶ್ರೀಮಂತ ವಿಧವೆ ಖದೀಜರ ಪರಿಚಯವಾಗಿ ಮುಂದೆ ಆಕೆಯೊಂದಿಗೆ ವಿವಾಹವಾಯಿತು. ಅವರಿಗೆ ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರು ಇದ್ದರು. ಮೆಕ್ಕಾದ ಬಳಿಯ ಹೀರಾ ಎನ್ನುವ ಬೆಟ್ಟದ ತಪ್ಪಲಿಗೆ ಹೋಗಿ ಧ್ಯಾನಾಸಕ್ತರಾಗುತ್ತಿದ್ದರು. ಜ್ಞಾನೋದಯವನ್ನು ಪಡೆದ ಪೈಗಂಬರರನ್ನು ಜನರು ದೇವದೂತನೆಂದು ಕರೆದರು. ಕೆಲವು ಸಂದೇಶಗಳನ್ನು ತನ್ನ ಅನುಯಾಯಿಗಳಿಗೆ ತಿಳಿಸುತ್ತಿದ್ದರು.

ಪೈಗಂಬರರು ತಮ್ಮ ತತ್ವಗಳನ್ನು ಮೆಕ್ಕಾದಲ್ಲಿ ಪ್ರಚಾರ ಮಾಡಲಾರಂಭಿಸಿದರು. ಬಹುದೇವತಾರಾಧ"ನೆಯನ್ನು ವಿರೋಧಿಸಿದ ಪೈಗಂಬರ್‌ರನ್ನು ಮೆಕ್ಕಾದ ಜನರು ವಿರೋಧಿಸಿ ಅವರ ಕೊಲೆಗೆ ಸಂಚು ಹೂಡಿದರು. ಇದನ್ನು ತಿಳಿದ ಪೈಗಂಬರರು ಸಾ.ಶ. 622ರಲ್ಲಿ ಮೆಕ್ಕಾದಿಂದ ಮದೀನಾಗೆ ಪ್ರಯಾಣ ಬೆಳೆಸಿದರು (ಹಿಜಿರಾ/ಪಲಾಯನ). ಮದೀನಾದ ಜನ ಪೈಗಂಬರರನ್ನು ಸ್ವಾಗತಿಸಿ ಅವರ ಬೋಧನೆಗಳನ್ನು ಅನುಸರಿಸಿದರು. ಎಂಟು ವರ್ಷಗಳ ತರುವಾಯ ಮೆಕ್ಕಾ ಮತ್ತು ಮದೀನದ ಮಧ್ಯೆ ಯುದ್ಧವಾಗಿ, ಮದೀನದ ಜನರು ಮೆಕ್ಕಾದವರನ್ನು ಸೋಲಿಸಿದರು. ಆಗ ಪೈಗಂಬರ್‌ರವರು ಮೆಕ್ಕಾಗೆ ಪ್ರವೇಶಿಸಿದರು. ತದನಂತರ ಮೆಕ್ಕಾದ ಜನ ಪೈಗಂಬರ್‌ರವರ ತತ್ವಗಳನ್ನು ಒಪ್ಪಿ ಪೈಗಂಬರರು ಬೋಧಿಸಿದ ಧರ್ಮವನ್ನು ಒಪ್ಪಿಕೊಂಡರು. ಕ್ರಮೇಣ ಪೈಗಂಬರರ ತತ್ವಗಳು ಅರಬ್ ಪ್ರದೇಶದಾದ್ಯಂತ ಹರಡಿದವು. ಪೈಗಂಬರರು ಸಾ.ಶ. 632ರಲ್ಲಿ ಮರಣ ಹೊಂದಿದರು.

**5. 'ಹಿಜಿರಾ' ಎಂದರೇನು?**

ಪೈಗಂಬರರು ಸಾ.ಶ. 622ರಲ್ಲಿ ಮೆಕ್ಕಾದಿಂದ ಮದೀನಾಗೆ ಪ್ರಯಾಣ ಬೆಳೆಸಿದರು. ಈ ಘಟನೆಯನ್ನು ಹಿಜಿರಾ (ಪಲಾಯನ) ಎಂದು ಕರೆದು ಇದನ್ನು ಮುಸ್ಲಿಮರು 'ಹಿಜಿರಾಶಕ' ಎಂದು ಪರಿಗಣಿಸಿದ್ದಾರೆ. (ಮುಸ್ಲಿಮರ ಲೂನಾರ್ ಕ್ಯಾಲೆಂಡರ್ ಇದರ ಆಧಾರದ ಮೇಲೆ ರಚನೆಯಾಗಿದೆ).

**6. ಇಸ್ಲಾಂ ಧರ್ಮದ ಭೋದನೆಗಳಾವುವು?**

ಇಸ್ಲಾಂ ಧರ್ಮದ ಬೋಧನೆಗಳು ಹೀಗಿವೆ :

1) ದೇವರು ಒಬ್ಬನೇ. ಆತನೇ ಅಲ್ಲಾ. ಅಲ್ಲಾನನ್ನು ಒಲಿಸಿಕೊಳ್ಳಲು ಸರಳ ಪ್ರಾರ್ಥನೆಯೊಂದು ಸಾಕು.

2) ಪ್ರಾಮಾಣಿಕತೆ ಮತ್ತು ನೀತಿಯುತ ಜೀವನ ನಡೆಸಬೇಕು, ದುಶ್ಚಟಗಳಿಂದ ದೂರವಿರಬೇಕು.

3) ದೀನ ದುರ್ಬಲರ ಬಗ್ಗೆ ಕರುಣೆ ಹಾಗು ಸ್ತ್ರೀಯರ ಬಗ್ಗೆ ಗೌರವವಿರಬೇಕು.

**7. ಇಸ್ಲಾಂ ಧರ್ಮದ ಆಚರಣೆಗಳಾವುವು?**

ಇಸ್ಲಾಂ ಧರ್ಮದಲ್ಲಿ ಐದು ಪ್ರಮುಖ ಆಚರಣೆಗಳಿವೆ.

1) ಕಲೀಮಾ – ಅಲ್ಲಾನಲ್ಲಿ ಮಾತ್ರ ನಂಬಿಕೆ. ಮಹಮ್ಮದರು ಅವರ ಪ್ರವಾದಿಗಳು.

2) ನಮಾಜ್ – ಪ್ರತೀ ದಿನ ಐದು ಬಾರಿ ಅಲ್ಲಾನಿಗೆ ಪ್ರಾರ್ಥನೆ ಸಲ್ಲಿಸಬೇಕು.

3) ರೋಜ – ರಂಜಾನ್ ತಿಂಗಳಲ್ಲಿ ಉಪವಾಸ.

4) ಜಕಾತ್ – ಆದಾಯದಲ್ಲಿ ನಿಗದಿಪಡಿಸಿದ ಭಾಗವನ್ನು ಬಡವರಿಗೆ ದಾನ ನೀಡಬೇಕು.

5) ಹಜ್ – ಜೀವನದಲ್ಲಿ ಒಂದು ಬಾರಿ ಮೆಕ್ಕಾ ಯಾತ್ರೆ ಕೈಗೊಳ್ಳಬೇಕು.

**8. ಕ್ರೈಸ್ತ ಧರ್ಮದ ಕೊಡುಗೆಗಳು ಯಾವುವು?**

**ಕ್ರೈಸ್ತ ಧರ್ಮದ ಕೊಡುಗೆಗಳು**

1) ಕ್ರೈಸ್ತ ಧರ್ಮ ಪ್ರಪಂಚಕ್ಕೆ ಶಾಂತಿ ಮತ್ತು ಸಹೋದರತ್ವ ತತ್ವಗಳನ್ನು ನೀಡಿದೆ.

2) ಚರ್ಚ್‌ಗಳು ಹಾಗು ಕೆಲವು ಧರ್ಮಪ್ರಚಾರಕರು ಶಿಕ್ಷಣ ಕೇಂದ್ರ್ರಗಳನ್ನು ಸ್ಥಾಪಿಸಿ ಶಿಕ್ಷಣದ ಬೆಳವಣಿಗೆಗೆ ಕಾರಣರಾದರು.

3) ಕ್ರೈಸ್ತ ಧರ್ಮವು ಕಟ್ಟಡಗಳ ನಿರ್ಮಾಣ ವಿನ್ಯಾಸಕ್ಕೆ ಗೋಥಿಕ್ ಶೈಲಿಯನ್ನು ಪರಿಚಯಿಸಿದೆ.

4) ಕ್ರೈಸ್ತ ಧರ್ಮಪ್ರಚಾರಕರು ವೈದ್ಯಕೀಯ ಸೇವೆಗಳನ್ನು ಪ್ರಪಂಚದಾದ್ಯಂತ ವಿಸ್ತರಿಸಿದರು.

5) ಸ್ತ್ರೀಯರು ಮತ್ತು ದುರ್ಬಲ ಸಮುದಾಯಗಳಿಗೆ ಶಿಕ್ಷಣವನ್ನು ನೀಡಿದ್ದರಿಂದ ಗುಣಾತ್ಮಕ ಸಾಮಾಜಿಕ ಬದಲಾವಣೆಗಳು ಆದವು. ಇದನ್ನೇ ಸಬಲೀಕರಣ ಎಂದು ಕರೆಯಲಾಗಿದೆ.

**8. ಕ್ರೈಸ್ತ ಧರ್ಮದ ಪಂಗಡಗಳು ಯಾವುವು?**

ಕ್ರೈಸ್ತ ಧರ್ಮದ ಎರಡು ಪಂಗಡಗಳೆಂದರೆ;

1) ಕ್ಯಾಥೋಲಿಕರು 2) ಪ್ರಾಟಸ್ಟಂಟರು

**9. ಇಸ್ಲಾಂ ಧರ್ಮದ ಶೀಘ್ರ ಮತ್ತು ವಿಶ್ವವ್ಯಾಪಿ ಪ್ರಚಾರಕ್ಕೆ ಕಾರಣವೇನು?**

1) ಇಸ್ಲಾಂ ಧರ್ಮದ ಸರಳತೆ.

2) ಖಲೀಫರ ಧರ್ಮಪ್ರಚಾರದ ಕಾರ್ಯಚಟುವಟಿಕೆಗಳು.

3) ಇಸ್ಲಾಂ ಧರ್ಮೀಯರ ಶ್ರದ್ಧೆ.

4) ಸುಲ್ತಾನರುಗಳ ಧಾರ್ಮಿಕ ಆಸಕ್ತಿ.

5) ಪೂರಕವಾಗಿ ಸೃಷ್ಟಿಯಾದ ರಾಜಕೀಯ ಸನ್ನಿವೇಶಗಳು.

6) ಪೈಗಂಬರ್ ನಂತರ ಖಲೀಪರ ಪ್ರಾಮಾಣಿಕ ಧರ್ಮ ಪ್ರಸಾರದ ಪ್ರಯತ್ನ.

**10. ಇಸ್ಲಾಂ ಧರ್ಮದ ಪಂಗಡಗಳು ಯಾವುವು?**

ಇಸ್ಲಾಂ ಧರ್ಮದ 2 ಪಂಗಡಗಳಿವೆ. ಅವುಗಳೆಂದರೆ – ಶಿಯಾ ಮತ್ತು ಸುನ್ನಿ ಪಂಗಡಗಳು

**ಅಧ್ಯಾಯ–2**

# ಮಧ್ಯಕಾಲೀನ ಭಾರತ ಮತ್ತು ರಾಜಕೀಯ ಸಂಕ್ರಮಣ

**. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಗುರ್ಜರ–ಪ್ರತಿಹಾರ ರಜಪೂತ ಮನೆತನ ಸ್ಥಾಪಕ ________

2. ಪೃಥ್ವಿರಾಜ ಚೌವ್ಹಾಣನು ಮೊದಲನೆಯ ತರೈನ್ ಕಾಳಗದಲ್ಲಿ ________ ನನ್ನು ಸೋಲಿಸಿದನು.

3. ಮೊಹಮ್ಮದ್ ಘೋರಿಯ ಪ್ರಮುಖ ದಂಡನಾಯಕ_______

4. ದೆಹಲಿ ಸುಲ್ತಾನರಲ್ಲಿ ಆಳ್ವಿಕೆ ಮಾಡಿದ ಪ್ರಥಮ ಮಹಿಳೆ______

5. ಖಿಲ್ಜಿ ವಂಶದ ಪ್ರಸಿದ್ಧ ಸುಲ್ತಾನ____________

6. ತುಘಲಕ್ ಕಾಲದಲ್ಲಿ ರಾಜಧಾನಿಯನ್ನು ದೆಹಲಿಯಿಂದ __________ ಗೆ ವರ್ಗಾಯಿಸಲಾಯಿತು.

7. ___________ ಕೃತಿಯನ್ನು ಅಲ್ಬೇರೂನಿ ರಚಿಸಿದ್ದಾನೆ.

8. ಕುವತ್ ಉಲ್ಲ್ ಇಸ್ಲಾಂ ಮಸಿದಿಯ ಕತೃ _________

**ಉತ್ತರಗಳು:– (1) ನಾಗಭಟ್ಟ (2) ಮಹಮ್ಮದ್ ಘೋರಿ (3) ಕುತ್ಬುದ್ದೀನ್ ಐಬಕ್ (4) ರಜಿಯಾ ಸುಲ್ತಾನ (5) ಅಲ್ಲಾವುದ್ದೀನ್ ಖಿಲ್ಜಿ (6) ದೇವಗಿರಿ (7) ತಾರೀಕ್ ಈ ಯಾಮಿನಿ (8) ಕುತ್ಬುದ್ದೀನ್ ಐಬಕ್**

**. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ವಿವರಿಸಿ.**

ರಜಪೂತ ಅರಸರು ಸ್ವತಃ ವಿದ್ವಾಂಸರು ಆಗಿದ್ದಾರೆ. ಭೋಜ, ಮುಂಜ, ಮೊದಲಾದ ಅರಸರೇ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಮುಂಜ ರಾಜನು ಪದ್ಮಗುಪ್ತ, ಹಲಾಯುಧ ಎಂಬ ಕವಿಗಳಿಗೆ ಆಶ್ರಯ ನೀಡಿದ್ದನು. ಭೋಜ ರಾಜನ ಕಾಲದಲ್ಲಿ ಶಾಂತಿಸೇನ, ಪ್ರಭಾಚಂದ್ರ ಸೂರಿ, ಧನಪಾಲ ಎಂಬ ಜೈನ ಪಂಡಿತರು ಆಶ್ರಯ ಪಡೆದಿದ್ದರು. ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು. ನಾಟಕಗಳಾದ ರಾಜಶೇಖರ ರಚಿಸಿದ 'ಬಾಲ ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ', ಹಾಗೂ 'ಉತ್ತರರಾಮಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವಿರಾಜ ವಿಜಯ' ಮತ್ತು ಹೇಮಚಂದ್ರನ 'ಕುಮಾರಪಾಲಚರಿತ' ಮಹತ್ವದ್ದಾಗಿವೆ. ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವಿರಾಜ ರಾಸೋ'ವನ್ನು ಚಂದ್ ಬರದಾಯಿ ಮತ್ತು 'ಭೋಜ ಪ್ರಬಂಧ'ವನ್ನು ಬಲ್ಲಾಳ ಎಂಬುವರು ರಚಿಸಿದರು. ಈ ಕಾಲದಲ್ಲಿ ಗುಜರಾತಿ, ರಾಜಸ್ತಾನಿ, ಹಿಂದಿ ಭಾಷೆಗಳು ಅಭಿವೃದ್ಧಿಯಾದವು.

**2. ಇಲ್ತಮಶ್‌ನ ಆಡಳಿತ ಪದ್ಧತಿಯನ್ನು ಸ್ಥೂಲವಾಗಿ ವಿವರಿಸಿ.**

- ಇಲ್ತುಮಶ್ ರಾಜ್ಯವನ್ನು ಅನೇಕ ಇಕ್ತಾಗಳನ್ನಾಗಿ ವಿಂಗಡಿಸಿ. ಆಡಳಿತ ನಿರ್ವಹಣೆಗಾಗಿ ಇಕ್ತಾದಾರರನ್ನು ನೇಮಿಸಿದನು.
- ಆಡಳಿತದಲ್ಲಿ ಸಲಹೆ ಸೂಚನೆ ನೀಡಲು 'ನಲವತ್ತು ಸರದಾರರ ಕೂಟ' ನೇಮಕ ಮಾಡಿದನು.
- ಪ್ರಧಾನ ಮಂತ್ರಿ, ನ್ಯಾಯಾಧೀಶರು ಸುಲ್ತಾನನಿಗೆ ಸಲಹೆ ನೀಡುತ್ತಿದ್ದರು.
- ಇಲ್ತುಮಶ್‌ನು ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದನು.

**3. ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತಾತ್ಮಕ ಸುಧಾರಣೆಗಳಾವುವು?**

- ಧಾರ್ಮಿಕ ದತ್ತಿ, ಇನಾಮ್ ಭೂಮಿ ಮತ್ತು ಸಹಾಯಧನಗಳನ್ನು ರದ್ದುಗೊಳಿಸಿದನು.
- ದಕ್ಷ ಗೂಢಚಾರ ವ್ಯವಸ್ಥೆ ರಚಿಸಿದನು.
- ಮದ್ಯಪಾನ, ಮಾದಕ ವಸ್ತುಗಳ ಮಾರಾಟ, ಪಗಡೆಯಾಟಗಳನ್ನು ನಿಷೇಧಿಸಿದನು.
- ಸರದಾರರ ಕೂಟ, ಸಾರ್ವಜನಿಕರೊಂದಿಗಿನ ಸ್ನೇಹ ಸಮಾರಂಭ ಹಾಗೂ ಗಣ್ಯವರ್ಗಗಳ ನಡುವೆ ವೈವಾಹಿಕ ಸಂಬಂಧಗಳನ್ನು ನಿರ್ಬಂಧಿಸಿದನು.
- ಇವನ ಕಾಲದಲ್ಲಿ ಸಣ್ಣ ಸಣ್ಣ ಹಿಡುವಳಿಯ ಭೂಮಿಗಳಲ್ಲಿ ವ್ಯವಸಾಯ ಮಾಡುತ್ತಿದ್ದ ಕೆಳವರ್ಗದ ರೈತರಿಂದ ಹಿಡಿದು ದೊಡ್ಡ ದೊಡ್ಡ ಭೂ ಮಾಲೀಕರೂ ಸಹ ತೆರಿಗೆ ಪಾವತಿಸಲೇಬೇಕಾಗಿತ್ತು.
- ರೈತರಿಂದ ನಿಗದಿತ ಪ್ರಮಾಣದ ತೆರಿಗೆಯನ್ನು ಸಂಗ್ರಹಿಸಲು ಕಂದಾಯ ಅಧಿಕಾರಿಗಳನ್ನು ನೇಮಕ ಮಾಡಿದನು.

- **ಸೈನಿಕ ಸುಧಾರಣೆ :** ಸೈನಿಕರಿಗೆ ನಿಗದಿಯಾಗಿದ್ದ ಅವರ ಸಂಬಳ ಪ್ರತಿ ತಿಂಗಳ ಕೊನೆಯ ಹೊತ್ತಿಗೆ ನಗದು ರೂಪದಲ್ಲಿ ಸಂದಾಯವಾಗುತ್ತಿತ್ತು. ಸೈನಿಕರ ಚಹರೆಗಳನ್ನು ಗುರ್ತಿಸಿ ದಾಖಲು ಮಾಡಿಕೊಳ್ಳುವ ಪದ್ಧತಿ ಆರಂಭವಾಯಿತು. ಈ ಕಾರ್ಯಕ್ಕಾಗಿ ಹುಲಿಯ ಎನ್ನುವ ಹೆಸರಿನ ದಸ್ತಾವೇಜುಗಳನ್ನು ಚಾಲ್ತಿಗೆ ತರಲಾಯಿತು. ಕುದುರೆಗಳಿಗೆ 'ದಾಗ್' ಅಂದರೆ ಮುದ್ರೆಹಾಕುವುದು ಜಾರಿಗೆ ಬಂದಿತು.
- **ಮಾರುಕಟ್ಟೆ ಸುಧಾರಣೆಗಳು:** ಅಲ್ಲಾವುದೀನನು ಜಾರಿಗೆ ತಂದ ಮಾರುಕಟ್ಟೆ ಸುಧಾರಣೆಗಳು ಅವನಿಗೆ ಚರಿತ್ರೆಯಲ್ಲಿ ಅನನ್ಯ ಸ್ಥಾನವನ್ನು ತಂದುಕೊಟ್ಟಿವೆ. ಸಾಮಾನ್ಯ ಜನತೆಗೂ ಸಹ ಜೀವನಾವಶ್ಯಕ ವಸ್ತುಗಳಾದ ಧಾನ್ಯ, ಖಾದ್ಯ ತೈಲ, ಸಕ್ಕರೆ, ಉಪ್ಪು ಮತ್ತು ತೈಲಗಳನ್ನು ನ್ಯಾಯವಾದ ಬೆಲೆಗೆ ದೊರಕಿಸುವ ವ್ಯವಸ್ಥೆಮಾಡಿದನು. ಹಾಗೆಯೇ ಕುದುರೆ ಹಾಗೂ

SS STF DIGITAL GROUP

ಗುಲಾಮರ ಮಾರಾಟಕ್ಕೂ ಸಹ ಮಾರುಕಟ್ಟೆಗಳನ್ನು ವ್ಯವಸ್ಥೆ ಮಾಡಿಸಿದನು. ಈ ಮಾರುಕಟ್ಟೆಗಳನ್ನು ನಿಯಂತ್ರಿಸಲು 'ಸಹನಾ-ಇ-ಮಂಡಿ'ಯೆಂಬ ಉನ್ನತಾಧಿಕಾರಿಯನ್ನು ನೇಮಕ ಮಾಡಿದನು. ಮೋಸ ಮಾಡಿದವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸುತ್ತಿದ್ದನು.

**4. ಮೊಹಮ್ಮದ್-ಬಿನ್ ತುಘಲಕ್‌ನು ಜಾರಿಗೊಳಿಸಿದ ಆಡಳಿತ ಸುಧಾರಣೆಗಳಾವುವು?**

**ಆಡಳಿತಾತ್ಮಕ ಸುಧಾರಣೆಗಳು**

- **ಕಂದಾಯ ಸುಧಾರಣೆ:** ಸಾಮ್ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದಂತೆ ಭೂಮಿಯ ಎಲ್ಲ ವಿವರಗಳನ್ನು ಒಳಗೊಂಡ ಅಧಿಕೃತ ದಾಖಲೆಗಳಿರುವ ಪುಸ್ತಕವನ್ನು ಜಾರಿಗೊಳಿಸಿದನು. ಕೃಷಿ ಇಲಾಖೆಯನ್ನು ಸ್ಥಾಪಿಸಿದನು. ಕೃಷಿಗೆ ಒಳಪಡದ ಭೂಮಿಗಳಲ್ಲಿ ಕೃಷಿ ಚಟುವಟಿಕೆಗಳನ್ನು ಅರಂಭಿಸಲು ರೈತರಿಗೆ ಪ್ರೋತ್ಸಾಹಿಸಿ ಹಲವು ತೆರಿಗೆ ವಿನಾಯಿತಿಯನ್ನು ನೀಡಿದನು. ರೈತರಿಗೆ ಆರ್ಥಿಕ ನೆರವು ನೀಡಲು ತಕಾವಿ ಸಾಲ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದನು.
- **ದೆಹಲಿಯಿಂದ ಮಧ್ಯ ಭಾರತದಲ್ಲಿದ್ದ ದೇವಗಿರಿಗೆ ರಾಜಧಾನಿಯ ವರ್ಗಾವಣೆ :** ಇದರ ಮುಖ್ಯ ಉದ್ದೇಶ ವಿಶಾಲವಾದ ಸಾಮ್ರಾಜ್ಯಕ್ಕೆ ರಾಜಧಾನಿ ಕೇಂದ್ರಭಾಗದಲ್ಲಿರಬೇಕು ಹಾಗೂ ಪರಕೀಯ ದಾಳಿಗಳಿಂದ ರಕ್ಷಿಸಲು ಅನುಕೂಲವಾಗಿರ ಬೇಕೆಂಬುದಾಗಿತ್ತು.
- **ಸಾಂಕೇತಿಕ ನಾಣ್ಯ ಪ್ರಯೋಗ:** ನಾಣ್ಯಗಳ ಮೌಲ್ಯಗಳನ್ನು ತನ್ನ ಕಾಲದ ಬಂಗಾರ ಮತ್ತು ಬೆಳ್ಳಿಯ ಮೌಲ್ಯಕ್ಕೆ ಸರಿಹೊಂದುವಂತೆ ಮಾಡಿದನು. 'ದಿನಾರ' ಎಂಬ ಬಂಗಾರದ ಹಾಗೂ 'ಅದಲಿ' ಎಂಬ ಬೆಳ್ಳಿ ನಾಣ್ಯಗಳನ್ನು ಚಲಾವಣೆಗೆ ತಂದನು.

**5. ದೆಹಲಿ ಸುಲ್ತಾನರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಾವುವು? ಉದಾಹರಿಸಿ.**

ದೆಹಲಿ ಸುಲ್ತಾನರು ಭಾರತದಲ್ಲಿ 'ಇಂಡೋ-ಇಸ್ಲಾಮಿಕ್' ಎಂಬ ಹೊಸ ಶೈಲಿಯ ವಾಸ್ತುಶಿಲ್ಪವನ್ನು ಪರಿಚಯಿಸಿದರು. ಕಮಾನುಗಳು, ಗುಮ್ಮಟಗಳು ಹಾಗೂ ಮಿನಾರ್‌ಗಳು ಈ ಶೈಲಿಯ ಮುಖ್ಯ ಲಕ್ಷಣಗಳು. ದೆಹಲಿ ಸುಲ್ತಾನರು ಕೋಟೆ, ಮಸೀದಿ, ಅರಮನೆ, ಸಾರ್ವಜನಿಕ ಕಟ್ಟಡ ಮದರಸಾ, ಧರ್ಮ ಶಾಲೆಗಳನ್ನು ನಿರ್ಮಿಸಿದರು. ಇಂಡೋ-ಇಸ್ಲಾಮಿಕ್ ಶೈಲಿಗೆ ಉದಾಹರಣೆ : ದೆಹಲಿಯ ಕುವತ್-ಉಲ್-ಇಸ್ಲಾಂ ಮಸೀದಿ, ಕುತುಬ್ ಮಿನಾರ್, ಅಲೈ ದರವಾಜಾ, ಜಮೈತ್ ಖಾನಾ ಮಸೀದಿಗಳು.

**6. ರಜಪೂತರ ಕಾಲದ ಕಲೆ ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳ ಬಗ್ಗೆ ಮಾಹಿತಿ ನೀಡಿ.**

ಜೈಪುರ, ಗ್ವಾಲಿಯರ್, ಉದಯಪುರಗಳ ಅರಮನೆಗಳು, ಮೌಂಟ್ ಅಬುದಲ್ಲಿರುವ ದಿಲಾವರ್ ದೇವಾಲಯ, ವಿಮಲಾ ವಸಾಯಿ, ಲುನಾ ವಸಾಯಿ ದೇವಾಲಯಗಳು ಸುಂದರ ಕಲಾತ್ಮಕತೆಯಿಂದ ಕೂಡಿವೆ. ಚಂದೇಲರು ಮಧ್ಯಪ್ರದೇಶದ ಖಜುರಾಹೋದ ಖಂಡರಾಯ ಮಹಾದೇವಾಲಯವನ್ನು ಕಟ್ಟಿಸಿದರು. ಇವರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳಲ್ಲಿ ಶಿವ ಮತ್ತು ವಿಷ್ಣುವಿನ ಮಂದಿರಗಳು ಹೆಚ್ಚಾಗಿವೆ. ರಜಪೂತ ಅರಸರು ಚಿತ್ರಕಲೆಗೂ ಪ್ರೋತ್ಸಾಹ ನೀಡಿದರು. ಚಿತ್ರಕಲಾ ಶೈಲಿಯನ್ನು ರಾಜಸ್ತಾನಿ ಕಲಾಶೈಲಿ ಮತ್ತು ಪಹಾರಿ ಕಲಾಶೈಲಿಯೆಂದು ವರ್ಗೀಕರಿಸಲಾಗಿದೆ. ಮೇವಾರ್, ಬುಕಾನೇರ್, ಜೋಧ್‌ಪುರ, ಜೈಸಲ್ಮೇರ್ ಮತ್ತು ಬುನಿಗಳಲ್ಲಿ ರಾಜಾಸ್ತಾನಿ ಶೈಲಿಯ ಚಿತ್ರಕಲೆಗಳನ್ನು ಕಾಣಬಹುದಾಗಿದೆ. ಬಸೋಲಿ, ಜಮ್ಮು, ಗರ್ವಾಲ್‌ಗಳಲ್ಲಿ ಪಹಾರಿ ಕಲಾಶೈಲಿಯ ಚಿತ್ರಕಲೆಗಳನ್ನು ಕಾಣಬಹುದಾಗಿದೆ. ಹೀಗೆ ಭಾರತದ ಕಲೆ ಮತ್ತು ವಾಸ್ತುಶಿಲ್ಪಗಳ ಚರಿತ್ರೆಯಲ್ಲೂ ರಜಪೂತರಿಗೆ ವಿಶೇಷ ಸ್ಥಾನವಿದೆ.

**7. ಪೃಥ್ವಿರಾಜ್ ಚೌವ್ಹಾಣನ ಸಾಹಸದ ಬಗ್ಗೆ ತಿಳಿಸಿ.**

ಪರಾಕ್ರಮಿಯಾಗಿದ್ದ ಪೃಥ್ವಿರಾಜನು ಬಂದೇಲ ಖಂಡದ ಚಂದೇಲರನ್ನು ಸೋಲಿಸಿ ಮಹೇಬ ಮತ್ತು ಕಾಲಿಂಜರ್‌ಗಳನ್ನು ವಶಪಡಿಸಿಕೊಂಡನು. ಘೋರ್ ಸಾಮ್ರಾಜ್ಯವನ್ನು ಸಿಂಧ್‌ಪ್ರಾಂತ್ಯದ ಕಡೆಗೆ ವಿಸ್ತರಿಸಬೇಕೆಂದಿದ್ದ ಘೋರಿಮಹಮ್ಮದ್‌ನನ್ನು ಎದುರಿಸಿದ ಪೃಥ್ವಿರಾಜ ತರೈನ್ ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಮಹಮ್ಮದ್‌ನನ್ನು ಸೋಲಿಸಿ ಓಡಿಸಿದನು. ಈ ಯುದ್ಧದಲ್ಲಿ ಗಾಯಗೊಂಡ ಮಹಮ್ಮದ್ ಘೋರ್‌ಗೆ ಮರಳಿದ ನಂತರ ಮರುವರ್ಷ ಮತ್ತೆ ದೆಹಲಿಯ ಕಡೆಗೆ ದಂಡೆತ್ತಿ ಬಂದು ಹಿಂದೆ ಯುದ್ಧ ನಡೆದಿದ್ದ ತರೈನ್‌ನಲ್ಲಿಯೇ ಪೃಥ್ವಿರಾಜನನ್ನು ಸೋಲಿಸಿದನು. ಅದರೂ ಪೃಥ್ವಿರಾಜ ರಜಪೂತರ ಶೌರ್ಯ ಪರಾಕ್ರಮಗಳ ಪ್ರತೀಕವಾಗಿದ್ದಾನೆ.

**ಅಧ್ಯಾಯ-3**

# ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು

**. ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಶಂಕರಾಚಾರ್ಯರು ಕೇರಳದ ____________ಲ್ಲಿ ಜನಿಸಿದರು.
2. ಜಗತ್ತು ಮಾಯೆ, ಬ್ರಹ್ಮ ಮಾತ್ರ ಸತ್ಯ ಎಂದು ಪ್ರತಿಪಾದಿಸಿದವರು ______________
3. ರಾಮಾನುಜಾಚಾರ್ಯರ ಶಿಷ್ಯರನ್ನು ___________ ಎಂದು ಕರೆಯಲಾಗಿದೆ.
4. ದ್ವೈತ ಸಿದ್ಧಾಂತದ ಪ್ರತಿಪಾದಕರು _____________
5. ರಾಮಾನುಜಾಚಾರ್ಯರನ್ನು ಆಸ್ಥಾನಕ್ಕೆ ಆಹ್ವಾನಿಸಿದ ಹೊಯ್ಸಳ ದೊರೆ _________
6. _______ ರು ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿದರು.

**ಉತ್ತರಗಳು:- (1) ಕಾಲಟಿ (2) ಶಂಕರಾಚಾರ್ಯರು (3) ಶ್ರೀ ವೈಷ್ಣವರು (4) ಮಧ್ವಾಚಾರ್ಯರು (5) ವಿಷ್ಣುವರ್ಧನ (6) ಬಸವೇಶ್ವರ**

**ಕೆಳಕಂಡ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

**1. ಅದ್ವೈತ ಸಿದ್ಧಾಂತವನ್ನು ಕುರಿತು ವಿವರಿಸಿ.**

'ಅದ್ವೈತ' ಎಂದರೆ ಏಕ ಅಥವಾ ಒಂದೇ ಎಂದರ್ಥ. ಇದರ ಪ್ರಕಾರ ಜೀವಾತ್ಮ ಮತ್ತು ಪರಮಾತ್ಮ ಬೇರೆಬೇರೆಯಲ್ಲ. ಎರಡೂ ಒಂದೇ. ಬ್ರಹ್ಮನೊಬ್ಬನೆ ಸತ್ಯ, ಉಳಿದ ಜಗತ್ತು ಮಿಥ್ಯ. ಜಗತ್ತು ಒಂದು ಮಾಯೆ. ಬ್ರಹ್ಮ ಮಾತ್ರ ಸತ್ಯ. ಜ್ಞಾನಮಾರ್ಗದಿಂದ ನಾವು ಪ್ರಪಂಚದ ಮಾಯೆಯನ್ನು ತಿಳಿದು ಪರಮ ಸತ್ಯವಾದ ಬ್ರಹ್ಮನೊಡನೆ ನಮ್ಮ ಜೀವಾತ್ಮವನ್ನು ವಿಲೀನಗೊಳಿಸಬೇಕು. ಆಗ ಮಾತ್ರ ಎಲ್ಲರಿಗೂ ಮೋಕ್ಷ ಪ್ರಾಪ್ತಿ ಸಾಧ್ಯ. ಇದೇ ಅದ್ವೈತ ಸಿದ್ಧಾಂತ.

**2. ರಾಮಾನುಜಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ ಯಾವುದು? ಅವರ ಮತವನ್ನು ಏನೆಂದು ಕರೆಯಲಾಗಿದೆ?**

ರಾಮಾನುಜಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ "ವಿಶಿಷ್ಟಾದ್ವೈತ". ಅವರ ಮತವನ್ನು ಶ್ರೀ ವೈಷ್ಣವ ಮತ ಎಂದು ಕರೆಯಲಾಗಿದೆ.

**3. ರಾಮಾನುಜಾಚಾರ್ಯರ ಸಿದ್ಧಾಂತದ ಸಾರವನ್ನು ವಿವರಿಸಿ.**

ರಾಮಾನುಜಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತವನ್ನು "ವಿಶಿಷ್ಟಾದ್ವೈತ" ಎಂದು ಕರೆಯಲಾಗುವುದು. ಇದರ ಪ್ರಕಾರ ಜೀವ ಮತ್ತು ಪ್ರಕೃತಿ ಬ್ರಹ್ಮನ ಅಧೀನ. ಆತ್ಮ ಮತ್ತ ಪರಮಾತ್ಮ ಏಕಕಾಲದಲ್ಲಿ ಒಂದಾಗಲು ಸಾಧ್ಯವಿಲ್ಲವೆಂದು ತಿಳಿಸಿದರು. ಜಗತ್ತು ಬ್ರಹ್ಮನ ವ್ಯಕ್ತಗೊಂಡ ರೂಪವೆಂದು ಮತ್ತು ಜಗತ್ತು ಇಹಸತ್ಯವೆಂದು ಪ್ರತಿಪಾದಿಸಿದರು. ಮುಕ್ತಿ ಸಾಧನೆಗೆ ಭಕ್ತಿ ಮತ್ತು ಪ್ರಪತ್ತಿ (ಅತೀವ ಶರಣಾಗತ ಭಕ್ತಿ) ಬಹಳ ಮುಖ್ಯವೆಂದು ತಿಳಿಸಿದರು. ಜಾತಿವಾದವನ್ನು ಖಂಡಿಸಿದ ರಾಮಾನುಜರು ಭಕ್ತಿ ತತ್ವವನ್ನು ಎಲ್ಲಾ ಜಾತಿಯ ಜನರಿಗೂ ಉಪದೇಶಿಸಿದರು. ಆಸೆಗಳಿಂದ ದೂರಾಗಿ ಆತ್ಮ ಪರಿಶುದ್ಧತೆಯಿಂದ ಭಗವಂತನಿಗೆ ಶರಣಾಗಬೇಕೆಂದು ತಿಳಿಸಿದರು. ಹೀಗೆ ಮೋಕ್ಷ ಸಾಧನೆಗಾಗಿ ಭಕ್ತಿಮಾರ್ಗವನ್ನು ಪ್ರತಿಪಾದಿಸಿದರು.

**4. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಗಳಾವುವು?**

ಮಧ್ವಾಚಾರ್ಯರು 'ದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದರು. ದ್ವೈತ ಎಂದರೆ ಎರಡು ಎಂದರ್ಥ. ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆ ಎಂಬುದೇ ದ್ವೈತದ ಅರ್ಥ.

ಮಧ್ವಾಚಾರ್ಯರ ಪ್ರಕಾರ ಜಗತ್ತು ಮಾಯೆಯಲ್ಲ. ಅದು ಪರಮಾತ್ಮನಷ್ಟೇ, ಸತ್ಯವಾಗಿದೆ. ಇವುಗಳಲ್ಲಿ ಈಶ್ವರ ಮಾತ್ರ ಸ್ವತಂತ್ರ. ಉಳಿದ ಜಗತ್ತು ಮಿಥ್ಯೆ (ಭ್ರಮೆ) ರೂಪವಾದದ್ದು. ಪರಮಾತ್ಮನಿಗೂ,ಜೀವಿಗಳಿಗೂ ಸ್ವಾಮಿ-ಸೇವಕ ಸಂಬಂಧವಿದೆ. ವಿಷ್ಣು ಅಥವಾ ನಾರಾಯಣ ಒಬ್ಬನೇ ಸರ್ವೋತ್ತಮ. ವಿಷ್ಣುವನ್ನು ಭಕ್ತಿಯಿಂದು ಪೂಜಿಸುವುದರಿಂದ ಆತ್ಮೋದ್ಧಾರ ಅಥವಾ ಮುಕ್ತಿ ಸಾಧ್ಯವೆಂದು ತಿಳಿಸಿದರು.

**5. ಬಸವೇಶ್ವರರ ಕಾಯಕ ತತ್ವದ ಬಗ್ಗೆ ಬರೆಯಿರಿ.**

ಬಸವೇಶ್ವರರು 'ಕಾಯಕ ತತ್ವ' ವನ್ನು ಪ್ರತಿಪಾದಿಸಿದರು. ಅಂದರೆ ಪ್ರತಿಯೊಬ್ಬರೂ ದುಡಿದು ತಿನ್ನಬೇಕು ಎನ್ನುವ ಸ್ವಾವಲಂಬನೆ ತತ್ವವನ್ನು ಪ್ರತಿಪಾದಿಸಿದ ಬಸವೇಶ್ವರರು ವೃತ್ತಿಯಲ್ಲಿ ಹಿರಿದು ಕಿರಿದು ಎಂಬುದಿಲ್ಲ ಎಂದು ಸಾರಿದರು. ತಮ್ಮ ಕಾಯಕ ತತ್ವದ ಮುಖಾಂತರ ಜನರಲ್ಲಿ ದುಡಿಮೆ ಸಂಸ್ಕೃತಿಯನ್ನು ಬೆಳೆಸಿದರು.

**6. ಅನುಭವ ಮಂಟಪವನ್ನು ಯಾರು ಪ್ರಾರಂಭಿಸಿದರು? ಅದರ ಉದ್ದೇಶಗಳಾವುವು?**

ಬಸವೇಶ್ವರರು ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ 'ಅನುಭವ ಮಂಟಪ' ವನ್ನು ಪ್ರಾರಂಭಿಸಿದರು.

**ಇದರ ಉದ್ದೇಶಗಳು-**

- ಎಲ್ಲ ಶಿವಶರಣರು ಸಾಮಾಜಿಕ ಸಮಸ್ಯೆಗಳಾದ ಜಾತಿ ಮತ್ತು ಲಿಂಗ ತಾರತಮ್ಯ ಸಮಸ್ಯೆಗಳನ್ನು ಚರ್ಚಿಸುವುದು.
- ಅವುಗಳಿಗೆ ಚಿಕಿತ್ಸಕ ಸಂದೇಶಗಳ ಮೂಲಕ ಪರಿಹಾರವನ್ನು ಸೂಚಿಸುವುದು.
- ಇಷ್ಟೇ ಅಲ್ಲದೆ ಆಧ್ಯಾತ್ಮಿಕ ವಿಚಾರಗಳನ್ನು ಇಲ್ಲಿ ಚರ್ಚಿಸಿ ಶರಣರ ಆಧ್ಯಾತ್ಮಿಕ ಚಿಂತನೆಗಳು ಅವರ ನಡೆ ಮತ್ತು ನುಡಿಯ ಮೂಲಕ ಬಂದ ಅಂಶಗಳಾಗಿ ವಚನಗಳ ರೂಪಗಳಾಗಿ ಹೊರಹೊಮ್ಮಿಸುವುದು.
- ಸಾಮಾನ್ಯ ಜನರಿಗೂ ಅರ್ಥವಾಗುವಂತಿರುವ ವಚನಗಳಲ್ಲಿ ತಮ್ಮ ಚಳವಳಿಯನ್ನು ಜನಮುಖಿಯಾಗಿಸುವುದು.
- ಜಾತಿ ಭೇದವಿಲ್ಲದೆ ಅವರ ಅನುಯಾಯಿಗಳು ಒಗ್ಗೂಡಿಸುವುದು.

**7. ಶಂಕರಾಚಾರ್ಯರು ರಚಿಸಿದ ಗ್ರಂಥಗಳನ್ನು ಹೆಸರಿಸಿ.**

ಶಂಕರಾಚಾರ್ಯರು ರಚಿಸಿದ ಗ್ರಂಥಗಳೆಂದರೆ- ಶಂಕರಭಾಷ್ಯ, ಆನಂದಲಹರಿ, ಸೌಂದರ್ಯ ಲಹರಿ, ಶಿವಾನಂದ ಲಹರಿ, ವಿವೇಕ ಚೂಡಾಮಣಿ, ಪ್ರಬುದ್ಧ ಸುಧಾಕರ ಹಾಗೂ ದಕ್ಷಿಣಾಮೂರ್ತಿ ಸ್ತೋತ್ರ. ಶಂಕರರ ಭಜಗೋವಿಂದಂ" ಸ್ತೋತ್ರವು ಅತ್ಯಂತ ಜನಪ್ರಿಯವಾಗಿದೆ.

**ಅಧ್ಯಾಯ-4**

## ವಿಜಯನಗರ ಮತ್ತು ಬಹಮನಿ ರಾಜ್ಯ

**. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದ ವರ್ಷ ________

SS STF DIGITAL GROUP

2. ಮಧುರಾ ವಿಜಯ ಬರೆದ ಕವಯತ್ರಿ ___________
3. ಪ್ರೌಢದೇವರಾಯನ ಮಂತ್ರಿ ______________
4. ಅಮುಕ್ತ ಮಾಲ್ಯದ ಕೃತಿಯನ್ನು ತೆಲುಗಿನಲ್ಲಿ ರಚಿಸಿದ ದೊರೆ _____________ .
5. ಬೀದರಿನಲ್ಲಿ ಮದರಸವನ್ನು ಕಟ್ಟಿಸಿದವನು ____________ .
6. ಕಿತಾಬ್ ಏ ನವರಸ ಗ್ರಂಥವನ್ನು ಬರೆದವನು __________

**ಉತ್ತರಗಳು:- (1) ಸಾ.ಶ 1336 (2) ಗಂಗಾದೇವಿ (3) ಲಕ್ಕಣ್ಣ ದಂಡೇಶ (4) ಶ್ರೀ ಕೃಷ್ಣದೇವರಾಯ (5) ಮೊಹಮ್ಮದ್ ಗವಾನ್ (6) 2ನೇ ಇಬ್ರಾಹಿಂ ಆದಿಲ್ ಷಾ**

**ಋ. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

**1. ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜ ಮನೆತನಗಳನ್ನು ಹೆಸರಿಸಿ.**

ವಿಜಯನಗರವನ್ನು ಆಳಿದ ನಾಲ್ಕು ಮನೆತನಗಳೆಂದರೆ- ಸಂಗಮ, ಸಾಳ್ವ, ತುಳುವ, ಅರವೀಡ.

**2. ಎರಡನೆಯ ದೇವರಾಯನ ಸಾಧನೆಗಳೇನು?**

- ಸಂಗಮ ವಂಶದಲ್ಲಿಯೇ ಶ್ರೇಷ್ಠ ದೊರೆ ಎರಡನೆಯ ದೇವರಾಯನಿಗೆ 'ಗಜ ಬೇಂಟೆಕಾರ' ಎಂಬ ಬಿರುದು ಇತ್ತು. ಎರಡನೆಯ ದೇವರಾಯನು ಒರಿಸ್ಸಾದ ಗಜಪತಿ ಕಪಿಲೇಂದ್ರನನ್ನು ಸೋಲಿಸಿ ಕೊಂಡವೀಡನ್ನು ಗೆದ್ದುಕೊಂಡನು.
- ಗಡಿ ಪ್ರದೇಶದ ನಾಯಕರುಗಳನ್ನು ಅಡಗಿಸಿ ಈಶಾನ್ಯ ಗಡಿಯನ್ನು ಕೃಷ್ಣಾನದಿಯವರೆಗೂ ವಿಸ್ತರಿಸಿದ.
- ನಂತರ ಕೇರಳವನ್ನು ಗೆದ್ದು, ಕೇರಳ, ಶ್ರೀಲಂಕಾದಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿದನು. ಇದರಿಂದ "ದಕ್ಷಿಣಾಪಥದ ಚಕ್ರವರ್ತಿ" ಎನಿಸಿದ.
- ಈ ವಿಜಯಗಳಿಂದ ವಿಜಯನಗರ ಸಾಮ್ರಾಜ್ಯ ಸಿಂಹಳದ ಗಡಿಗಳಿಂದ ಗುಲ್ಬರ್ಗದವರೆಗೆ ಮತ್ತು ತೆಲಂಗಾಣ, ಮಲಬಾರ್‌ಗಳಿಗೆ ವಿಸ್ತರಿಸಿಕೊಂಡಿತು.
- ನ್ಯೂನಿಜ್‌ನ ಪ್ರಕಾರ ಪ್ರೌಢದೇವರಾಯನಿಗೆ ಸಿಲೋನ್, ಪುಲಿಕಾಟ್, ಪೆಗು, ತೆನಾಸ್ಸೆರಿಂ (ಬರ್ಮಾ ಭಾಗ) ಮತ್ತು ಮಲಯದ ರಾಜರು ಕಪ್ಪಕಾಣಿಕೆಗಳನ್ನು ನೀಡುತ್ತಿದ್ದರು.
- ಸಾಂಪ್ರದಾಯಿಕ ಶತ್ರುಗಳಾದ ಬಹಮನಿ ಅಹಮದ್ ಷಾನನ್ನು ಬಿಜಾಪುರದವರೆಗೆ ಹಿಮ್ಮೆಟ್ಟಿಸಿ ಮುದಗಲ್ ಮತ್ತು ಬಂಕಾಪುರವನ್ನು ತನ್ನ ಸ್ವಾಧೀನ ಮಾಡಿಕೊಂಡನು.
- ಎರಡನೇ ದೇವರಾಯನ ದಳಪತಿಯಾದ ಲಕ್ಕಣ್ಣದಂಡೇಶನು ಒಂದು ನೌಕಾ ವಿಜಯಯಾತ್ರೆಯನ್ನು ಕೈಗೊಂಡು ಯಶಸ್ವಿಯಾದನು.

**3. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ಎದುರಿಸಿದ ಸಮಸ್ಯೆಗಳನ್ನು ತಿಳಿಸಿ.**

ಕೃಷ್ಣದೇವರಾಯ ಪಟ್ಟಕ್ಕೆ ಬಂದಾಗ ರಾಜ್ಯದ ಒಳ ಹಾಗೂ ಹೊರಗೆ ಜಟಿಲವಾದ ಸಮಸ್ಯೆಗಳಿದ್ದವು.

- ಹೊಸ ಜಲಮಾರ್ಗಗಳ ಮೂಲಕ ಆಗಮಿಸಿದ ಐರೋಪ್ಯರು ಇಲ್ಲಿ ನೆಲೆಗಳನ್ನು ಸ್ಥಾಪಿಸಲು ಆರಂಭಿಸಿದರು.
- ಬಹಮನಿ ರಾಜ್ಯದ ಐದು ಷಾಹಿ ರಾಜ್ಯಗಳು ಸುಲ್ತಾನರಾಗಿ ಹೊಸ ರೂಪ ಪಡೆದುಕೊಂಡು ಕೃಷ್ಣದೇವರಾಯನ ವಿರುದ್ಧ ಕದನಕ್ಕಿಳಿದರು.
- ಜೊತೆಗೆ ಉಮ್ಮತ್ತೂರು ಹಾಗೂ ಒರಿಸ್ಸಾದ ಅರಸರು ವಿಜಯನಗರದ ಮೇಲೆ ಹಗೆತನವನ್ನು ಸಾಧಿಸುತ್ತಲೇ ಇದ್ದರು.

**4. ಅರ್ಥವ್ಯವಸ್ಥೆ ಮತ್ತು ಸಮಾಜಕ್ಕೆ ವಿಜಯನಗರದ ಕೊಡುಗೆಗಳೇನು?**

**ಅರ್ಥವ್ಯವಸ್ಥೆ:-** ಭೂ ಕಂದಾಯ ರಾಜ್ಯದ ಆದಾಯದ ಪ್ರಮುಖ ಮೂಲವಾಗಿತ್ತು. ಕೃಷಿಕರು ಸಾಮಾನ್ಯವಾಗಿ ತಮ್ಮ ಉತ್ಪಾದನೆಯ ನಾಲ್ಕನೆಯ ಒಂದು $\frac{1}{4}$ ಭಾಗವನ್ನು ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಕೊಡುತ್ತಿದ್ದರು. ವೃತ್ತಿ ತೆರಿಗೆ, ಮನೆ ಕಂದಾಯ, ದಾರಿ ಸುಂಕ, ಸಂತೆ ಸುಂಕ, ವಾಣಿಜ್ಯ ತೆರಿಗೆ, ಆಮದು ಮತ್ತು ರಫ್ತು ತೆರಿಗೆಗಳು, ಸಾಮಂತರಿಂದ ಬರುವ ಕಪ್ಪಕಾಣಿಕೆಗಳು ರಾಜ್ಯದ ಇತರ ಆದಾಯದ ಮೂಲಗಳಾಗಿದ್ದವು. ಕೃಷಿ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿತ್ತು.

**ಸಾಮಾಜಿಕ ವ್ಯವಸ್ಥೆ :** ಸಮಾಜವು ಚಾತುರ್ವರ್ಣ ವ್ಯವಸ್ಥೆಯ ಮೇಲೆ ರೂಪುಗೊಂಡಿತ್ತು. ಹೀಗಿದ್ದರೂ ಅನೇಕ ವೃತ್ತಿ ಆಧಾರಿತ ಜಾತಿವ್ಯವಸ್ಥೆ ಜಾರಿಯಲ್ಲಿತ್ತು. ಕುಶಲ ಕಲೆಗಾರರು, ಕಮ್ಮಾರರು, ಅಕ್ಕಸಾಲಿಗರು, ಕಂಚುಗಾರರು, ಬಡಗಿಗಳು, ನೇಕಾರರು, ಸಮಗಾರರು (ಚಮ್ಮಾರರು) ಅಧಿಕ ಸಂಖ್ಯೆಯಲ್ಲಿದ್ದರು. ಬಾಲ್ಯವಿವಾಹ, ಸಹಗಮನ ಮತ್ತು ದೇವದಾಸಿ ಪದ್ಧತಿಗಳು ರೂಢಿಯಲ್ಲಿದ್ದವು. ಸಾಮಾನ್ಯವಾಗಿ ಏಕಪತ್ನಿತ್ವ ರೂಢಿಯಲ್ಲಿದ್ದರೂ, ದೊರೆಗಳು ಮತ್ತು ಶ್ರೀಮಂತರು ಬಹುಪತ್ನಿಯರನ್ನು ಹೊಂದಿರುತ್ತಿದ್ದರು. ವಿಜಯನಗರದಲ್ಲಿ ಸ್ತ್ರೀ ಜಟ್ಟಿಗಳು (ಕುಸ್ತಿಪಟುಗಳು), ಅರಮನೆ ಕಾವಲುಗಾರ್ತಿಯರು ಇದ್ದರು.

**5. ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಬರೆಯಿರಿ.**

ವಿಜಯನಗರದ ಅರಸರ ವಾಸ್ತುಶಿಲ್ಪ ಶೈಲಿಯ ಪ್ರಧಾನ ಲಕ್ಷಣವೆಂದರೆ ಹಲವಾರು ಕಂಭಗಳ ಸಾಲುಗಳಿಂದ ಕೂಡಿದ ವಿಶಾಲ ಸಭಾ ಮಂಟಪ ಅಥವಾ ಕಲ್ಯಾಣ ಮಂಟಪಗಳು. ದೇವಾಲಯಗಳು ಎತ್ತರವಾದ ಗೋಪುರಗಳನ್ನು, (ರಾಯ ಗೋಪುರ) ಹೊಂದಿದ್ದು ಪತ್ರಾಕೃತಿಯ ಕಮಾನುಗಳನ್ನು ಮತ್ತು ಮಂಟಪಗಳನ್ನು

ಹೊಂದಿವೆ. ಈ ಕಲೆಯಲ್ಲಿ ಅಲಂಕಾರಕ್ಕಿಂತ ಭವ್ಯತೆ, ರುದ್ರತೆ ಮತ್ತು ಗಾಂಭೀರ್ಯದ ಭಾವನೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇವರು ಕಟ್ಟಡಗಳಿಗೆ ಬಿರುಸಾದ ಕಣಶಿಲೆ ಬಳಸಿದ್ದಾರೆ.

ಇವರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು ಹಂಪೆ, ಶೃಂಗೇರಿ, ತಿರುಪತಿ, ಕಂಚಿ, ಲೇಪಾಕ್ಷಿ, ಕಾರ್ಕಳ, ಮೂಡಬಿದ್ರಿ, ಭಟ್ಕಳ, ಚಿದಂಬರಂ, ಕಾಳಹಸ್ತಿ, ನಂದಿ, ಶ್ರೀಶೈಲ, ಕೋಲಾರ ಮುಂತಾದ ಕಡೆಗಳಲ್ಲಿ ಕಾಣಬಹುದು. ಶೃಂಗೇರಿ ವಿದ್ಯಾಶಂಕರ ದೇವಾಲಯದ ವಿನ್ಯಾಸವು ಭಾರತದಲ್ಲಿಯೇ ಅಪೂರ್ವ ಮಾದರಿಯದಾಗಿದೆ.

ವಿಜಯನಗರದಲ್ಲಿರುವ ಹಂಪಿಯ ವಿರೂಪಾಕ್ಷ ದೇವಾಲಯದ ವಿಶಾಲವಾದ ಪ್ರಾಂಗಣವನ್ನು ಹೊಂದಿರುವ ಇದು ಸೊಗಸಾದ ಕೆತ್ತನೆಯ ಕಂಬಗಳು, ಅಲಂಕೃತ ಚಾವಣಿಗಳನ್ನು ಹೊಂದಿದೆ. ಹಂಪಿಯಲ್ಲಿರುವ ವಿಜಯ ವಿಠ್ಠಲ ದೇವಾಲಯವು ಶೃಂಗಾರಮಯ ಕಲಾತ್ಮಕ ಕೆಲಸಕ್ಕೆ ಹೆಸರಾಗಿದೆ. ಸಪ್ತಸ್ವರಗಳನ್ನು ಧ್ವನಿಸುವ ಕಂಭಗಳು, ವಿಶಾಲವಾದ ಕಲ್ಯಾಣಮಂಟಪಗಳು, ಕಲ್ಲಿನಲ್ಲಿ ಕೆತ್ತಿದ ರಥ ಈ ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ. ಲಕ್ಷ್ಮೀನರಸಿಂಹ, ಕಡಲೆಕಾಳು ಗಣೇಶ, ಸಾಸಿವೆಕಾಳು ಗಣೇಶ, ಉದ್ಧಾನ ವೀರಭದ್ರನ ಶಿಲ್ಪಗಳು ಆಕರ್ಷಕವಾಗಿವೆ.

**6. ಮಹಮ್ಮದ್ ಗವಾನನು ಬಹಮನಿ ರಾಜ್ಯದಲ್ಲಿ ಉತ್ತಮ ಪ್ರಧಾನಮಂತ್ರಿ ಹೇಗೆ ಎಂದು ಪರಿಗಣಿಸುವಿರಿ?**

ಮಹಮ್ಮದ್ ಗವಾನನು ನಿಷ್ಠೆ, ನಿಸ್ವಾರ್ಥತೆಯಿಂದ ಆಳ್ವಿಕೆ ನಡೆಸಿದನು. ಪ್ರಧಾನ ಮಂತ್ರಿಯಾಗಿ ಬಹಮನಿ ರಾಜ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದನು. ಕೈರೋದಲ್ಲಿ ಇಸ್ಲಾಂ ಮತಶಾಸ್ತ್ರ ಮತ್ತು ಕಾನೂನು ಅಭ್ಯಸಿಸಿ, ಅರಬ್ಬೀ, ಪಾರಸೀ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದನು. ಬಹಮನಿ ಸುಲ್ತಾನರಾದ ಹುಮಾಯೂನ್, ನಿಜಾಂಷಾ ಹಾಗೂ ಮೂರನೇ ಮಹಮದ್‌ಷಾನ ಆಳ್ವಿಕೆಯ ಕಾಲದಲ್ಲಿ ಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದನು. ಇವನು ತನ್ನ ದಿಗ್ವಿಜಯಗಳು ಹಾಗೂ ಅಚ್ಚುಕಟ್ಟಾದ ಆಡಳಿತ ಕ್ರಮದಿಂದ ಬಹಮನಿ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದನು. ಗವಾನನು ಕೊಂಕಣ, ಗೋವ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡನು. ನಂತರ ಓರಿಸ್ಸಾದ ಮೇಲೆ ದಾಳಿ ಮಾಡಿ, ಅಲ್ಲಿಂದ ಕೊಂಡವೀಡು ಪ್ರದೇಶವನ್ನು ವಶಪಡಿಸಿಕೊಂಡನು. ಸಾ.ಶ. 1481ರಲ್ಲಿ ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ಹೀಗೆ ಮಹಮ್ಮದ್ ಗವಾನ್ ಉತ್ತಮ ಪ್ರಧಾನ ಮಂತ್ರಿಯಾಗಿ ಬಹಮನಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣನಾದನು.

**7. ಬಹಮನಿ ಸುಲ್ತಾನರ ಆಡಳಿತ, ಕಂದಾಯ ವ್ಯವಸ್ಥೆಯನ್ನು ತಿಳಿಸಿ.**

**ಆಡಳಿತ:** ಆಡಳಿತದಲ್ಲಿ ಕೇಂದ್ರ, ಪ್ರಾಂತೀಯ ಹಾಗೂ ಗ್ರಾಮ ಆಡಳಿತವೆಂಬ ಮೂರು ಭಾಗಗಳಿದ್ದವು. ಇವುಗಳಲ್ಲಿ ಕಂದಾಯ ನ್ಯಾಯ ಮತ್ತು ಸೈನ್ಯ ಆಡಳಿತಗಳಿದ್ದವು. ಕೇಂದ್ರ ಸರ್ಕಾರದಲ್ಲಿ ಸುಲ್ತಾನನೇ ಆಡಳಿತದ ಮುಖ್ಯಸ್ಥನಾಗಿರುತ್ತಿದ್ದ. ಮಂತ್ರಿಮಂಡಲಕ್ಕೆ 'ಮಜ್ಲಿಸ್-ಇ-ಇಲ್ವತ್' ಎಂದು ಕರೆಯುತ್ತಿದ್ದರು. ಉನ್ನತ ಅಧಿಕಾರಿಗಳು, ದಂಡನಾಯಕರು, ಉಲೇಮರು, ಅಮೀರರು ಸುಲ್ತಾನನ ಆಪ್ತರು ಮತ್ತು ಸಂಬಂಧಿಗಳು ಆಗಿದ್ದರು.

ಗವಾನನು ರಾಜ್ಯದಲ್ಲಿ ಹಿಂದೆ ಇದ್ದ ನಾಲ್ಕು ತರಫ್ (ಪ್ರಾಂತ) ಗಳನ್ನು ಎಂಟು ಘಟಕಗಳಾಗಿ ವಿಂಗಡಿಸಿದನು. ಹಾಗೆಯೆ ಪ್ರಾಂತಗಳನ್ನು 15 ಸರ್ಕಾರಗಳಾಗಿ ವಿಂಗಡಿಸಲಾಗಿತ್ತು. ಸುಭೇದಾರ ಎಂಬ ಅಧಿಕಾರಿಯು ಸರ್ಕಾರಗಳಲ್ಲಿ ಮುಖ್ಯ ಆಡಳಿತಾಧಿಕಾರಿಯಾಗಿದ್ದನು. ಸರ್ಕಾರಗಳನ್ನು ಪರಗಣಗಳಾಗಿ ವಿಂಗಡಿಸಲಾಗಿತ್ತು. ಕೊತ್ವಾಲ್, ದೇಶಮುಖ ಮತ್ತು ದೇಸಾಯಿ ಎಂಬ ಅಧಿಕಾರಿಗಳು ಪರಗಣದ ಅಧಿಕಾರಿಗಳಾಗಿದ್ದರು. ಆಡಳಿತದ ಕೊನೆಯ ಘಟಕವಾದ ಗ್ರಾಮಗಳಲ್ಲಿ ಪಟೇಲ, ಕುಲಕರ್ಣಿ ಮತ್ತು ಕಾವಲುಗಾರ ಎಂಬ ಅಧಿಕಾರಿಗಳಿದ್ದರು. ಗ್ರಾಮಾಡಳಿತ ಘಟಕಗಳು ಸ್ವಾಯತ್ತ ಸಂಸ್ಥೆಯಾಗಿದ್ದವು.

**ಕಂದಾಯ:-** ಅಮೀರ್-ಏ-ಜುಮ್ಲಾರು ಕಂದಾಯದ ಮುಖ್ಯಸ್ಥರಾಗಿದ್ದರು. ಭೂಕಂದಾಯವು ರಾಜ್ಯಾದಾಯದ ಮೂಲವಾಗಿತ್ತು. ಉತ್ಪತ್ತಿಯ $\frac{1}{3}$ ರಿಂದ $\frac{1}{2}$ ನೇ ಭಾಗದಷ್ಟನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು. ಮನೆ, ಗಣಿ, ಹೊಗೆಸೊಪ್ಪು, ಹುಲ್ಲುಗಾವಲು, ವ್ಯಾಪಾರ, ವೃತ್ತಿ ಸೇರಿದಂತೆ 50 ಬಗೆಯ ತೆರಿಗೆಗಳಿದ್ದವು.

**8. ಬಹಮನಿ ಸುಲ್ತಾನರ ಕಾಲದ ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.**

**ಶಿಕ್ಷಣ:-** ಮಕ್ತಬ ಎಂಬ ಶಾಲೆಗಳಿದ್ದವು. ಇವು ಮಸೀದಿಗಳ ನಿಯಂತ್ರಣದಲ್ಲಿದ್ದವು. ಮಕ್ತಬಗಳಲ್ಲಿ ಅಕ್ಷರ ಜ್ಞಾನ, ಮತ, ಕಾನೂನು, ಕಾವ್ಯ, ಅಲಂಕಾರಶಾಸ್ತ್ರಗಳನ್ನು ಬೋಧಿಸುತ್ತಿದ್ದರು. ಮದರಸಾಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದವು. ಮಹಮ್ಮದ್ ಗವಾನ್ ಬೀದರ್‌ನಲ್ಲಿ ಮದರಸ (ಮಹಾವಿದ್ಯಾಲಯ) ವನ್ನು ಸ್ಥಾಪಿಸಿದನು. ಇದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಸಾಂಪ್ರದಾಯಿಕ ವ್ಯಕ್ತಿಗಳಿಗೆ ತಂಗುದಾಣವೂ ಆಗಿತ್ತು. ಇಲ್ಲಿ ಖಗೋಳಶಾಸ್ತ್ರ, ವ್ಯಾಕರಣ, ಗಣಿತ, ತತ್ವಶಾಸ್ತ್ರ, ಇತಿಹಾಸ, ರಾಜನೀತಿಗಳ ಅಧ್ಯಯನ ನಡೆಯುತ್ತಿತ್ತು.

**ಕಲೆ ಮತ್ತು ವಾಸ್ತುಶಿಲ್ಪ:-** ಸುಲ್ತಾನರು ಇಂಡೋ ಸಾರ್ಸನಿಕ್ ಶೈಲಿಯ ವಾಸ್ತುಶಿಲ್ಪ ಬೆಳೆಸಿದರು. ಒಂದನೆಯ ಅಲಿ ಆದಿಲ್ ಶಹನು ನಿರ್ಮಾಣ ಮಾಡಿದ ಜಾಮಿಯ ಮಸೀದಿಯು ಈ ಕಾಲದ ಒಂದು ಮುಖ್ಯ ಸ್ಮಾರಕವಾಗಿದೆ. ಇಬ್ರಾಹಿಂ ರೋಜಾ, ಗೋಲಗುಂಬಜ್, ಗಗನ್‌ಮಹಲ್, ಅಸಾರ್ ಮಹಲ್‌ಗಳು ಇವರ ಪ್ರಮುಖ ಸ್ಮಾರಕಗಳಾಗಿವೆ. ವಿಶ್ವದ ಶ್ರೇಷ್ಠ ಕಟ್ಟಡಗಳಲ್ಲಿ ವಿಜಯಪುರದಲ್ಲಿರುವ ಗೋಲಗುಂಬಜ್ ಒಂದಾಗಿದೆ.

ಅಧ್ಯಾಯ-5

# ಮೊಘಲರು ಮತ್ತು ಮರಾಠರು

. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ಮೊಘಲ್ ಸಾಮ್ರಾಜ್ಯ ಸ್ಥಾಪಕ _____________ .
2. ಮೊಘಲರಲ್ಲಿ ಪ್ರಸಿದ್ಧ ಸುಲ್ತಾನ ____________ .
3. ಆಗ್ರಾದಲ್ಲಿ ತಾಜಮಹಲ್ ಕಟ್ಟಿಸಿದವನು _____________ .
4. ದಿನ್-ಇ-ಇಲಾಹಿ ಹೊಸ ಪಂಥ ಸ್ಥಾಪಿಸಿದ ಮೊಘಲ್ ಸುಲ್ತಾನ _____________ .
5. ಶಿವಾಜಿಯ ತಾಯಿ ಹೆಸರು _____________ .
6. _______ ಆಳ್ವಿಕೆಯ ಕಾಲವನ್ನು ಕಲೆ ಮತ್ತು ವಾಸ್ತುಶಿಲ್ಪದ ಸುವರ್ಣಯುಗ ಎಂದು ಕರೆಯುತ್ತಾರೆ.
7. ಶಿವಾಜಿಯ ಸೈನ್ಯವು _________ ಯುದ್ಧ ತಂತ್ರದಲ್ಲಿ ಪರಿಣಿತಿ ಹೊಂದಿತ್ತು.

**ಉತ್ತರಗಳು:- (1) ಬಾಬರ್ (2) ಅಕ್ಬರ್ (3) ಷಹಜಹಾನ್ (4) ಅಕ್ಬರ್ (5) ಜೀಜಾಬಾಯಿ (6) ಷಹಜಹಾನ್ (7) ಗೆರಿಲ್ಲಾ**

**. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಬಾಬರನ ಸೈನಿಕ ಸಾಧನೆ ವಿವರಿಸಿರಿ.**

- ಬಾಬರನು ಐದು ಬಾರಿ ದಾಳಿ ಮಾಡಿದನು. ಸಾ.ಶ.1526ರಲ್ಲಿ ನಡೆದ ಮೊದಲನೆಯ ಪಾಣಿಪತ್ ಯುದ್ಧದಲ್ಲಿ ದೆಹಲಿ ಸುಲ್ತಾನನಾಗಿದ್ದ ಇಬ್ರಾಹಿಂ ಲೋದಿ ಹಾಗೂ ಆತನ ಆಫ್ಘನ್ ಬೆಂಬಲಿಗರನ್ನು ಸೋಲಿಸಿ ಭಾರತದಲ್ಲಿ ಮೊಘಲರ ಆಳ್ವಿಕೆಗೆ ಅಡಿಪಾಯ ಹಾಕಿದನು.
- ಇವನು ತನ್ನ ನಾಲ್ಕು ವರ್ಷಗಳ ಅವಧಿಯಲ್ಲಿ ಮೇವಾರದ ರಾಣಾ ಸಂಗ್ರಾಮಸಿಂಗ್, ರಜಪೂತ ದೊರೆ ಚಾಂದೇರಿಯ ಮೇದಿನರಾಯ ಹಾಗೂ ಇಬ್ರಾಹಿಂ ಲೋದಿಯ ಸೋದರನಾದ ಮಹಮದ್ ಲೋದಿಯರನ್ನು ಸೋಲಿಸಿದ.
- ಬಾಬರನು ಪಾಣಿಪತ್, ಕಣ್ವ ಮತ್ತು ಗೋಗ್ರ ಎಂಬ ಮೂರು ಯುದ್ಧಗಳನ್ನು ಗೆಲ್ಲುವ ಮೂಲಕ ಉತ್ತರ ಭಾರತದ ವಿಶಾಲವಾದ ಪ್ರದೇಶದಲ್ಲಿ ಮೊಘಲ್ ಸಾಮ್ರಾಜ್ಯವನ್ನು ಸ್ಥಾಪಿಸಿದ.

**2. ಶೇರಷಾನ ಆಡಳಿತ ಪದ್ಧತಿಯ ಮುಖ್ಯ ಗುಣಲಕ್ಷಣಗಳನ್ನು ವಿವರಿಸಿ.**

- ಈತನು ಇಡೀ ಸಾಮ್ರಾಜ್ಯವನ್ನು ಸರ್ಕಾರ್(ಪ್ರಾಂತ್ಯ), ಪರಗಣಗಳನ್ನಾಗಿ ವಿಂಗಡಿಸಿದ್ದನು. ಇವನ ಸೈನ್ಯದಲ್ಲಿ ಕಾಲ್ದಳ, ಅಶ್ವದಳ, ಫಿರಂಗಿದಳ ಹಾಗೂ ಗಜದಳಗಳಿದ್ದವು.
- ಸೈನ್ಯದಲ್ಲಿ ಶಿಸ್ತು ಮೂಡಿಸುವ ಸಲುವಾಗಿ ಸೈನಿಕರ ಹಾಜರಾತಿ ಪುಸ್ತಕ, ಕುದುರೆಗಳಿಗೆ ಮುದ್ರೆ(ದಾಗ್) ಹಾಕುವ

ಪದ್ಧತಿಯನ್ನು ಜಾರಿಗೆ ತಂದನು.

- ಸೈನ್ಯವನ್ನು ಅನೇಕ ಫೌಜಗಳನ್ನಾಗಿ ವಿಂಗಡಿಸಿ ಅವುಗಳ ಮೇಲ್ವಿಚಾರಣೆಗೆ ಫೌಜದಾರ(ದಳಪತಿ)ರನ್ನು ನೇಮಿಸಿದ್ದನು. ಸೈನ್ಯ ಸಂಘಟನೆ, ಯುದ್ಧ ಸಾಮಗ್ರಿಗಳು ಮತ್ತು ಸೈನಿಕರ ಶಿಸ್ತಿನ ವಿಷಯದಲ್ಲಿ ಶೇರ್‌ಷಾ ಸ್ವತಃ ಆಸಕ್ತಿ ವಹಿಸಿದ್ದನು.
- ತನ್ನ ಸಾಮ್ರಾಜ್ಯದಲ್ಲಿ ಬೇಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಅಳತೆ ಮಾಡಿಸಿ ಕಂದಾಯ ನಿಗದಿ ಮಾಡುತ್ತಿದ್ದನು. ಭೂಮಿಯನ್ನು ಅದರ ಫಲವತ್ತತೆಗೆ ಅನುಗುಣವಾಗಿ ಉತ್ತಮ, ಮಧ್ಯಮ ಹಾಗೂ ಕನಿಷ್ಟ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದನು.
- ರೈತರು ತಮ್ಮ ಬೆಳೆಯ ಉತ್ಪಾದನೆಯ ⅓ ಭಾಗವನ್ನು ಭೂಕಂದಾಯವೆಂದು ಸರ್ಕಾರಕ್ಕೆ ನೀಡುತ್ತಿದ್ದರು.
- ಶೇರ್‌ಷಾನು ನಿಷ್ಪಕ್ಷಪಾತವಾದ ನ್ಯಾಯದಾನಕ್ಕೆ ಹೆಸರಾಗಿದ್ದ. ಸುಲ್ತಾನನೇ ಸಾಮ್ರಾಜ್ಯದ ಮುಖ್ಯ ನ್ಯಾಯಾಧೀಶನಾಗಿ ಅಂತಿಮ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದನು.

**3. ಅಕ್ಬರನು ಗೆದ್ದ ರಾಜ್ಯಗಳಾವುವು?**

ಅಕ್ಬರ್ ಮಾಳ್ವ, ಚುನಾರ್, ಜೈಪುರ, ಗೊಂಡವಾನ, ಚಿತ್ತೋರ್, ರಣಥಂಬೋರ್, ಕಾಲಿಂಜರ್, ಗುಜರಾತ್‌ಗಳನ್ನು ನಂತರದಲ್ಲಿ ಬಿಹಾರ, ಬಂಗಾಳ, ಕಾಬೂಲ್, ಕಾಶ್ಮೀರ, ಸಿಂಧ್, ಒರಿಸ್ಸಾ, ಬಲೂಚಿಸ್ತಾನ, ಕಾಂದಹಾರ್ ಹಾಗೂ ಅಹಮದ್‌ನಗರಗಳನ್ನು ಗೆದ್ದು ವಶಪಡಿಸಿಕೊಂಡನು.

**4. ಷಾಜಹಾನನು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ನೀಡಿದ ಕೊಡುಗೆ ವಿವರಿಸಿರಿ.**

- ಮೊಘಲರ ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಪ್ರೋತ್ಸಾಹದಿಂದಾಗಿ ಇವನ ಅವಧಿಯನ್ನು 'ಸುವರ್ಣಯುಗ'ವೆಂದು ಕರೆಯಲಾಗಿದೆ.
- ಷಾಜಹಾನನ ಕಾಲದಲ್ಲಿ ದೆಹಲಿಯಲ್ಲಿ ಕೆಂಪುಕೋಟೆ, ಮೋತಿ ಮಸೀದಿ, ದಿವಾನ್-ಇ-ಆಮ್, ದಿವಾನ್-ಇ ಖಾಸ್, ರಂಗಮಹಲ್, ಖಾಸ್ ಮಹಲ್, ಮುಮತಾಜ್ ಮಹಲ್ ಮುಂತಾದ ಕಟ್ಟಡಗಳನ್ನು ನಿರ್ಮಿಸಲಾಯಿತು.
- ಆಗ್ರಾದ ತಾಜಮಹಲ್ ಹಾಗೂ ಇನ್ನಿತರೆ ಕಟ್ಟಡಗಳು ಇವನ ಮಹತ್ವದ ಕೊಡುಗೆಗಳಾಗಿವೆ.
- ಮಯೂರ ಸಿಂಹಾಸನದ ತಯಾರಿಕೆ (ಏಳು ವರ್ಷಗಳ ಅವಧಿಯಲ್ಲಿ ಅಂದಿನ ಒಂದು ಕೋಟಿ ವೆಚ್ಚ),

- ದೇಶದ ಅತ್ಯಂತ ದೊಡ್ಡದಾದ ಜಾಮಿಯಾ ಮಸೀದಿ ಇವನ ಕಾಲದ ಕೊಡುಗೆಗಳು.
- ಅಲ್ಲದೇ ಲಾಹೋರ್, ಕಾಬೂಲ್, ಕಾಶ್ಮೀರ್, ಕಾಂದಹಾರ್, ಅಜ್ಮೀರ್, ಅಹಮದಾಬಾದ್ ಮುಂತಾದೆಡೆ ಷಾಜಹಾನನ ಕಾಲದ ವಾಸ್ತುಶಿಲ್ಪಗಳು ಕಂಡುಬರುತ್ತವೆ.

**5. ಶಿವಾಜಿಯ ಆಡಳಿತ ವ್ಯವಸ್ಥೆ ವಿವರಿಸಿರಿ.**

- ಶಿವಾಜಿ ತನ್ನ ವಿಶಾಲ ರಾಜ್ಯದಲ್ಲಿ ಉತ್ತಮ ಆಡಳಿತ ಸಂಘಟಿಸಿದ್ದನು. ತನ್ನ ರಾಜ್ಯವನ್ನು ಅನೇಕ ಪ್ರಾಂತಗಳಾಗಿ ವಿಂಗಡಿಸಿದ್ದನು. ಅವುಗಳನ್ನು ಸ್ವರಾಜ್ಯ ಮತ್ತು ಮೊಘಲರ ರಾಜ್ಯಗಳೆಂದು ಕರೆಯುತ್ತಿದ್ದರು.
- ಸರ್ಕಾರದ ಮುಖ್ಯಸ್ಥನಾಗಿದ್ದ ದೊರೆಗೆ ಆಡಳಿತದಲ್ಲಿ ನೆರವು ನೀಡಲು ಅಷ್ಟ ಪ್ರಧಾನರೆಂಬ ಮಂತ್ರಿಗಳಿದ್ದರು. ಜೊತೆಗೆ ಸಹಾಯಕ್ಕಾಗಿ ಇತರೆ ಅಧಿಕಾರಿಗಳಿದ್ದರು.
- ಪ್ರಾಂತ, ಜಿಲ್ಲೆ, ಗ್ರಾಮ ಆಡಳಿತದ ಘಟಕಗಳಾಗಿದ್ದವು.
- **ಕಂದಾಯ ವ್ಯವಸ್ಥೆ:** ಶಿವಾಜಿಯ ಜಾಗೀರುದಾರಿ ಕಂದಾಯ ಪದ್ಧತಿಯನ್ನು ರದ್ದುಪಡಿಸಿದನು.
- ಕಂದಾಯವನ್ನು ಹಣದ ಅಥವಾ ವಸ್ತು ರೂಪದಲ್ಲಿ ನೀಡಬೇಕಿತ್ತು.
- ಚೌತ್ ಹಾಗೂ ಸರದೇಶಮುಖಿಯೆಂಬ ಭೂಕಂದಾಯಗಳಿದ್ದವು.
- **ನ್ಯಾಯಾಂಗ ಪದ್ಧತಿ:** ಶಿವಾಜಿ ಆಡಳಿತದಲ್ಲಿ ಪರಂಪರಾನುಗತ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿತ್ತು.
- ಗ್ರಾಮಗಳಲ್ಲಿ ಪಂಚಾಯತಿಗಳು ನ್ಯಾಯದಾನ ನೀಡುತ್ತಿದ್ದವು.
- ಬ್ರಾಹ್ಮಣ ನ್ಯಾಯಾಧೀಶರು ಸ್ಮೃತಿಗಳ ಆಧಾರದ ಮೇಲೆ ನಿರ್ಣಯ ನೀಡುತ್ತಿದ್ದರು.

**6. ಒಂದನೇ ಬಾಜಿರಾಯನ ಸಾಧನೆಗಳನ್ನು ವಿವರಿಸಿರಿ.**

- ಅಪ್ರತಿಮ ವೀರನಾಗಿದ್ದ ಒಂದನೇ ಬಾಜಿರಾಯನು ಮರಾಠ ರಾಜ್ಯವನ್ನು ಉತ್ತರ ಭಾರತದಲ್ಲಿ ವಿಸ್ತರಿಸಬೇಕೆಂಬ ಉದ್ದೇಶದಿಂದ ಗುಜರಾತ, ಮಾಳ್ವಾಗಳನ್ನು ವಶಪಡಿಸಿಕೊಂಡು ಚೌತ್ ಮತ್ತು ಸರದೇಶಮುಖಿಗಳನ್ನು ಸಂಗ್ರಹಿಸುವ ಅಧಿಕಾರ ಪಡೆದನು.
- ಕರ್ನಾಟಕದ ಚಿತ್ರದುರ್ಗ, ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿದನು.
- ಬಾಜಿರಾವ್ ಮೊಘಲ ದೊರೆ ವಿರುದ್ಧ ಯುದ್ಧ ಸಾರಿದಾಗ ನಿಜಾಮ-ಉಲ್ ಮುಲ್ಕ ಮೊಘಲರಿಗೆ ನೆರವು ನೀಡುವ ಉದ್ದೇಶದಿಂದ ತನ್ನ ಸೈನ್ಯದೊಂದಿಗೆ ದೆಹಲಿಗೆ ತೆರಳುವ ಸಂದರ್ಭದಲ್ಲಿ ಭೂಪಾಲ ಬಳಿ ನಡೆದ ಯುದ್ಧದಲ್ಲಿ ಮರಾಠರಿಂದ ಪರಾಭವಗೊಂಡನು.
- ಇದರಿಂದ ನರ್ಮದ ಚಂಬಲ್ ನದಿಗಳ ನಡುವಿನ ವಿಶಾಲ ಪ್ರದೇಶ ಹಾಗೂ ಐವತ್ತು ಲಕ್ಷ ರೂಪಾಯಿಗಳು ಯುದ್ಧ ಪರಿಹಾರವಾಗಿ ಬಾಜಿರಾವ್‌ನಿಗೆ ದೊರಕಿತು.
- ಅಲ್ಲದೆ ಪೋರ್ಚಗೀಸರಿಂದ ಸಾಲಸೆಟ್, ಬೇಸಿನ್ ಮತ್ತು ಸಿದ್ಧಿಗಳಿಂದ ಜಂಜಿರಾ ವಶಪಡಿಸಿಕೊಂಡನು.

**ಅಧ್ಯಾಯ-6**

## ಭಕ್ತಿಪಂಥ

**ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.**

1. ಭಕ್ತಿ ಎಂದರೆ ದೇವರಲ್ಲಿ ಶುದ್ಧ ____________ .
2. ರಮಾನಂದರ ಶಿಷ್ಯರಲ್ಲಿ ಪ್ರಸಿದ್ಧರಾದವರು __________
3. ಕಬೀರರ ಅನುಯಾಯಿಗಳನ್ನು_______ಎಂದು ಕರೆಯುತ್ತಾರೆ.
4. ಚೈತನ್ಯ ಆಧ್ಯಾತ್ಮಿಕ ಚಿಂತನೆಯ ಸಂಗ್ರಹ ___________
5. ಮೋಹನ ತರಂಗಿಣಿ ಎಂಬ ಕಾವ್ಯವನ್ನು ರಚಿಸಿದವರು ____
6. ಸೂಫಿ ಸಂತರು____ದಿಂದ ಬಂದು ಭಾರತದಲ್ಲಿ ನೆಲೆಸಿದರು

**ಉತ್ತರಗಳು:- (1) ನಂಬಿಕೆಯನ್ನಿಡುವುದು (2) ಕಬೀರ್ ದಾಸ್ (3) ಕಬೀರ್-ಪಂಥಿಗಳು (4) ಚೈತನ್ಯ ಚರಿತಾಮೃತ (5) ಕನಕದಾಸರು (6) ಪರ್ಷಿಯಾ**

**ಖಖ. ಕೆಳಕಂಡ ಪ್ರಶ್ನೆಗಳಿಗೆ ಮಿತ್ರರೊಂದಿಗೆ ಚರ್ಚಿಸಿ ಉತ್ತರಿಸಿರಿ.**

**1. ಕಬೀರರ ಬೋಧನೆ ಯಾವುವು?**

- ತಮ್ಮದೇ ಹೊಸ ತತ್ವವನ್ನು ಬೋಧಿಸಲು ಪ್ರಾರಂಭಿಸಿದರು.
- ಜಾತಿ ವ್ಯವಸ್ಥೆ ಮತ್ತು ಬಹುಮೂರ್ತಿಗಳ ಪೂಜೆಯನ್ನು ಖಂಡಿಸಿದ ಅವರು ದೇವರು ಒಬ್ಬನೇ, ಹಿಂದೂ ಮತ್ತು ಮುಸಲ್ಮಾನರಿಗೆ ಆ ಒಬ್ಬ ದೇವರೇ ಹೊರತು ಬೇರೆ ಬೇರೆ ಇಲ್ಲವೆಂದು ಸಾರಿದರು.
- ಈ ಎರಡು ಮತೀಯರಲ್ಲಿಯೂ ಸೌಹಾರ್ದ ಮತ್ತು ಸಹಿಷ್ಣುತೆಯನ್ನು ಬೆಳೆಸಲು ಯತ್ನಿಸಿದರು.
- ತಮ್ಮ ಗುರುವಿನಂತೆಯೆ ಇವರೂ ಸಹ ಜನರ ಆಡು ಬಾಷೆಯಾದ ಹಿಂದಿಯಲ್ಲಿಯೆ ಮಾತನಾಡಿ, ಬರೆದು ಹೆಚ್ಚು ಜನರನ್ನು ತಲುಪಿದರು.
- ಕಬೀರ್ ಜಾತಿ ಮತ್ತು ಧರ್ಮಗಳ ಗಡಿಗಳನ್ನು ದಾಟಿ ಮಾನವೀಯ ನೆಲೆಯಲ್ಲಿ ಬೋಧಿಸಿದರು.

SS STF DIGITAL GROUP

**2. ಸಿಖ್ಖರು ಯಾರು? ಅವರ ಗ್ರಂಥವಾವುದು?**

ಗುರುನಾನಕ್‌ರ ಶಿಷ್ಯರನ್ನು "ಸಿಖ್ಖರು" ಎಂದು ಕರೆಯಲಾಗಿದೆ. ಇವರ ಪವಿತ್ರಗ್ರಂಥ "ಗುರು ಗ್ರಂಥ ಸಾಹಿಬ್" ಆಗಿದೆ.

**3. ಪುರಂದರು ಭಕ್ತಿಯನ್ನು ಕುರಿತು ಪ್ರಸ್ತಾಪಿಸಿರುವ ಅಂಶವನ್ನು ವಿವರಿಸಿ.**

- ಪುರಂದರದಾಸರು ತಮ್ಮ ಸಂಕೀರ್ತನಗಳಲ್ಲಿ ಮುಖ್ಯವಾಗಿ ವೈಷ್ಣವ ಭಕ್ತಿ ಪಾರಮ್ಯ- ಪ್ರಪಕ್ತಿಯ ಜೊತೆಗೆ ಸಾಮಾಜಿಕ ಕಳಕಳಿ, ಡಾಂಭಿಕ ಭಕ್ತಿಯ ವಿಡಂಬನೆ, ಜೀವನ ತತ್ವಗಳ ಕುರಿತಾಗಿ ಅಭಿವ್ಯಕ್ತಿಪಡಿಸಿರುವುದನ್ನು ಕಾಣಬಹುದು.
- ಅವರು ಜಾತಿ ಮತಗಳನ್ನು ಖಂಡಿಸಿದರು.
- ಯಾಗ ಯಜ್ಞಗಳನ್ನು ತಿರಸ್ಕರಿಸಿ, ಮೂಢ ನಂಬಿಕೆಗಳನ್ನು ಅಲ್ಲಗಳೆದರು.
- ತೋರಿಕೆಯ ಭಕ್ತಿಯನ್ನು ತಿರಸ್ಕರಿಸಿದ ಅವರು ಆಂತರಿಕ ಹುಡುಕಾಟಕ್ಕೆ, ಆತ್ಮಶೋದನೆಗೆ ಪ್ರಾಮುಖ್ಯತೆಯನ್ನು ಕೊಟ್ಟರು.
- ಅಂತರಂಗ ಶುದ್ಧಿಯಾಗದೆ ಬಹಿರಂಗ ಶುದ್ಧಿ ವ್ಯರ್ಥವೆಂದು ತಿಳಿಸಿದರು.
- ಮನವ ತೊಳೆಯದೆ ಮಲವ ತೊಳೆಯುವುದರಿಂದೇನು ಪ್ರಯೋಜನವೆಂದು ಪ್ರಶ್ನಿಸಿದರು.
- ನೀರಿನಲ್ಲಿ ಕುಳಿತು ಧ್ಯಾನ ಮಾಡುವ ಡಾಂಭಿಕರನ್ನು ಬಕಪಕ್ಷಿಗಳಿಗೆ ಹೋಲಿಸಿದರು.
- ಮನದಲ್ಲಿ ದೃಢಭಕ್ತಿಯಿಲ್ಲದೆ ತನುವ ನೀರೊಳಗದ್ದುವುದು ವ್ಯರ್ಥವೆಂದು ಸ್ಪಷ್ಟಪಡಿಸಿದರು.

**4. ಭಕ್ತಿ ಚಳುವಳಿಯಿಂದಾದ ಪರಿಣಾಮಗಳಾವುವು?**

ಭಕ್ತಿ ಚಳುವಳಿಯಿಂದಾದ ಪರಿಣಾಮಗಳು:-

- ಹಿಂದೂಗಳು ಮತ್ತು ಮುಸ್ಲಿಂ ಸಮುದಾಯಗಳಲ್ಲಿದ್ದ ಮೌಢ್ಯಾಚರಣೆಗಳ ಅರ್ಥಹೀನತೆಯನ್ನು ಕಡಿಮೆ ಮಾಡಲು ಪ್ರಯತ್ನ.
- ಹಿಂದೂ ಮತ್ತು ಮುಸಲ್ಮಾನರಲ್ಲಿ ಮಧುರ ಬಾಂಧವ್ಯವನ್ನು ಉಂಟು ಮಾಡುವುದು ಭಕ್ತಿ ಪಂಥದ ಉದ್ದೇಶಗಳಾಗಿದ್ದವು.
- ಹಿಂದೂ ಸಮಾಜದಲ್ಲಿನ ಅನೇಕ ನ್ಯೂನತೆಗಳನ್ನು ಸುಧಾರಕರು ನಿವಾರಿಸಿದರು.
- ಭಾರತದ ಪ್ರಾದೇಶಿಕ ಭಾಷೆಗಳು ವಿಕಾಸಗೊಂಡವು. ಅವರು ದೇಶಿ ಭಾಷೆಗಳಲ್ಲಿ ಬರೆದು ಅವುಗಳ ಬೆಳವಣಿಗೆಗೆ ಸಹಾಯ ಮಾಡಿದರು.
- ಈ ಚಳವಳಿಯು ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾಗಿ ಬಹುಸಂಸ್ಕೃತಿಗಳ ಸಂಗಮ ಎಂಬ ಹೆಗ್ಗಳಿಕೆಯನ್ನು ಭಾರತಕ್ಕೆ ತಂದುಕೊಟ್ಟಿದೆ.

**5. ಶಿಶುನಾಳ ಶರೀಫರ ಬಗ್ಗೆ ಟಿಪ್ಪಣಿ ಬರೆಯಿರಿ.**

ಇಂದಿನ ಗದಗ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಶಿಶುನಾಳದಲ್ಲಿ ಶರೀಫ್‌ರು ಇಮಾಮ್ ಮತ್ತು ಹಜೂಮಾ ರವರ ಮಗನಾಗಿ 1819ರಲ್ಲಿ ಜನ್ಮ ತಳೆದರು. ಉದಾತ್ತ ಧ್ಯೇಯಗಳ ಅಥವಾ ಉತ್ತಮ ಶೀಲ ಸ್ವಭಾವ ಹೊಂದಿ ಇತರರಿಂದ ಗೌರವಿಸಲ್ಪಡುವ ವ್ಯಕ್ತಿ ಎಂದರ್ಥ ಹೆಸರಿಗೆ ತಕ್ಕಂತೆಯೇ ಶರೀಫ ರೂಪುಗೊಂಡರು.

ಶಿಶುನಾಳ ಶರೀಫರು ಚಿಕ್ಕಂದಿನಿಂದಲೇ ಇಸ್ಲಾಂ, ವೀರಶೈವ ಹಾಗೂ ವೈದಿಕ ತತ್ವ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ತ್ರಿಕಾಲ ಜ್ಞಾನಿಯಾಗಿದ್ದ ಗೋವಿಂದಭಟ್ಟರು ಇವರ ಗುರುಗಳು. ಶಿಶುನಾಳದ ಮಕ್ಕಳಿಗಾಗಿ ಶರೀಫ ಸ್ಥಳೀಯ ಚಂದ್ರೇಶ್ವರ ದೇವಾಲಯದಲ್ಲಿ ಶಾಲೆ ತೆರೆಯುವ ಮೂಲಕ ಅವರಲ್ಲಿ ಧಾರ್ಮಿಕ ವಿಶಾಲ ಮನೋಭಾವ ಬೆಳೆಯಲು ಕಾರಣರಾದರು. ಸಂಘ ಜೀವಿಯಾಗಿದ್ದು, ಶರೀಫರು ಶಿಶುನಾಳ ಪ್ರದೇಶದಲ್ಲಿ ನಡೆಯುತ್ತಿದ್ದ ಜಾತ್ರೆ, ಉತ್ಸವ, ಬಯಲಾಟ, ಮೊಹರಂ ಉತ್ಸವಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನತೆಗೆ ಸ್ಫೂರ್ತಿಯ ಸೆಲೆಯಾಗುತ್ತಿದ್ದರು. ಮೊಹರಂ ಹಿನ್ನೆಲೆಯ ಚಾರಿತ್ರಿಕ ಸಂಗತಿಗಳನ್ನು ಅನುಸರಿಸಿ ರಿವಾಯತ್ ನಡೆಸುವ ಮೂಲಕ ರಿವಾಯತ್ ಸಾಹಿತ್ಯದ ಹರಿಕಾರರಾದರು.

**6. ಕನಕದಾಸರ ಬೋಧನೆಗಳು ಯಾವುವು?**

ಒಬ್ಬ ಭಕ್ತಿ ಸಂತರಾಗಿ ಕನಕದಾಸರು ಅಂದಿನ ಸಮಾಜದಲ್ಲಿದ್ದ ಮೇಲು-ಕೀಳು, ಉಚ್ಚ-ನೀಚ ಪರಿಭಾವನೆಯನ್ನು ಹೋಗಲಾಡಿಸಲು ಹೋರಾಡಿದ್ದಾರೆ. ಡಾಂಭಿಕ ಭಕ್ತಿಯನ್ನು ತೆಗಳಿದ್ದಾರೆ. ನೈಜ ಭಕ್ತಿಮಾರ್ಗದಿಂದ ಜನರು ದೈವಸಾನಿಧ್ಯವನ್ನು ಪಡೆಯಬಹುದೆಂದು ಬೋಧಿಸಿದ್ದಾರೆ. ಭಕ್ತಿ ಮಾರ್ಗದ ಸರಳತೆಯನ್ನು ತೋರಿಸಿದ್ದಾರೆ. ಮುಖ್ಯವಾಗಿ ದೈವಸಾಕ್ಷಾತ್ಕಾರಕ್ಕೆ ಉತ್ತಮ ಜಾತಿಯಲ್ಲೇ ಹುಟ್ಟಿರಬೇಕೆನ್ನುವ ಅರ್ಹತೆಯನ್ನು ಪ್ರತಿಪಾದಿಸುತ್ತಿದ್ದ ಪುರೋಹಿತ ವರ್ಗಗಳನ್ನು ತಮ್ಮ ಕೀರ್ತನೆಗಳ ಮೂಲಕ ಒಡೆದುಹಾಕಿದ್ದಾರೆ

**ಅಧ್ಯಾಯ-7**

## ಮಧ್ಯಯುಗದ ಯುರೋಪ

**ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಯುರೋಪ್‌ನ ಸಾಂಸ್ಕೃತಿಕ ಬರಡುತನವನ್ನು ____________ ಯುಗ ಎಂದು ಕರೆಯುತ್ತಾರೆ.
2. ಭೂಮಿಯ ಒಡೆತನವನ್ನು ಹೊಂದಿದ್ದವನನ್ನು ____________ ಎಂದು ಕರೆಯುತ್ತಿದ್ದರು.
3. ಹಿಡುವಳಿದಾರನು ಹೊಂದಿದ್ದ ಭೂಮಿಯನ್ನು ____________ ಎನ್ನುತ್ತಿದ್ದರು.

SS STF DIGITAL GROUP

4. ಭೂಮಿಯನ್ನು ಹಿಡುವಳಿಗಾಗಿ ಪಡೆದ ಅಶಕ್ತ ವ್ಯಕ್ತಿಯನ್ನು ________ ಎಂದು ಕರೆಯುತ್ತಿದ್ದರು.

**ಉತ್ತರಗಳು:- (1) ಅಂಧಕಾರ ಯುಗ (2) ಧಣಿ (3) 'ಉಂಬಳಿ' (4) ಹಿಡುವಳಿದಾರ**

**ಖಖ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಊಳಿಗಮಾನ್ಯ ವ್ಯವಸ್ಥೆ ಎಂದರೇನು?**

ಊಳಿಗಮಾನ್ಯ ಪದ್ಧತಿಯು ಬಲಿಷ್ಠ ಹಾಗೂ ಅಶಕ್ತರ ನಡುವೆ ಇದ್ದಂತಹ ಒಪ್ಪಂದ ಎನ್ನಬಹುದು. ಮಧ್ಯಯುಗದ ಯುರೋಪ್‌ನಲ್ಲಿ ಬಲಿಷ್ಠನಾದ ಧಣಿಯು ಅಶಕ್ತನನ್ನು ರಕ್ಷಿಸುವ ಹೊಣೆಯನ್ನು ಹೊಂದಿದ್ದರ ಜೊತೆಗೆ ಹಿಡುವಳಿದಾರರಿಂದ ನಿರ್ದಿಷ್ಟವಾದ ಸೇವೆಗಳನ್ನು ಪಡೆಯುತ್ತಿದ್ದುದೇ ಊಳಿಗಮಾನ್ಯ ವ್ಯವಸ್ಥೆ.

**2. ಊಳಿಗಮಾನ್ಯ ವ್ಯವಸ್ಥೆಯ ಗುಣ, ದೋಷಗಳ ಪಟ್ಟಿ ಮಾಡಿ.**

**ಊಳಿಗಮಾನ್ಯ ವ್ಯವಸ್ಥೆಯ ಗುಣಗಳು:-**

- ಸರಳವಾದ ಮತ್ತು ಸ್ಥಿರವಾದ ಆಡಳಿತ ವ್ಯವಸ್ಥೆ ಇದರ ಕೊಡುಗೆಯಾಗಿದೆ.
- ಮನುಷ್ಯನ ರಕ್ಷಣೆಯ ವಿಶ್ವಾಸವನ್ನು ಈ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ.
- ಧಣಿಗಳು ಮಿಲಿಟರಿ ಸೇವೆಗೆ ಹಿಡುವಳಿದಾರರ ಮೇಲೆ ಅವಲಂಭಿತರಾಗಿದ್ದರಿಂದ ಆಳುವ ವರ್ಗ ಮನಬಂದಂತೆ ಅಧಿಕಾರ ನೆಡೆಸುವುದಕ್ಕೆ ತೆರೆಬಿದ್ದಿತು.
- ಮನುಷ್ಯನು ತನ್ನ ಹಕ್ಕುಬಾಧ್ಯತೆ ಮತ್ತು ಕರ್ತವ್ಯಗಳನ್ನು ಈ ವ್ಯವಸ್ಥೆಯಿಂದ ಮನಗೊಂಡನು.
- ಬಾರ್ಬೇರಿಯನ್ ಅಟ್ಟಹಾಸವನ್ನು ಮಟ್ಟಹಾಕಿತು.
- ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಸಾಹಿತ್ಯದ ಬೆಳವಣಿಗೆಗೆ ಈ ವ್ಯವಸ್ಥೆಯು ಪ್ರೋತ್ಸಾಹ ನೀಡಿತು.
- ಈ ವ್ಯವಸ್ಥೆಯಲ್ಲಿದ್ದ ನಿಯಮಾವಳಿಗಳ ಪರಿಣಾಮವಾಗಿ ನೋಬಲರು ಮಹಿಳೆಯರು, ಅಶಕ್ತರು ಮತ್ತು ಕ್ರೈಸ್ತಮತದ ರಕ್ಷಕರಾದರು.

**ಊಳಿಗಮಾನ್ಯ ವ್ಯವಸ್ಥೆಯ ದೋಷಗಳು:-**

- ಈ ವ್ಯವಸ್ಥೆಯ ಪರಿಣಾಮವಾಗಿ ಉನ್ನತವಾದ ಪ್ರಭುವರ್ಗ ಹುಟ್ಟಿದವು.
- ಪ್ರಭುವರ್ಗ, ನೋಬಲರು ಮತ್ತು ಹಿಡುವಳಿದಾರರ ನಡುವೆ ವಿವಾದಗಳು ಪ್ರಾರಂಭಗೊಂಡು ಈ ವ್ಯವಸ್ಥೆ ಮುರಿದು ಬಿದ್ದಿತು.
- ಕೆಲವೊಮ್ಮೆ ಧಣಿಗಳು ಆಳುವ ದೊರೆಗಳಿಗೆ ಪೈಪೋಟಿ ನೀಡುತ್ತಿದ್ದರು.
- ಹಲವಾರು ರಾಷ್ಟ್ರದ್ರೋಹಿಗಳಾಗುವುದರ ಮೂಲಕ ತಮ್ಮ ಪ್ರಾಂತ್ಯದ ಒಗ್ಗಟ್ಟಿಗೇ ಮುಳುವಾದರು.
- ನ್ಯಾಯದ ವ್ಯವಸ್ಥೆಯು ಸಮಾನತೆ ಇರದೆ ದೋಷಯುಕ್ತವಾಗಿದ್ದಿತು.
- ಚರ್ಚ್ ಮತ್ತು ರಾಜ್ಯಗಳ ನಡುವೆ ಕಲಹಗಳು ಪ್ರಾರಂಭವಾದವು.

**3. ಊಳಿಗಮಾನ್ಯ ವ್ಯವಸ್ಥೆ ಪರಿಣಾಮಗಳನ್ನು ವಿವರಿಸಿ.**

- ರಾಜಕೀಯ ಮತ್ತು ಆರ್ಥಿಕ ಶಕ್ತಿ ಒಂದೇ ವರ್ಗದ ಕೈಯಲ್ಲೇ ಇತ್ತು.
- ಹಳ್ಳಿಗಳಲ್ಲಿ ನ್ಯಾಯ ಬಹುತೇಕ ಲಾರ್ಡ್ಸ್‌ಗಳ ಜಹಗೀರು (ಮೆನೋರಿಯಲ್) ಕೋರ್ಟ್‌ಗಳಲ್ಲಿತ್ತು.
- ಭೂಮಾಲೀಕರು ಮಿಲಿಟರಿ ಸೇವೆಯ ವಿಚಾರದಲ್ಲಿ ಹಿಡುವಳಿದಾರರ ಮೇಲೆ ಅವಲಂಬಿತರಾಗಿದ್ದರು. ಇದರಿಂದ ಆಳುವ ವರ್ಗ ಮನಬಂದಂತೆ ಅಧಿಕಾರ ನಡೆಸುವುದಕ್ಕೆ ತೆರೆ ಬಿದ್ದಿತು.
- ಬಾರ್ಬೇರಿಯನ್ನರ ಅಟ್ಟಹಾಸಗಳನ್ನು ಮಟ್ಟಹಾಕಿತು.
- ಮನುಷ್ಯನು ತನ್ನ ಹಕ್ಕುಬಾಧ್ಯತೆಗಳ ಹಾಗೂ ಕರ್ತವ್ಯಗಳನ್ನು ಈ ವ್ಯವಸ್ಥೆಯಿಂದ ಮನಗಂಡನು.
- ನಿಯಮಾವಳಿಗಳ ರಚನೆಯಾಗಿ ಈ ನಿಯಮಾವಳಿಗಳ ಮೂಲಕ ನೋಬಲರು ತರಬೇತಿ ಪಡೆದರು.
- ಇದರಿಂದಾಗಿ ನೋಬಲರು, ಮಹಿಳೆಯರ, ಅಶಕ್ತರ ಮತ್ತು ಕ್ರೈಸ್ತಮತದ ರಕ್ಷಕರಾದರು.
- ಊಳಿಗಮಾನ್ಯ ವ್ಯವಸ್ಥೆಯು ಹೊಸ ನಗರಗಳ ವ್ಯವಸ್ಥೆಯನ್ನು ಕ್ರಮೇಣ ಸೃಷ್ಟಿಸಿತು. ಇವು ವ್ಯಾಪಾರ ಮತ್ತು ಕರಕುಶಲತೆಯ ಕೇಂದ್ರಗಳಾದವು.
- ಹೊಸ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬಂದವು.
- 14ನೆಯ ಶತಮಾನದ ವೇಳೆಗೆ ಹೆಚ್ಚೆಚ್ಚು ಬಡ ರೈತರು ಕೃಷಿಯಿಂದ ಹೊರನೂಕಲ್ಪಟ್ಟರು.

SS STF DIGITAL GROUP

- ಈ ವ್ಯವಸ್ಥೆಯ ಪರಿಣಾಮದಿಂದ ಉನ್ನತ ಪ್ರಭುವರ್ಗಗಳು ಹುಟ್ಟಿದವು.
- ಪ್ರಭುವರ್ಗ ಹಿಡುವಳಿದಾರರು ಹಾಗೂ ನೋಬಲರ ನಡುವೆ ವಾದ–ವಿವಾದಗಳು ಆರಂಭವಾದವು.
- ಈ ಬಿಕ್ಕಟ್ಟಿನಿಂದ ಊಳಿಗಮಾನ್ಯ ಒಪ್ಪಂದಗಳು ಮುರಿದು ಬಿದ್ದವು. ಕೆಲವೊಮ್ಮೆ ಧಣಿಗಳು ಆಳುವ ದೊರೆಗಳಿಗೇ ಪೈಪೋಟಿ ನೀಡಲು ಪ್ರಾರಂಭಿಸಿದರು.
- ಹಲವರು ರಾಷ್ಟ್ರದ್ರೋಹಿಗಳಾಗುವುದರ ಮೂಲಕ ತಮ್ಮ ಪ್ರಾಂತ್ಯದ ಒಗ್ಗಟ್ಟಿಗೇ ಮುಳುವಾದರು.
- ಇವೆಲ್ಲಕ್ಕೂ ಮಿಗಿಲಾಗಿ ಚರ್ಚ್ ಮತ್ತು ರಾಜ್ಯಗಳ ನಡುವೆ ಕಲಹಗಳು ಏರ್ಪಟ್ಟವು.

**4. ಊಳಿಗಮಾನ್ಯ ವ್ಯವಸ್ಥೆಯ ಪತನಕ್ಕೆ ಕಾರಣಗಳನ್ನು ಬರೆಯಿರಿ.**

- 15ನೇ ಶತಮಾನದ ವೇಳೆಗೆ ಅನೇಕ ಘಟನೆಗಳು ಈ ವ್ಯವಸ್ಥೆ ಪತನಕ್ಕೆ ಕಾರಣವಾಯಿತು.
- ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಹುಟ್ಟಿಕೊಂಡ ಪ್ರಬಲವಾದ ಅರಸು ಮನೆತನಗಳು ಊಳಿಗಮಾನ್ಯ ಪದ್ಧತಿಯ ಅವನತಿಗೆ ಕಾರಣವಾದವು.
- ಪ್ರಾಂತೀಯ ಭಾಷೆಯ ಬೆಳವಣಿಗೆ, ರಾಷ್ಟ್ರೀಯ ಮನೋಭಾವನೆ, ಪ್ರಭುಗಳ ನಿರಂಕುಶ ಆಡಳಿತದ ಅದಮ್ಯ ಆಕಾಂಕ್ಷೆ ಇದರ ವಿನಾಶಕ್ಕೆ ಕಾರಣವಾದವು.
- ಬಂದೂಕಿನ ಶಕ್ತಿ ಒಂದೆಡೆ ಇದರ ಪತನಕ್ಕೆ ಕಾರಣವಾದರೇ ಮತ್ತೊಂದೆಡೆ ಮಧ್ಯಯುಗದ ಕ್ರೈಸ್ತಮತದ ಆಂತರಿಕ ಭಿನ್ನಾಭಿಪ್ರಾಯಗಳು ಈ ವ್ಯವಸ್ಥೆಯ ಪತನಕ್ಕೆ ಕಾರಣವಾದವು.
- ಯುರೋಪಿನ ಸುಧಾರಣಾ ಮತ್ತು ಹಾಗೂ ಪುನರುಜ್ಜೀವನ ಕ್ರಾಂತಿಗಳು ಈ ವ್ಯವಸ್ಥೆಯ ದುರ್ಬಲತೆಗೆ ಕಾರಣವಾದವು.

**5. ಊಳಿಗಮಾನ್ಯ ಪದ್ಧತಿಯ ಸ್ವರೂಪ ಮತ್ತು ಪ್ರಕಾರಗಳನ್ನು (ಪ್ರಭು ನಿಷ್ಠಾ ಪ್ರತಿಜ್ಞೆ) ತಿಳಿಸಿ.**

ಊಳಿಗಮಾನ್ಯ ಪದ್ಧತಿಯಲ್ಲಿ ಹಿಡುವಳಿದಾರನು ಹೊಂದಿದ್ದ ಭೂಮಿಯನ್ನು 'ಉಂಬಳಿ' ಎನ್ನುತ್ತಿದ್ದರು. ಈ ವ್ಯವಸ್ಥೆಯು ಎರಡು ಪ್ರಮುಖವಾದ ಸಾಂಪ್ರದಾಯಿಕ ವಿಧಿ–ವಿಧಾನಗಳನ್ನು ಒಳಗೊಂಡಿತ್ತು. ಮೊದಲನೆಯದು ಪದಗ್ರಹಣ (ಖಟಿತ್ಞಾಣಾಣಿಜ). ಈ ವಿಧಿಯಲ್ಲಿ ಧಣಿಯು ಹಿಡುವಳಿದಾರನಿಗೆ ಭೂಮಿಯನ್ನು ಒಪ್ಪಿಸುವಾಗ ನ್ಯಾಯ ಹಾಗೂ ರಕ್ಷಣೆಯ ಭರವಸೆ ಕೊಡುತ್ತಿದ್ದನು. ಎರಡನೆಯ ವಿಧಿ ಗೌರವಾರ್ಪಣೆ (ಊಠಚಿಣಾಜ), ಇದರಲ್ಲಿ ಹಿಡುವಳಿದಾರನು ಸ್ವಾಮಿನಿಷ್ಠೆಯ ಹಾಗೂ ಸ್ವಾಮಿಸೇವೆಯ ಪ್ರಮಾಣವನ್ನು ಮಾಡುತ್ತಿದ್ದನು. 'ಧಣಿ' ವರ್ಗದಲ್ಲಿ ಅನೇಕ ದರ್ಜೆಗಳಿದ್ದವು. ಅವುಗಳಲ್ಲಿ ಪ್ರಮುಖವಾದವು ಡ್ಯೂಕ್, ಅರ್ಲ್, ಬ್ಯಾರನ್ಸ್ ಮತ್ತು ನೈಟ್ಸ್ ಮುಂತಾದವು. ಹಿಡುವಳಿದಾರರು ಊಳಿಗದವರ ಸಹಾಯದಿಂದ ಕೃಷಿಯನ್ನು ನಡೆಸುತ್ತಿದ್ದರು. ಈ ಊಳಿಗದವರಿಗೆ ಅವರ ಜೀವನಾಧಾರಕ್ಕೆ ಬೇಕಾದಷ್ಟೇ ಭೂಮಿಯನ್ನು ಅವರು ಕೆಲಸ ಮಾಡುತ್ತಿದ್ದಷ್ಟು ಕಾಲ ನೀಡಲಾಗುತ್ತಿತ್ತು. ಅವರಿಗೆ ಹಣದ ರೂಪದಲ್ಲಿ ವೇತನ ನೀಡುತ್ತಿರಲಿಲ್ಲ.

**ಅಧ್ಯಾಯ–8**

## ಆಧುನಿಕ ಯುರೋಪ್

**. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1. ರಿನೈಜಾನ್ಸ್ ಎಂದರೆ ________ .
2. ಪುನರುಜ್ಜೀವನ ಜನಕ ಎಂದು ______ ನನ್ನು ಕರೆಯಲಾಗಿದೆ.
3. ಮಾರ್ಟಿನ್ ಲೂಥರ್‌ನ ಅನುಯಾಯಿಗಳು _______
4. ಪ್ರತಿ ಸುಧಾರಣಾ ಚಳುವಳಿಯ ನಾಯಕ _______
5. ಸ್ಪಿನ್ನಿಂಗ್‌ಜೆನ್ನಿ ಯಂತ್ರವನ್ನು ಕಂಡು ಹಿಡಿದವನು _______

**ಉತ್ತರಗಳು: (1)ಪುನರ್ಜನ್ಮ (2) ಪೆಟ್ರಾರ್ಕ್ (3) ಪ್ರೊಟೆಸ್ಟಂಟ್ (4) ಇಗ್ನಿಷಿಯಸ್ ಲಯೋಲ (5) ಹಾರ್ಗಿವ್ಸ್**

**. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

**1. ಮತ ಸುಧಾರಣೆಯ ಪರಿಣಾಮಗಳಾವುವು?**

**ಮತಸುಧಾರಣೆಯ ಪರಿಣಾಮಗಳು :**

1. ಮತಸುಧಾರಣೆಯ ಪರಿಣಾಮವಾಗಿ ಕ್ರೈಸ್ತ ಮತದ ಅಖಂಡತೆಗೆ ಪೆಟ್ಟು ಬಿದ್ದಿತು. ಕ್ರೈಸ್ತ ಮತವು ಕ್ಯಾಥೋಲಿಕ್ ಚರ್ಚ್, ಆರ್ಥೋಡಾಕ್ಸ್ ಚರ್ಚ್ ಮತ್ತು ಪ್ರಾಟೆಸ್ಟಂಟ್ ಚರ್ಚ್ ಎಂಬ ಮೂರು ಶಾಖೆಗಳಾಗಿ ಒಡೆಯಿತು.
2. ಯುರೋಪಿನ ಅನೇಕ ದೇಶಗಳ ರಾಜರುಗಳು ಪೋಪ್‌ನ ಹಿಡಿತದಿಂದ ಸ್ವತಂತ್ರರಾದರು.
3. ಮತಸುಧಾರಣೆಯು ರಾಷ್ಟ್ರೀಯ ಪ್ರಭುತ್ವಗಳ ಉದಯಕ್ಕೆ ಕಾರಣವಾಯಿತು.
4. ಮುಟ್ಟುಗೋಲು ಹಾಕಿಕೊಂಡ ಚರ್ಚಿನ ಸಂಪತ್ತನ್ನು ಆರ್ಥಿಕ ಅಭಿವೃದ್ಧಿಗಾಗಿ ವಿನಿಯೋಗಿಸಲಾಯಿತು.
5. ರಾಷ್ಟ್ರೀಯ ಭಾವನೆಗಳು ಇನ್ನಷ್ಟು ಬಲವಾದವು ಹಾಗೂ ಯುರೋಪಿನ ರಾಜರುಗಳು ಧಾರ್ಮಿಕ ಸಹಿಷ್ಣುತೆಯನ್ನು ಅಳವಡಿಸಿಕೊಂಡರು.
6. ಈ ಚಳುವಳಿಯಿಂದಾಗಿ ಸಾಹಿತ್ಯ ಕ್ಷೇತ್ರ ಬೆಳೆಯಿತು. ಪ್ರಾದೇಶಿಕ ಭಾಷೆಗಳು ಐರೋಪ್ಯರ ಮನಸ್ಸಿನ ಮೇಲೆ ಪ್ರಭಾವ ಬೀರಿದವು.

7. ಕ್ಯಾಥೋಲಿಕ್ ಚರ್ಚ್‌ನಲ್ಲೇ ಸುಧಾರಣೆಯಾಗಿ, ಅದೇ ಮುಂದೆ "ಪ್ರತಿಸುಧಾರಣೆ" ಚಳುವಳಿಯಾಯಿತು.

**2. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳನ್ನು ಬರೆಯಿರಿ.**

**ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳು**

1. ಸಾ.ಶ. 1453ರಲ್ಲಿ ಟರ್ಕರು ಕಾನ್ಸ್‌ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡಾಗ, ಪೂರ್ವ ಮತ್ತು ಪಶ್ಚಿಮ ವ್ಯಾಪಾರದ ಬಾಗಿಲು ಮುಚ್ಚಿಕೊಂಡಂತಾಯ್ತು. ಇದರಿಂದಾಗಿ, ಭಾರತದಿಂದ ವ್ಯಾಪಾರದ ಲಾಭ ಪಡೆಯಲು ಯುರೋಪಿಯನ್ನರು ಭಾರತಕ್ಕೆ ಹೊಸ ಸಮುದ್ರ ಮಾರ್ಗವನ್ನು ಕಂಡುಹಿಡಿಯಲೇಬೇಕಾದ ಪರಿಸ್ಥಿತಿ ಒದಗಿತು.
2. ಸ್ಪೈನ್ ಮತ್ತು ಪೋರ್ಚ್‌ಗಲ್ ದೇಶಗಳು ಸಾಗರ ವ್ಯಾಪಾರಿಗಳಾದ ಅರಬ್ಬರ ವಿರುದ್ಧ ಸ್ಪರ್ಧಿಸಲು ಇಚ್ಛೆ ಹೊಂದಿದ್ದವು. ಇದರಿಂದ ಸಾಹಸಿ ನಾವಿಕರಿಗೆ ಸ್ಥಳೀಯ ಜನರು, ಶ್ರೀಮಂತರು ಪ್ರೋತ್ಸಾಹಿಸಿದರು.
3. ಹೊಸದೇಶಗಳನ್ನು ಕಂಡುಹಿಡಿದರೆ ಕ್ರೈಸ್ತಮತವನ್ನು ಹರಡಬಹುದೆಂಬ ಆಶಯವೂ ಇತ್ತು.
4. ಪೂರ್ವ ದೇಶಗಳ ಕಡೆ ಸಮುದ್ರ ಪ್ರಯಾಣದ ಸಾಹಸಕ್ಕೆ ಕೈಹಾಕಿದ್ದು ಯುರೋಪಿಯನ್ನರಲ್ಲಿ ಕುತೂಹಲ ಕೆರಳಿಸಿತು. ಸಾಂಬಾರು ಪದಾರ್ಥಗಳು, ರೇಷ್ಮೆ, ಹತ್ತಿ, ಮಸ್ಲಿನ್ ಬಟ್ಟೆ ಮುಂತಾದ ವಸ್ತುಗಳನ್ನು ತಂದು ಲಾಭ ಪಡೆಯಲು ಮುಂದಾದರು.
5. ಪುನರುಜ್ಜೀವನ ಕಾಲದ ವೈಜ್ಞಾನಿಕ ಪ್ರಯೋಗಗಳಿಂದ ಭೂಮಿ ಗುಂಡಾಗಿದೆ ಎಂದು ಸಾಬೀತಾಯಿತು. ನಾವಿಕರ ದಿಕ್ಸೂಚಿ ಮತ್ತು ಅಸ್ಟ್ರೋಲೋಬ್ ಉಪಕರಣಗಳು ನಾವಿಕರಿಗೆ ಸಮುದ್ರದಲ್ಲಿ ಸಂಚರಿಸಲು ಸಹಾಯಕವಾದುವು. ನಕ್ಷೆಗಳು ಮತ್ತು ಭೂಪಟಗಳು ನಾವಿಕರಿಗೆ ಸಿಗುವಂತಾಯಿತು.
6. ಪ್ರಖ್ಯಾತ ಪ್ರವಾಸಿಯಾದ ಮಾರ್ಕೊ ಪೋಲೊ ಪೂರ್ವ ದೇಶಗಳಾದ ಚೀನಾ ಮತ್ತು ಭಾರತಕ್ಕೆ ಭೇಟಿ ನೀಡಿ ಅಲ್ಲಿನ ಸಂಪತ್ತಿನ ವಿವರಣೆಯನ್ನು ತನ್ನ ಕೃತಿಯಾದ 'ಟ್ರಾವಲ್ಸ್ ಆಫ್ ಮಾರ್ಕೊ ಪೋಲೊ'ನಲ್ಲಿ ವಿವರಿಸಿದನು. ಈ ವಿವರಣೆಯು ಸಂಪತ್ತಿನ ವ್ಯಾಮೋಹವಿದ್ದ ಯುರೋಪಿಯನ್ನರನ್ನು ಈ ದೇಶಗಳಿಗೆ ಬರಲು ಪ್ರೋತ್ಸಾಹಿಸಿತು.

**3. ಲಿಯೋನಾರ್ಡೊ – ಡ– ವಿಂಚಿಯ ಮುಖ್ಯ ವರ್ಣ ಚಿತ್ರಗಳಾವುವು?**

ಲಿಯೋನಾರ್ಡ್‌ಡ–ವಿಂಚಿಯ ಮುಖ್ಯ ವರ್ಣ ಚಿತ್ರಗಳೆಂದರೇ "ಲಾಸ್ಟ್ ಸಪ್ಪರ್" ಮತ್ತು "ಮೊನಾಲಿಸಾ",

**4. ಪುನರುಜ್ಜೀವನ ಕಾಲದಲ್ಲಿ ಸಾಹಿತ್ಯ ಬೆಳವಣಿಗೆಯನ್ನು ಉದಾಹರಣೆ ಸಹಿತ ವಿವರಿಸಿ.**

- ಲ್ಯಾಟಿನ್ ಬದಲು ಯುರೋಪಿನ ಪ್ರಾದೇಶಿಕ ಭಾಷೆಗಳು ಬಳಕೆಗೆ ಬಂದವು.
- ಪೆಟ್ರಾರ್ಕ್‌ನನ್ನು ಸುಮಾರು 200 ಲ್ಯಾಟಿನ್ ಮತ್ತು ಗ್ರೀಕ್ ಹಸ್ತಪ್ರತಿಗಳನ್ನು ಸಂಗ್ರಹಿಸಿದನು. "ಆಫ್ರಿಕಾ" ಇವನ ಪ್ರಸಿದ್ಧ ಕಾವ್ಯ.
- ಬೊಕಾಷಿಯೋ ಇಟಾಲಿಯನ್ ಭಾಷೆಯಲ್ಲಿ ರಚಿಸಿದ ನೂರು ಕಥೆಗಳ ಸಂಗ್ರಹ "ಡೆಕಾಮೆರಾನ್",
- ಡಾಂಟೆ ರಚಿಸಿದ ಪ್ರಸಿದ್ಧ ಕೃತಿ "ಡಿವೈನ್ ಕಾಮಿಡಿ",
- ಇಂಗ್ಲೆಂಡಿನ ಛಾಸರ್ ಬರೆದ "ಕ್ಯಾಂಟರ್‌ಬರಿ ಟೇಲ್ಸ್",
- ಸ್ಪೈನಿನ ಸರ್ವಾಂಟಿಸ್ ಬರೆದ "ಡಾನ್ ಕ್ವಿಕ್ಸಾಟ್",
- ಇಂಗ್ಲೆಂಡ್‌ನ ಥಾಮಸ್ ಮೋರ್ ರಚಿಸಿದ "ಯುಟೋಪಿಯಾ" ಇವು ಪ್ರಸಿದ್ಧ ಕೃತಿಗಳು.
- ಇಂಗ್ಲೆಂಡಿನ ಶೇಕ್ಸ್‌ಪಿಯರ್ ಒಬ್ಬ ಶ್ರೇಷ್ಠ ಕವಿ ಮತ್ತು ನಾಟಕಕಾರ. ಅವನು ಅನೇಕ ಪ್ರಸಿದ್ಧ ದುಃಖಾಂತ–ಸುಖಾಂತ ನಾಟಕಗಳನ್ನು ಬರೆದಿದ್ದಾನೆ.
- ಲಂಡನ್‌ನಲ್ಲಿ ಸ್ಥಾಪಿತವಾದ ಸೈಂಟ್ ಪಾಲ್ ಶಾಲೆಯು ಈ ನೂತನ ಜ್ಞಾನದ ಕಲಿಕೆಗಾಗಿಯೇ ಮೀಸಲಾಗಿದ್ದಿತು.

**5. ಕೈಗಾರಿಕಾ ಕ್ರಾಂತಿಯ ಪರಿಣಾಮಗಳನ್ನು ತಿಳಿಸಿ.**

1. ಕೈಗಾರಿಕಾ ಕ್ರಾಂತಿಯಿಂದ ಇಂಗ್ಲೇಂಡಿನ ಆರ್ಥಿಕತೆ ಸದೃಢವಾಗಿ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿತು.
2. ಬೃಹತ್ ಕೈಗಾರಿಕೆಗಳು ಹೆಚ್ಚಾದಂತೆ ಕಾರ್ಮಿಕರ ಶೋಷಣೆಗಳು ಹೆಚ್ಚಾಗಿ ಸಮಾಜವಾದವು ಉದಯಿಸಿತು.
3. ಆಧುನಿಕತೆಯು ವೇಗವಾಗಿ ವಿಸ್ತರಿಸಿ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನ ಮಟ್ಟವು ಅಭಿವೃದ್ಧಿಯಾಯಿತು.
4. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಸಾರಿಗೆ ಸಂಪರ್ಕದ ಕ್ಷೇತ್ರದಲ್ಲಾದ ಸಂಶೋದನೆಗಳಿಂದ ಇಡೀ ವಿಶ್ವವೇ ಒಂದು ಹಳ್ಳಿಯಂತೆ ಕಾಣಿಸಿತು.
5. ಕೈಗಾರಿಕಾ ಕ್ರಾಂತಿಯಿಂದ ಹೆಚ್ಚಿನ ಅಭಿವೃದ್ಧಿಯಾದರೂ ಜನಸಂಖ್ಯೆಯ ಹೆಚ್ಚಳದಿಂದ ಬಡತನ, ನಿರುದ್ಯೋಗ ಮತ್ತು ಆಹಾರ ಸಮಸ್ಯೆಗಳು ಗೋಚರಿಸಿದವು.
6. ಕೈಗಾರಿಕಾ ಕ್ರಾಂತಿಯಿಂದ ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಹೆಚ್ಚಾಗಿ ವರ್ಗ ಸಂಘರ್ಷವು ಉದಯಿಸಿತು.

**ಹೊಂದಿಸಿ ಬರೆಯಿರಿ.**

| | | |
|---|---|---|
| 1) | "ಡಿವೈನ್ ಕಾಮಿಡಿ" | ಅ) ಇಗ್ನೇಷಿಯಸ್ ಲಯೋಲ |
| 2) | ಯುಟೋಪಿಯಾ | ಆ) ಗೆಲಿಲಿಯೋ |
| 3) | ದೂರದರ್ಶಕ ಯಂತ್ರ | ಇ) ಥಾಮಸ್ ಮೋರನ |
| 4) | ಜೀಸಸ್ ಸೊಸೈಟಿ | ಈ) ಡಾಂಟೆ |
| 5) | ಆವಿಯ ಯಂತ್ರ | ಉ) ಜಾರ್ಜ್ ಸ್ಟೀವನ್ ಸನ್ |



SS STF DIGITAL GROUP

6) ರೈಲು ಬಂಡಿ ಊ) ಥಾಮಸ್ ಮ್ಯಾಕೋಮೆಸ್

**ಉತ್ತರಗಳು:(1) ಈ (2) ಇ (3) ಆ (4) ಅ (5) ಊ(6) ಉ**

**ಅಧ್ಯಾಯ-9**

# ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ

**ಐ. ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1. ಇಂಗ್ಲೆಂಡ್ ಅಟ್ಲಾಂಟಿಕ್ ತೀರದಲ್ಲಿ ಸ್ಥಾಪಿಸಿದ ಹದಿಮೂರು ವಸಾಹತುಗಳನ್ನು ------ ಎಂದು ಕರೆಯಲಾಗಿತ್ತು.
2. 1774 ರಲ್ಲಿ ಹದಿಮೂರು ವಸಾಹತುಗಳ ಪ್ರತಿನಿಧಿಗಳು ಸಭೆ ಸೇರಿದ್ದು -------- ದಲ್ಲಿ
3. ಅಮೆರಿಕ ಸ್ವಾತಂತ್ರಘೋಷಣೆ ಆದದ್ದು ------ ರಂದು
4. ಸ್ಪಿರಿಟ್ ಆಫ್ ಲಾಸ್‌ನ ಕರ್ತೃ ------ .
5. 'ತರುಣ ಇಟಲಿ' ಎಂಬ ಪಕ್ಷವನ್ನು ಇಟಲಿಯಲ್ಲಿ ಕಟ್ಟಿದವನು ------- .
6. 'ರಕ್ತ ಮತ್ತು ಕಬ್ಬಿಣ' ತತ್ವವನ್ನು ಪ್ರತಿಪಾದಿಸಿದವನು

**ಉತ್ತರಗಳು:- (1) ಹೊಸ ಇಂಗ್ಲೀಷ್ ವಸಾಹತುಗಳು (2) ಫಿಲಡೆಲ್ಫಿಯಾ (3) ಸಾ.ಶ. 1776, ಜುಲೈ 4 (4) ಮಾಂಟೆಸ್ಕ್ಯೋ (5) ಜೋಸೆಫ್ ಮ್ಯಾಜಿನಿ (6) ಆಟ್ಟೋವಾನ್ ಬಿಸ್ಮಾರ್ಕ್**

**ಕೆಳಕಂಡ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಅಮೆರಿಕದ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳನ್ನು ಹೆಸರಿಸಿ.**

ಅಮೆರಿಕದ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳು:-

- ಅಮೇರಿಕಾದಲ್ಲಿನ ತನ್ನ ವಸಾಹತುಗಳ ಬಗ್ಗೆ ಇಂಗ್ಲೇಂಡಿನ ಧೋರಣೆ.
- ವಸಾಹತುಗಳಲ್ಲಿ ಆರಂಭಗೊಂಡ ಸ್ವಾತಂತ್ರ್ಯ ಪ್ರೇಮ.
- ಸಪ್ತವಾರ್ಷಿಕ ಯುದ್ಧದ ಪರಿಣಾಮಗಳು, ನೌಕಾ ಕಾಯಿದೆಗಳು,
- ಥಾಮಸ್ ಪೈನ್, ಜಾನ್ ಆಡಮ್ಸ್, ಸ್ಯಾಮುಯಲ್ ಆಡಮ್ಸ್, ಜಾನ್ ಎಡ್ವರ್ಡ್ ಕೋಕ್ ಮತ್ತು ಬೆಂಜಮಿನ್ ಫ್ರಾಂಕ್‌ಲಿನ್ ಮುಂತಾದ ಬರಹಗಾರರ ಪ್ರಭಾವ,
- ಕ್ವಿಬೆಕ್ ಕಾಯಿದೆ, ಟೌನ್‌ಶೆಂಡ್ ತೆರಿಗೆಗಳು ಮತ್ತು ಬಾಸ್ಟನ್ ಚಹಾಕೂಟ ಮುಂತಾದ ಕಾರಣಗಳಿಂದಾಗಿ ಅಮೆರಿಕದಲ್ಲಿ ಕ್ರಾಂತಿ ಉಂಟಾಯಿತು.

**2. ಅಮೆರಿಕ ಸ್ವಾತಂತ್ರ ಸಂಗ್ರಾಮದ ಮಹತ್ವವನ್ನು ತಿಳಿಸಿ.**

- ಅಮೆರಿಕ ಸ್ವಾತಂತ್ರ ಸಂಗ್ರಾಮವು ಫ್ರಾನ್ಸ್ ಮಹಾಕ್ರಾಂತಿಗೆ ಪ್ರಚೋದನೆ ನೀಡಿತು.
- ವಸಾಹತುಗಾರರ ಪಕ್ಷ ವಹಿಸಿ ಹೋರಾಡಿದ ಅನೇಕ ಫ್ರೆಂಚರು ಫ್ರಾನ್ಸಿನ ಮಹಾಕ್ರಾಂತಿಯ ನಾಯಕರಾದರು.
- ಅಮೆರಿಕದಲ್ಲಿನ ಅನೇಕ ಸ್ಪೈನ್ ಮತ್ತು ಪೋರ್ಚ್‌ಗಲ್‌ನ ವಸಾಹತುಗಳು ತಮ್ಮ ತಾಯ್ನಾಡಿನ ವಿರುದ್ಧ ದಂಗೆ ಎದ್ದು ಸ್ವತಂತ್ರ್ಯರಾಗಲು ಉತ್ತೇಜನ ಪಡೆದವು.
- ಅಮೆರಿಕಾ ಸಂಯುಕ್ತ ಸಂಸ್ಥಾನ ಎಂಬ ಹೊಸ ರಾಷ್ಟ್ರದ ಉದಯವಾಯಿತು.

**3. ಫ್ರಾನ್ಸಿನ ಕ್ರಾಂತಿಗೆ ಆರ್ಥಿಕ ಅಂಶಗಳು ಹೇಗೆ ಕಾರಣವಾದವು.?**

- ಫ್ರಾನ್ಸ್ ಕೃಷಿ ಪ್ರಧಾನವಾದ ದೇಶವಾಗಿತ್ತು.
- ಕೃಷಿ ಪದ್ಧತಿಯಲ್ಲಿ ಅಭಿವೃದ್ಧಿಗಳು ಆಗಿದ್ದರೂ ಸಹ, ಕೃಷಿ ಬಹಳ ಹಿಂದುಳಿದಿತ್ತು.
- ಭೂಮಿಯ ಉತ್ಪತ್ತಿ ಬಹಳ ಕಡಿಮೆ ಇತ್ತು.
- ರೈತರೇ ಹೆಚ್ಚಿನ ತೊಂದರೆಗೊಳಗಾಗಿದ್ದವರು. ಬರಗಾಲಗಳು ಸಾಮಾನ್ಯವಾಗಿದ್ದವು.
- ಇದರಿಂದ ಆಹಾರಕ್ಕಾಗಿ ದಂಗೆಗಳಾಗುತ್ತಿದ್ದವು.
- ಕೈಗಾರಿಕೆಗಳು ವೃತ್ತಿಸಂಘಗಳ ಅಧೀನದಲ್ಲಿದ್ದವು.
- ಆಂತರಿಕ ಅಡ್ಡಿಗಳಿಂದಲೂ ಮತ್ತು ಅಧಿಕಾರಿಗಳ ಅತಿಯಾದ ಮಧ್ಯ ಪ್ರವೇಶದಿಂದಲೂ ಅವುಗಳ ಬೆಳವಣಿಗೆ ಕುಂಠಿತಗೊಂಡಿತ್ತು.
- ಇದರ ಫಲವಾಗಿ ಉತ್ಪಾದನೆ ಕೆಳಮಟ್ಟದಲ್ಲಿತ್ತು.

**4. ಇಟಲಿಯ ಏಕೀಕರಣದಲ್ಲಿ ಗ್ಯಾರಿಬಾಲ್ಡಿಯ ಪಾತ್ರವೇನು?**

- ಗ್ಯಾರಿಬಾಲ್ಡಿ ಒಬ್ಬ ಯೋಧ, ಹೋರಾಟಗಾರ. ಇವನು "ತರುಣ ಇಟಲಿ" ಪಕ್ಷವನ್ನು ಸೇರಿ ಅನೇಕ ಸಾರಿ ಅದರ ಕ್ರಾಂತಿಯ ನಾಯಕತ್ವವನ್ನು ವಹಿಸಿದ್ದನು.
- ಆನಂತರ "ಕೆಂಪಂಗಿ ದಳ" ಎಂಬ ಸೈನ್ಯವನ್ನು ವ್ಯವಸ್ಥೆಗೊಳಿಸಿ ಸಾರ್ಡೀನಿಯ ಜೊತೆಗೂಡಿ ಆಸ್ಟ್ರೀಯಾದೊಡನೆ ಹೋರಾಡಿದ.
- 1860ರಲ್ಲಿ ಎರಡು ಸಿಸಿಲಿಗಳ ರಾಜ್ಯದ ಮೇಲೆ ತನ್ನ "ಕೆಂಪಂಗಿ ದಳ"ದೊಡನೆ ದಾಳಿ ಮಾಡಿ ಅದನ್ನು ಆಕ್ರಮಿಸಿ ಇಟಲಿ ದೇಶದ ಏಕೀಕರಣವನ್ನು ತ್ವರಿತಗೊಳಿಸಿದನು ಹಾಗೂ ಪ್ರಜಾಪ್ರಭುತ್ವ ಸುಧಾರಣೆಗಳಿಗಾಗಿ ಆಗ್ರಹಿಸಿದನು.

**5. ಜರ್ಮನಿಯ ಏಕೀಕರಣ ಶಿಲ್ಪಿ ಯಾರು? ಅವನ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.**

- ಜರ್ಮನಿ ಏಕೀಕರಣದ ಪ್ರಧಾನ ಶಿಲ್ಪಿ, ಆಟ್ಟೋವಾನ್ ಬಿಸ್ಮಾರ್ಕ್.
- ಇವನು ಪ್ರಷ್ಯಾ ರಾಜ್ಯದ ದೊರೆ ಒಂದನೇ ವಿಲಿಯಂನ ಮುಖ್ಯಮಂತ್ರಿಯಾಗಿದ್ದನು.

- ಅವನು ಸರ್ಕಾರಿ ನೌಕರನಾಗಿ, ಜರ್ಮನಿಯ ಶಾಸನ ಸಭೆ 'ಡಯಟ್'ನ ಸದಸ್ಯನಾಗಿ, ವಿದೇಶಗಳಲ್ಲಿ ರಾಯಭಾರಿಯಾಗಿ ವೃತ್ತಿಯನ್ನು ಆರಂಭಿಸಿ ಪ್ರಾಮುಖ್ಯತೆಗೆ ಬಂದಿದ್ದನು.
- ಈ ಉದ್ದೇಶದ ಸಾಧನೆಗಾಗಿ ಅವನ ಗುರಿಗಳು ಎರಡು ಬಗೆಯಾಗಿದ್ದವು. ಒಂದು ಆಸ್ಟ್ರಿಯಾವನ್ನು ಜರ್ಮನ್ ರಾಜ್ಯಗಳ ಸಂಘದಿಂದ ಹೊರಗಟ್ಟುವುದು, ಮತ್ತೊಂದು ಜರ್ಮನಿಯಲ್ಲಿ ಲೀನವಾಗಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದಕ್ಕಿಂತ ಜರ್ಮನಿಯನ್ನೇ ಪ್ರಷ್ಯಾಮಯವಾಗಿ ಮಾಡುವುದು.
- ಬಿಸ್ಮಾರ್ಕ್ ಜರ್ಮನಿಯ ಸಮಸ್ಯೆಯನ್ನು ಬಗೆಹರಿಸಲು "ರಕ್ತ ಮತ್ತು ಕಬ್ಬಿಣ" ತತ್ವದಿಂದ ಮಾತ್ರ ಸಾಧ್ಯವೆಂದು ಮನಗಂಡಿದ್ದನು.
- ಇದರಿಂದ ಅವನು ಒಂದು ಬಲವಾದ ಸೈನ್ಯವನ್ನು ಕಟ್ಟಿದನು.
- ಆಸ್ಟ್ರಿಯಾ ಜೊತೆಗೂಡಿ ಡೆನ್ಮಾರ್ಕಿನ ಮೇಲೆ ಯುದ್ಧ ಮಾಡಿ ಷೆಲ್ಸ್‌ವಿಗ್ ಮತ್ತು ಹಾಲ್‌ಸ್ಟೈನ್‌ನನ್ನು ವಶಪಡಿಸಿಕೊಂಡನು.
- ಆನಂತರ ಬಿಸ್ಮಾರ್ಕ್ ಇಟಲಿಯೊಡನೆ ಒಪ್ಪಂದ ಮಾಡಿಕೊಂಡು
- ಆಸ್ಟ್ರಿಯಾವನ್ನು ಸೋಲಿಸಿದನು.
- ನಂತರ ಸಾ. ಶ. 1866ರಲ್ಲಿ "ಉತ್ತರ ಜರ್ಮನ್ ರಾಜ್ಯಗಳ ಸಂಘ"ವನ್ನು ರಚಿಸಿದನು.
- ಫ್ರಾನ್ಸ್‌ಗೆ ಹೊಂದಿಕೊಂಡಂತೆ ದಕ್ಷಿಣದಲ್ಲಿದ್ದ ಹದಿನಾರು ಜರ್ಮನ್ ರಾಜ್ಯಗಳು ರಾಜ್ಯ ಸಂಘದಿಂದ ಹೊರಗುಳಿದಿದ್ದವು. ಬಿಸ್ಮಾರ್ಕ್‌ನು ಉಳಿದ ರಾಜ್ಯಗಳನ್ನು ಜರ್ಮನ್ ಒಕ್ಕೂಟದಲ್ಲಿ ಲೀನವಾಗುವಂತೆ ಮಾಡಿದನು. ಜರ್ಮನ್ ಏಕೀಕರಣ ಸಂಪೂರ್ಣಗೊಂಡಿತು.

# ರಾಜ್ಯಶಾಸ್ತ್ರ

### ಅಧ್ಯಾಯ-1

## ನಮ್ಮ ಸಂವಿಧಾನ

**. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ರಾಜ್ಯವನ್ನಾಳುವ ಮೂಲ ಕಾನೂನೇ ___________
2. ನೂತನ ಸಂವಿಧಾನ ರಚನಾ ಸಭೆ _____ ರಂದು ನಡೆಯಿತು.
3. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷತೆ ವಹಿಸಿದ್ದವರು _____
4. ನಮ್ಮ ಸಂವಿಧಾನವು ___ ಸರ್ಕಾರ ಪದ್ಧತಿಯನ್ನು ಹೊಂದಿದೆ.
5. ಜನರಿಗೆ ಪರಮಾಧಿಕಾರ ಇರುವ ರಾಜ್ಯವನ್ನು ___________ ಎಂದು ಕರೆಯಲಾಗಿದೆ.
6. ನಮ್ಮ ಸಂವಿಧಾನವು ಪ್ರಜೆಗಳಿಗೆ ___________ ಪೌರತ್ವಕ್ಕೆ ಅವಕಾಶ ಮಾಡಿಕೊಟ್ಟಿದೆ.
7. ಸಂವಿಧಾನದ ಪರಿಹಾರದ ಹಕ್ಕನ್ನು ___________ ನೇ ವಿಧಿಯಲ್ಲಿ ಅಳವಡಿಸಲಾಗಿದೆ.
8. ರಾಜ್ಯ ನಿರ್ದೇಶಕ ತತ್ವಗಳನ್ನು ___________ ಸಂವಿಧಾನದಿಂದ ಪಡೆಯಲಾಗಿದೆ.

**ಉತ್ತರಗಳು:- (1) ಸಂವಿಧಾನ (2) 1946 ಡಿಸೆಂಬರ್ 11 (3) ಡಾ. ಬಿ.ಆರ್. ಅಂಬೇಡ್ಕರ್ (4) ಸಂಸದೀಯ ಸರ್ಕಾರ ಪದ್ಧತಿ (5) ಸಾರ್ವಭೌಮ (ಪರಮಾಧಿಕಾರ ಸಂಪನ್ನ) (6) ಏಕ (7) 32 (8) ಐರಿಷ್**

**ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ನೂತನ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರು?**
ನೂತನ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಡಾ. ರಾಜೇಂದ್ರಪ್ರಸಾದ್.

**2. ಸಂವಿಧಾನ ಜಾರಿಗೆ ಬಂದದ್ದು ಯಾವಾಗ?**
ಭಾರತ ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು.

**3. ಭಾರತ ಸಂವಿಧಾನದ ಪ್ರಸ್ತಾವನೆ ಏನನ್ನು ಒಳಗೊಂಡಿದೆ?**
ಭಾರತ ಸಂವಿಧಾನದ ಪ್ರಸ್ತಾವನೆ ಸಂವಿಧಾನದ ಸಂವಿಧಾನ ರಚನಾಕಾರರ ವಿಚಾರಧಾರೆಗಳನ್ನು ಒಳಗೊಂಡಿದೆ. ಸಂವಿಧಾನದ ರೂಪುರೇಷೆ, ಮೌಲ್ಯ, ಸಿದ್ಧಾಂತ ಮತ್ತು ಉದ್ದೇಶಗಳ ಸಾರಾಂಶವೇ ಸಂವಿಧಾನದ ಪ್ರಸ್ತಾವನೆ ಆಗಿದೆ. ಇದು ಜನತೆಯ ಧ್ಯೇಯಗಳನ್ನು ನಿರ್ಧರಿಸಿ ಘೋಷಿಸಿಕೊಂಡ ಆದರ್ಶ ತತ್ವವಾಗಿದೆ.

**4. ಮತ ನಿರಪೇಕ್ಷತೆ ಎಂದರೇನು?**
ಮತ ನಿರಪೇಕ್ಷತೆ ಎಂದರೇ ದೇಶದ ಪ್ರಜೆಗಳು ಯಾವುದೇ ಮತವನ್ನು ರಾಷ್ಟ್ರೀಯ ಮತವನ್ನಾಗಿ ಅಂಗೀಕರಿಸದೇ ಪ್ರಜೆಗಳು ತಮಗೆ ಬೇಕಾದ ಮತ ಆಚರಿಸುವ, ಅನುಸರಿಸುವ ಸ್ವಾತಂತ್ರ್ಯವನ್ನು ಪಡೆದಿರುವುದು ಹಾಗೂ ಸರ್ವ ಧರ್ಮಕ್ಕೂ ಸಮಾನವಾದ ಪ್ರಾತಿನಿಧ್ಯವನ್ನು ನೀಡುವುದೇ ಆಗಿದೆ.

**5. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.**

- ❖ ಲಿಖಿತ ಮತ್ತು ಬೃಹತ್ ಸಂವಿಧಾನ
- ❖ ಭಾಗಶಃ ನಮ್ಯ ಮತ್ತು ಭಾಗಶಃ ಅನಮ್ಯ ಸಂವಿಧಾನ/ ಸರಳ ಮತ್ತು ಕಠಿಣ ಸಂವಿಧಾನ
- ❖ ಸಂಸದೀಯ ಸರ್ಕಾರ ಪದ್ಧತಿ
- ❖ ಗಣತಂತ್ರ ವ್ಯವಸ್ಥೆ
- ❖ ಸಂಯುಕ್ತ ಪದ್ಧತಿ
- ❖ ಮೂಲಭೂತ ಹಕ್ಕುಗಳು

❖ ಮೂಲಭೂತ ಕರ್ತವ್ಯಗಳು

❖ ರಾಜ್ಯ ನಿರ್ದೇಶಕ ತತ್ವಗಳು

❖ ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ

❖ ಏಕ ಪೌರತ್ವ

❖ ವಯಸ್ಕ ಮತದಾನ ಪದ್ಧತಿ

❖ ದ್ವಿಸದನ ಶಾಸಕಾಂಗ

❖ ಬಹುಪಕ್ಷ ಪದ್ಧತಿ

**6. ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳಾವುವು?**

❖ ಸ್ವಾತಂತ್ರ್ಯದ ಹಕ್ಕು

❖ ಸಮಾನತೆಯ ಹಕ್ಕು

❖ ಶೋಷಣೆಯ ವಿರುದ್ಧದ ಹಕ್ಕು

❖ ಧಾರ್ಮಿಕ ಹಕ್ಕು

❖ ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು

❖ ಸಂವಿಧಾನಬದ್ಧ ಪರಿಹಾರದ ಹಕ್ಕು

**7. ಮೂಲಭೂತ ಕರ್ತವ್ಯಗಳನ್ನು ಬರೆಯಿರಿ.**

❖ ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸುವುದು.

❖ ಸ್ವಾತಂತ್ರ್ಯ ಚಳುವಳಿಯ ಸ್ಪೂರ್ತಿದಾಯಕ ಆದರ್ಶ ತತ್ವಗಳನ್ನು ಪಾಲಿಸುವುದು.

❖ ಭಾರತದ ಸಾರ್ವಭೌಮತೆ, ಏಕತೆ,ಸಮಗ್ರತೆಯನ್ನು ಕಾಪಾಡುವುದು ಮತ್ತು ರಕ್ಷಿಸುವುದು.

❖ ಅಗತ್ಯ ಬಂದಾಗ ರಾಷ್ಟ್ರವನ್ನು ರಕ್ಷಿಸಿ ದೇಶದ ಸೇವೆ ಮಾಡಬೇಕು.

❖ ಭಾರತೀಯರಲ್ಲಿ ಸಾಮರಸ್ಯ ಹಾಗೂ ಸಹೋದರತೆಯ ಭಾವನೆಯನ್ನು ಬೆಳೆಸಬೇಕು ಮತ್ತು ಮಹಿಳೆಯರ ಗೌರವಕ್ಕೆ ಭಂಗ ತರುವ ಆಚರಣೆಗಳನ್ನು ತ್ಯಜಿಸಬೇಕು.

❖ ನಮ್ಮ ಸಂಘಟಿತ ಸಂಸ್ಕೃತಿಯ ಪರಂಪರೆಯನ್ನು ಗೌರವಿಸಿ ರಕ್ಷಿಸಬೇಕು.

❖ ಅರಣ್ಯಗಳು, ಸರೋವರಗಳು, ನದುಗಳು, ವನ್ಯಮೃಗಗಳೂ ಸೇರಿದಂತೆ ಪ್ರಕೃತಿ, ಪರಿಸರವನ್ನು ಅಭಿವೃದ್ಧಿಪಡಿಸಬೇಕು ಹಾಗೂ ಜೀವಂತ ಪ್ರಾಣಿಗಳಿಗೆ ಅನುಕಂಪ ತೋರಿಸಬೇಕು.

❖ ವೈಜ್ಞಾನಿಕ ಹಾಗೂ ಮಾನವೀಯತೆಯ ಗುಣಗಳ ವಿಚಾರಣಾ ಹಾಗೂ ಸುಧಾರಣಾ ಭಾವನೆಯನ್ನು ಬೆಳೆಸಿಕೊಳ್ಳಬೇಕು.

❖ ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು ಮತ್ತು ಹಿಂಸಾಮಾರ್ಗವನ್ನು ತ್ಯಜಿಸಬೇಕು.

❖ ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸಬೇಕು.

❖ ತಂದೆ/ತಾಯಿ ಅಥವಾ ಪೋಷಕರು6 ರಿಂದ 14 ವರ್ಷದದವರೆಗೆ ತಮ್ಮ ಮಗುವಿನ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

**8. ರಾಜ್ಯ ನಿರ್ದೇಶಕ ತತ್ವಗಳಾವುವು?**

1. ಎಲ್ಲಾ ಪೌರರಿಗೂ ತಮ್ಮ ಜೀವನೋಪಾಯಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು.
2. ಸಮುದಾಯದಲ್ಲಿನ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವೇ ಜನರ ಸ್ವತ್ತಾಗದಂತೆ ತಡೆಗಟ್ಟುವುದು.
3. ಸ್ತ್ರೀ ಮತ್ತು ಪುರುಷರೆಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು, ಕಾರ್ಮಿಕರ ಯೋಗಕ್ಷೇಮವನ್ನು ರಕ್ಷಿಸುವುದು.
4. ವೃದ್ಧರು, ರೋಗಿಗಳು, ದುರ್ಬಲ ವರ್ಗದವರು ಮತ್ತು ಅಸಮರ್ಥರಿಗೆ ಸಹಾಯಧನ ನೀಡುವುದು.
5. ದೇಶದಾದ್ಯಂತ ಏಕರೂಪದ ನಾಗರಿಕ ಕಾನೂನನ್ನು ಜಾರಿಗೆ ತರುವುದು.
6. 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಬಾಲ್ಯ ಪೋಷಣೆ ಮತ್ತು ಶಾಲಾ ಪೂರ್ವ ಶಿಕ್ಷಣವನ್ನು ಕೊಡಲು ರಾಜ್ಯ ಪ್ರಯತ್ನಿಸಬೇಕು.
7. ಐತಿಹಾಸಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ರಕ್ಷಿಸುವುದು.
8. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.

9. ಅಂತರರಾಷ್ಟ್ರೀಯ ಶಾಂತಿಯುತ ವಿದೇಶಿ ನೀತಿಯನ್ನು ಪಾಲಿಸುವುದು. ಭದ್ರತೆ ಕಾಪಾಡಿ ವಿಶ್ವ ಕಾನೂನನ್ನು ಗೌರವಿಸುವುದು.

10. ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸುವುದು.

11. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.

12. ಕೃಷಿ ಹಾಗೂ ಪಶುಸಂಗೋಪನೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವುದು.

13. ಪಾನ ನಿಷೇಧವನ್ನು ಜಾರಿಗೆ ತರುವುದು.

14. ವೈಜ್ಞಾನಿಕ ಆಧಾರದ ಮೇಲೆ ಬೇಸಾಯವನ್ನು ಅಭಿವೃದ್ಧಿಗೊಳಿಸುವುದು.

### ಅಧ್ಯಾಯ-2

## ಕೇಂದ್ರ ಸರ್ಕಾರ

**ಅ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತವು __________ ಗಳ ಒಕ್ಕೂಟವಾಗಿದೆ.
2. ಕೇಂದ್ರ ಶಾಸಕಾಂಗವನ್ನು ________ಎಂದು ಕರೆಯಲಾಗಿದೆ.
3. ರಾಜ್ಯಸಭೆಯ ಪದನಿಮಿತ್ತ ಸಭಾಪತಿಗಳು ________ ರವರು ಆಗಿರುತ್ತಾರೆ.
4. ಲೋಕಸಭೆಯ ಸದಸ್ಯರಾಗಲು ______ ವರ್ಷ ವಯೋಮಿತಿ ಹೊಂದಿರಬೇಕು.
5. ಮೂರು ಸೇನಾಪಡೆಗಳ ಮಹಾ ದಂಡನಾಯಕರು _______
6. ಸಂವಿಧಾನದ _________ ಮತ್ತು __________ ನೇ ವಿಧಿಯಲ್ಲಿ ರಾಷ್ಟ್ರಪತಿಯವರನ್ನು ಚುನಾಯಿಸುವ ವಿಧಾನವನ್ನು ಅಳವಡಿಸಲಾಗಿದೆ.
7. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು _________ ರವರು ನೇಮಿಸುತ್ತಾರೆ.
8. ಸರ್ವೋಚ್ಚ ನ್ಯಾಯಾಲಯ ____ರಂದು ಸ್ಥಾಪನೆಯಾಯಿತು.

**ಉತ್ತರಗಳು:- (1) ರಾಜ್ಯಗಳ (2) ಸಂಸತ್ತು (3) ಉಪ ರಾಷ್ಟ್ರಪತಿ (4) 25 (5) ರಾಷ್ಟ್ರಪತಿ (6) 54, 55 (7) ರಾಷ್ಟ್ರಪತಿ (8) ಜನವರಿ 28, 1950**

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಉತ್ತರಿಸಿ.**

**1. ಸಂಸತ್ತಿನ ಎರಡು ಸದನಗಳನ್ನು ತಿಳಿಸಿ.**

ಸಂಸತ್ತಿನ ಎರಡು ಸದನಗಳು:-

1. ಮೇಲ್ಮನೆ / ರಾಜ್ಯಸಭೆ
2. ಕೆಳಮನೆ / ಲೋಕಸಭೆ

**2. ರಾಜ್ಯಸಭೆಯ ರಚನೆಯನ್ನು ವಿವರಿಸಿ.**

ರಾಜ್ಯಸಭೆಯು 250 ಸದಸ್ಯರನ್ನು ಒಳಗೊಂಡಿದೆ. 238 ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಯ ಸದಸ್ಯರಿಂದ ಆಯ್ಕೆಯಾದರೆ, ಉಳಿದ 12 ಸದಸ್ಯರು ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದವರನ್ನು ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ.

**3. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?**

1. ಭಾರತದ ಪ್ರಜೆಯಾಗಿರಬೇಕು.
2. ಕನಿಷ್ಠ 25 ವರ್ಷ ವಯೋಮಿತಿ ಹೊಂದಿರಬೇಕು.
3. ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.
4. ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.
5. ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿರಬಾರದು.
6. ಸಂಸತ್ತು ಕಾಲಕಾಲಕ್ಕೆ ನಿಗದಿಪಡಿಸುವ ಅರ್ಹತೆ ಪಡೆದಿರಬೇಕು.

**4. ರಾಷ್ಟ್ರಪತಿ ಚುನಾವಣಾ ಪದ್ಧತಿಯನ್ನು ವಿವರಿಸಿ.**

- ಭಾರತದ ರಾಷ್ಟ್ರಪತಿಯವರನ್ನು ಮತದಾರ ವರ್ಗ ಎಂಬುದರಿಂದ ಚುನಾಯಿಸಲಾಗುತ್ತದೆ.
- ಇದು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು, ಎಲ್ಲಾ ರಾಜ್ಯಗಳ ಮತ್ತು ದೆಹಲಿ, ಪುದುಚೆರಿ ವಿಧಾನಸಭಾ ಚುನಾಯಿತ ಸದಸ್ಯರಿಂದ ಕೂಡಿರುತ್ತದೆ.
- ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಇವರಿಗೆ ಪ್ರಮಾಣ ವಚನ ಬೋಧಿಸುತ್ತಾರೆ.

**5. ಪ್ರಧಾನಮಂತ್ರಿಯ ಅಧಿಕಾರಗಳನ್ನು ಪಟ್ಟಿ ಮಾಡಿ.**

ಪ್ರಧಾನಿಯವರು ಅಧಿಕಾರಗಳ ಕೇಂದ್ರಬಿಂದುವಾಗಿದ್ದು, ರಾಷ್ಟ್ರದ ಸಮಗ್ರ ಆಡಳಿತವನ್ನು ನಿರ್ವಹಿಸುವ ಅಧಿಕಾರ ಹೊಂದಿದ್ದಾರೆ. ರಾಷ್ಟ್ರಪತಿಯವರು ರಾಷ್ಟ್ರದ ಮುಖ್ಯಸ್ಥರಾಗಿದ್ದರೆ ಪ್ರಧಾನಿಯು ಸರ್ಕಾರದ ಮುಖ್ಯಸ್ಥರಾಗಿದ್ದಾರೆ.

- **ಮಂತ್ರಿಗಳ ನೇಮಕ, ಖಾತೆಗಳ ಹಂಚಿಕೆ ಮತ್ತು ಮಂತ್ರಿಗಳನ್ನು ವಜಾ ಮಾಡುವ ಅಧಿಕಾರ :**
- **ಇವರು ಸರ್ಕಾರದ ಮುಖ್ಯಸ್ಥರು ಆಗಿರುತ್ತಾರೆ-** ಸರ್ಕಾರದ ಎಲ್ಲಾ ಆಗು-ಹೋಗುಗಳಿಗೆ ಇವರೇ ಜವಾಬ್ದಾರರಾಗಿದ್ದು, ವಿವಿಧ ಇಲಾಖಾ ಮಂತ್ರಿಗಳ ನಡುವೆ ಸಮನ್ವಯ ಸಾಧಿಸುವ ಕಾರ್ಯನಿರ್ವಹಿಸುತ್ತಾರೆ.
- **ಸಚಿವ ಸಂಪುಟದ ನಾಯಕರು ಇವರೇ ಆಗಿರುತ್ತಾರೆ-** ಸಚಿವ ಸಂಪುಟದ ಕಾರ್ಯಕಲಾಪಗಳು, ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಷಯಗಳ ಚರ್ಚೆ ಮತ್ತು ನಿರ್ಧಾರ ಇವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

**6. ಕೇಂದ್ರ ಮಂತ್ರಿಮಂಡಲದ ರಚನೆ ಮತ್ತು ಅದರ ಹೊಣೆಗಾರಿಕೆಯನ್ನು ವಿವರಿಸಿ.**

SS STF DIGITAL GROUP

**ಕೇಂದ್ರ ಮಂತ್ರಿಮಂಡಲದ ರಚನೆ:-** ಮಂತ್ರಿಮಂಡಲದ ಮುಖ್ಯಸ್ಥರಾದ ಪ್ರಧಾನ ಮಂತ್ರಿಯವರು ವಿವಿಧ ಇಲಾಖೆಗಳಿಗೆ ಮಂತ್ರಿಗಳನ್ನು ನೇಮಕ ಮಾಡುವಂತೆ ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡುತ್ತಾರೆ ಹಾಗೂ ಮಂತ್ರಿಗಳಿಗೆ ವಿವಿಧ ಖಾತೆಗಳನ್ನು ಹಂಚುತ್ತಾರೆ. ಖಾತೆಗಳನ್ನು ಹಂಚುವಾಗ ಪ್ರಧಾನಿಗೆ ಪೂರ್ಣ ಅಧಿಕಾರವಿದೆ.

**ಕೇಂದ್ರ ಮಂತ್ರಿಮಂಡಲದ ಹೊಣೆಗಾರಿಕೆ:-** ಈ ಮಂತ್ರಿಮಂಡಲವು ಎರಡು ಬಗೆಯ ಹೊಣೆಗಾರಿಕೆಯನ್ನು ಹೊಂದಿದೆ. ಪ್ರತಿ ಇಲಾಖೆಯ ಮಂತ್ರಿಯು ತಮ್ಮ ಖಾತೆಯ ಆಗು-ಹೋಗುಗಳು, ಸಫಲತೆ-ವಿಫಲತೆಗೆ ರಾಷ್ಟ್ರಪತಿಗೆ ವೈಯಕ್ತಿಕ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಮತ್ತು ಮಂತ್ರಿ ಮಂಡಲವು ತನ್ನ ಆಡಳಿತ ನಿರ್ವಹಣೆಗೆ, ನೀತಿ ನಿರ್ಧಾರಗಳು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಲೋಕಸಭೆಗೆ ಸಾಮೂಹಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ.

### ಅಧ್ಯಾಯ -3

## ರಾಜ್ಯ ಸರ್ಕಾರ

**ಅ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತವು _________ ರಾಜ್ಯಗಳನ್ನು ಮತ್ತು _________ ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ.
2. ರಾಜ್ಯ ವಿಧಾನಸಭೆಗೆ ಒಬ್ಬ ಆಂಗ್ಲೋ-ಇಂಡಿಯನ್ನರನ್ನು _________ ರವರು ನಾಮಕರಣ ಮಾಡುತ್ತಾರೆ.
3. ಕರ್ನಾಟಕ ರಾಜ್ಯ ವಿಧಾನಪರಿಷತ್ _________ ಸದಸ್ಯರನ್ನು ಒಳಗೊಂಡಿದೆ.
4. ರಾಜ್ಯ ಮಂತ್ರಿಮಂಡಲವು ________ ಮತ್ತು ________ ವನ್ನು ಒಳಗೊಂಡ ನೈಜ ಕಾರ್ಯಾಂಗವಾಗಿದೆ.
5. ರಾಜ್ಯಪಾಲರನ್ನು __________ ರವರು ನೇಮಿಸುತ್ತಾರೆ.
6. ರಾಜ್ಯದ ಅಡ್ವೋಕೇಟ್ ಜನರಲ್‌ರವರನ್ನು __________ ರವರು ನೇಮಿಸುತ್ತಾರೆ.
7. ಕರ್ನಾಟಕದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ_________
8. ಕರ್ನಾಟಕ ವಿಧಾನಸಭೆಯು ______ ಸದಸ್ಯರನ್ನು ಹೊಂದಿದೆ.

**ಉತ್ತರಗಳು:- (1) 29, 9 (2) 225 (3) 75 (4) ಮುಖ್ಯಮಂತ್ರಿ , ಮಂತ್ರಿಮಂಡಲ (5) ರಾಷ್ಟ್ರಪತಿ (6) ರಾಜ್ಯಪಾಲ (7) 75 (8) 225**

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ರಾಜ್ಯ ವಿಧಾನಸಭೆ ರಚನೆಯನ್ನು ತಿಳಿಸಿ.**

- ವಿಧಾನಸಭೆಯ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖ್ಯೆಯನ್ನು ಆಧರಿಸಿರುತ್ತದೆ.
- ಯಾವುದೇ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 500ಕ್ಕಿಂತ ಹೆಚ್ಚಾಗಿರಬಾರದು, 60ಕ್ಕಿಂತ ಕಡಿಮೆ ಇರಬಾರದು.
- ರಾಜ್ಯಪಾಲರು ವಿಧಾನಸಭೆಯಲ್ಲಿ ಆಂಗ್ಲೋ ಭಾರತೀಯರ ಸರಿಯಾದ ಪ್ರಾತಿನಿಧ್ಯವಿಲ್ಲವೆಂದು ನಿರ್ಧರಿಸಿದರೆ ಒಬ್ಬ ಆಂಗ್ಲೋ ಭಾರತೀಯನನ್ನು ನೇಮಕ ಮಾಡುವ ಅಧಿಕಾರ ಹೊಂದಿರುತ್ತಾರೆ.
- ಕರ್ನಾಟಕ ವಿಧಾನಸಭೆಯು 225 ಸದಸ್ಯರನ್ನು ಹೊಂದಿದೆ.
- 224 ಸದಸ್ಯರು ಚುನಾವಣೆಯ ಮೂಲಕ ಚುನಾಯಿಸಲ್ಪಟ್ಟರೆ ಉಳಿದ ಒಬ್ಬರು ಆಂಗ್ಲೋ-ಇಂಡಿಯನ್ನರನ್ನು ರಾಜ್ಯಪಾಲರು ನಾಮಕರಣ ಮಾಡುತ್ತಾರೆ.

**2. ರಾಜ್ಯ ವಿಧಾನಪರಿಷತ್ ಸದಸ್ಯರು ಯಾವ ಯಾವ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ?**

ರಾಜ್ಯ ವಿಧಾನಪರಿಷತ್ ಸದಸ್ಯರು 5 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ.

1. ವಿಧಾನಸಭಾ ಸದಸ್ಯರಿಂದ,
2. ಸ್ಥಳೀಯ ಸಂಸ್ಥೆಗಳಿಂದ,
3. ಪದವೀಧರ ಕ್ಷೇತ್ರದಿಂದ,
4. ಶಿಕ್ಷಕರ ಕ್ಷೇತ್ರದಿಂದ ಚುನಾಯಿಸಲ್ಪಟ್ಟರೆ,
5. ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮತ್ತು ಸಹಕಾರ ಚಳವಳಿ ಕ್ಷೇತ್ರಗಳಲ್ಲಿನ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ನಾಮಕರಣ ಮಾಡುತ್ತಾರೆ.

**3. ರಾಜ್ಯಪಾಲರ ಅರ್ಹತೆ, ಅಧಿಕಾರ ಅವಧಿಯನ್ನು ವಿವರಿಸಿ.**

**ರಾಜ್ಯಪಾಲರ ಅರ್ಹತೆ:-** (1) ಭಾರತದ ಪ್ರಜೆಯಾಗಿರಬೇಕು.
(2) 35 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
(3) ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು.
(4) ಸಂಸತ್ ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು. ಸದಸ್ಯತ್ವ ಹೊಂದಿದ್ದರೆ ನಂತರ ಸದಸ್ಯತ್ವ ತ್ಯಜಿಸಬೇಕು.

**ರಾಜ್ಯಪಾಲರ ಅಧಿಕಾರ ಅವಧಿ** 5 ವರ್ಷ.

**4. ಮುಖ್ಯಮಂತ್ರಿಯವರ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.**

ಮುಖ್ಯಮಂತ್ರಿಯು ರಾಜ್ಯ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ರಾಜ್ಯ ಸರ್ಕಾರದ ಯಶಸ್ಸು ಅಥವಾ ಅವನತಿ ಇವರ ವರ್ಚಸ್ಸನ್ನು ಆಧರಿಸಿದೆ. ಇವರು ಮಂತ್ರಿಮಂಡಲದ, ಶಾಸಕಾಂಗದ ಮತ್ತು ಬಹುಮತ ಪಡೆದ ಪಕ್ಷದ ನಾಯಕರಾಗಿರುತ್ತಾರೆ.

**ಮುಖ್ಯಮಂತ್ರಿಯ ಅಧಿಕಾರ ಕಾರ್ಯಗಳು**

1. ಸಚಿವರುಗಳ ಪಟ್ಟಿ ಸಿದ್ಧಪಡಿಸಿ ರಾಜ್ಯಪಾಲರಿಗೆ ಶಿಫಾರಸ್ಸು ನೀಡುತ್ತಾರೆ.
2. ಸಚಿವರುಗಳಿಗೆ ಖಾತೆಗಳನ್ನು ಹಂಚುವುದು ಮತ್ತು ಬದಲಾಯಿಸುವ ಮತ್ತು ವಜಾ ಮಾಡಲು ಶಿಫಾರಸ್ಸು ಮಾಡುತ್ತದೆ.
3. ಸರ್ಕಾರದ ಮುಖ್ಯಸ್ಥರಾಗಿದ್ದು, ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.
4. ಸಚಿವ ಸಂಪುಟದ ಅಧ್ಯಕ್ಷತೆ ವಹಿಸಿ, ಸಭೆ ಕರೆಯುವ, ಮುಂದೂಡುವ ಅಧಿಕಾರ ಹೊಂದಿದ್ದಾರೆ.
5. ವಿವಿಧ ಇಲಾಖೆಗಳ ಕಾರ್ಯದಕ್ಷತೆ ಪರಿಶೀಲಿಸಿ ಅವುಗಳ ನಡುವೆ ಹೊಂದಾಣಿಕೆ ಮೂಡಿಸುವ ಕಾರ್ಯ ಮಾಡುತ್ತಾರೆ.
7. ಅವಧಿಗೆ ಮುಂಚೆ ವಿಧಾನಸಭೆಯನ್ನು ವಿಸರ್ಜಿಸುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುತ್ತಾರೆ.
8. ರಾಜ್ಯಪಾಲರು ಮತ್ತು ಸಚಿವ ಸಂಪುಟದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ.
9. ರಾಜ್ಯಪಾಲರಿಗೆ ಸಲಹೆಗಾರನಂತಿದ್ದು, ವಿವಿಧ ಹುದ್ದೆಗಳ ನೇಮಕಾತಿಗೆ ತಮ್ಮ ಶಿಫಾರಸ್ಸನ್ನು ಮಾಡುತ್ತಾರೆ.

**5. ರಾಜ್ಯವಿಧಾನಸಭೆಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.**
ವಿಧಾನಸಭೆಯ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖ್ಯೆಯನ್ನು ಆಧರಿಸಿರುತ್ತದೆ. ಯಾವುದೇ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 500ಕ್ಕಿಂತ ಹೆಚ್ಚಾಗಿರಬಾರದು, 60ಕ್ಕಿಂತ ಕಡಿಮೆ ಇರಬಾರದು. ರಾಜ್ಯಪಾಲರು ವಿಧಾನಸಭೆಯಲ್ಲಿ ಆಂಗ್ಲೋ ಭಾರತೀಯರ ಸರಿಯಾದ ಪ್ರಾತಿನಿಧ್ಯವಿಲ್ಲವೆಂದು ನಿರ್ಧರಿಸಿದರೆ ಒಬ್ಬ ಆಂಗ್ಲೋ ಭಾರತೀಯನನ್ನು ನೇಮಕ ಮಾಡುವ ಅಧಿಕಾರ ಹೊಂದಿರುತ್ತಾರೆ. ಆದರೂ ಚಿಕ್ಕ ರಾಜ್ಯಗಳಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇದೆ. ಉದಾ: ಮಿಜೋರಾಂ, ಗೋವಾದಲ್ಲಿ ತಲಾ 40 ಸದಸ್ಯರಿದ್ದಾರೆ.

**6. ಕರ್ನಾಟಕ ವಿಧಾನ ಪರಿಷತ್ತಿನ ರಚನೆ ತಿಳಿಸಿ.**

- ರಾಜ್ಯ ಶಾಸಕಾಂಗದ ಮೇಲ್ಮನೆಯನ್ನು "ವಿಧಾನ ಪರಿಷತ್ತು" ಎಂದು ಕರೆಯುತ್ತಾರೆ. ಇದು ಖಾಯಂ ಸದನವಾಗಿದೆ.
- ಇದರ ಸದಸ್ಯರ ಸಂಖ್ಯೆಯು ಆ ರಾಜ್ಯದ ವಿಧಾನ ಸಭಾ ಸದಸ್ಯರ 1/3 ರಷ್ಟು ಇರುತ್ತದೆ.
- ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ 40 ಕ್ಕಿಂತ ಕಡಿಮೆ ಇರಬಾರದು.
- ಕರ್ನಾಟಕದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ 75 ಇದೆ.
- ವಿಧಾನ ಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಆಯ್ಕೆ ಆಗುತ್ತಾರೆ.
- ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮುಂತಾದ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ನಾಮಕರಣ ಮಾಡುತ್ತಾರೆ.
- ಪ್ರತಿ ಎರಡು ವರ್ಷಕ್ಕೊಮ್ಮೆ ಅವಧಿ ಪೂರ್ಣಗೊಂಡ 1/3 ರಷ್ಟು ಸದಸ್ಯರು ನಿವೃತ್ತಿಯಾಗುತ್ತಾರೆ.

**ಅಧ್ಯಾಯ-4**

## ನ್ಯಾಯಾಂಗ ವ್ಯವಸ್ಥೆ

**ಅ. ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**
1. ಸರ್ವೋಚ್ಚ ನ್ಯಾಯಾಲಯ _____ ರಂದು ಅಸ್ತಿತ್ವಕ್ಕೆ ಬಂದಿತು.
2. ನ್ಯಾಯಾಧೀಶರ ನಿವೃತ್ತಿ ವಯಸ್ಸು____________
3. ನ್ಯಾಯಾಧೀಶರನ್ನು ____________ ನೇಮಕ ಮಾಡುತ್ತಾರೆ.
4. ಕಂದಾಯ ಮಂಡಳಿ ಮುಖ್ಯಸ್ಥರು____________
5. ಜನತಾ ನ್ಯಾಯಾಲಯಗಳು ______ ರಲ್ಲಿ ಅಸ್ತಿತ್ವಕ್ಕೆ ಬಂದವು.
6. ___________ವೇ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯವಾಗಿದೆ.
7. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಸ್ತುತ ಮುಖ್ಯ ನ್ಯಾಯಾಧೀಶರನ್ನೊಳಗೊಂಡು _________ ಮಂದಿ ನ್ಯಾಯಾಧೀಶರಿದ್ದಾರೆ.

**ಉತ್ತರಗಳು:- (1) ಜನವರಿ 28, 1950 (2) 62 (3) ರಾಷ್ಟ್ರಪತಿ (4) ಕಂದಾಯ ಕಾರ್ಯದರ್ಶಿಗಳು (5) 1985 (6) ಸರ್ವೋಚ್ಚ ನ್ಯಾಯಾಲಯ (7) 31**

**ಆ. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಕಾರ್ಯಗಳ ಕುರಿತು ವಿವರಿಸಿ.**

**ಅಧಿಕಾರ ಕಾರ್ಯಗಳು**

- **ಮೂಲ ಅಧಿಕಾರ ವ್ಯಾಪ್ತಿ :** ಸರ್ವೋಚ್ಚ ನ್ಯಾಯಾಲಯದಲ್ಲಿ ನೇರವಾಗಿ ಮೊಕದ್ದಮೆ ಹೂಡುವುದೇ ಮೂಲ ಅಧಿಕಾರ ವ್ಯಾಪ್ತಿ. ಕೇಂದ್ರ-ರಾಜ್ಯಗಳ ನಡುವೆ, ರಾಜ್ಯ-ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿದೆ.
- **ಮೇಲ್ಮನವಿ ಅಧಿಕಾರ ವ್ಯಾಪ್ತಿ:**
- **ಸರ್ಕಾರಕ್ಕೆ ನೀಡುವ ಸಲಹಾ ಅಧಿಕಾರ ವ್ಯಾಪ್ತಿ :**
- ಸರ್ವೋಚ್ಚ ನ್ಯಾಯಾಲಯವು ದಾಖಲೆಗಳ ನ್ಯಾಯಾಲಯವಾಗಿ,
- ಕೇಂದ್ರ ಮತ್ತು ರಾಜ್ಯಗಳಿಗೆ ಮುಖ್ಯ ಸಲಹೆಗಾರನಾಗಿ,

- ವಿಶೇಷ ರಿಟ್ ಅರ್ಜಿಗಳನ್ನು ಹೊರಡಿಸುವ ಅಧಿಕಾರ ಪಡೆದಿದೆ.

**2. ಉಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕಾರ್ಯಗಳ ಕುರಿತು ವಿವರಿಸಿ.**

1) ನಾಗರಿಕ (ಅಊಟ) ಮತ್ತು ಅಪರಾಧ (ಅಡಿಓಟಿಚಿಟ) ವಿವಾದಗಳು, ನೌಕಾಯಾನ, ವೈವಾಹಿಕ ಸಂಬಂಧಗಳು, ನ್ಯಾಯಾಂಗ ನಿಂದನೆ ಮುಂತಾದ ವಿವಾದಗಳನ್ನು ಇತ್ಯರ್ಥಪಡಿಸುವ ಮೂಲ ಅಧಿಕಾರ ಕಾರ್ಯ.

2) ಅಧೀನ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯ ಮೇಲ್ಮನವಿ ಸ್ವೀಕರಿಸಿ ಇತ್ಯರ್ಥಪಡಿಸುವ ಮನವಿ ಅಧಿಕಾರ ಕಾರ್ಯ.

3) ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳನ್ನು ತನ್ನಲ್ಲಿಗೆ ವರ್ಗಾಯಿಸುವಂತೆ, ಕೆಲವು ನಿಯಮಗಳನ್ನು ಅಧೀನ ನ್ಯಾಯಾಲಯಗಳು ಪಾಲಿಸುವಂತೆ ಮತ್ತು ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿಕೊಳ್ಳುವಂತೆ ನಿರ್ದೇಶನ ನೀಡಿ ಅವುಗಳ ಮೇಲ್ವಿಚಾರಣೆ ಮಾಡುವ ಅಧಿಕಾರ ಕಾರ್ಯವನ್ನು ಹೊಂದಿದೆ. ಇವುಗಳಲ್ಲದೆ ಸಿಬ್ಬಂದಿ ನೇಮಕ ಮತ್ತು ನಿಯಂತ್ರಣ, ಮೂಲಭೂತ ಹಕ್ಕುಗಳ ರಕ್ಷಣೆ, ವಿವಿಧ ರಿಟ್ ಅರ್ಜಿಗಳನ್ನು ಸ್ವೀಕರಿಸಿ ನ್ಯಾಯ ಒದಗಿಸುವ ಕಾರ್ಯ ನಿರ್ವಹಿಸುತ್ತದೆ.

**3. ನಾಗರಿಕ ನ್ಯಾಯಾಲಯದ ಅಡಿಯಲ್ಲಿ ಇರುವ ಅಧೀನ ನ್ಯಾಯಾಲಯಗಳಾವುವು?**

ನಾಗರಿಕ ನ್ಯಾಯಾಲಯಗಳ ಅಡಿಯಲ್ಲಿ ಕೆಳಕಂಡ ಅಧೀನ ನ್ಯಾಯಾಲಯಗಳಿವೆ.

(1) ಅಧೀನ ನ್ಯಾಯಾಧೀಶರ ನ್ಯಾಯಾಲಯ

(2) ಹೆಚ್ಚುವರಿ ಅಧೀನ ನ್ಯಾಯಾಧೀಶರ ನ್ಯಾಯಾಲಯ

(3) ಮುನ್ಸೀಫ್ ನ್ಯಾಯಾಲಯ

(4) ಹೆಚ್ಚುವರಿ ಮುನ್ಸೀಫ್ ನ್ಯಾಯಾಲಯ.

**4. ಅಪರಾಧ ನ್ಯಾಯಾಲಯದ ಕುರಿತು ಬರೆಯಿರಿ.**

1. ಅಪರಾಧ ನ್ಯಾಯಾಲಯವು ಏಪ್ರಿಲ್ 1, 1974 ರಂದು ಅಸ್ತಿತ್ವಕ್ಕೆ ಬಂದಿತು. ಇದನ್ನು ಜಿಲ್ಲಾ ದಂಡಾಧಿಕಾರಿ ನ್ಯಾಯಾಲಯ ಎಂದು ಕರೆಯಲಾಗುತ್ತದೆ.
2. ಇವು ರಾಜ್ಯ ಶ್ರೇಷ್ಠ ನ್ಯಾಯಾಲಯದ ನಿಯಂತ್ರಣದಲ್ಲಿರುತ್ತವೆ.
3. ಅಪರಾಧ ನ್ಯಾಯಾಲಯಗಳಲ್ಲಿ ಜಿಲ್ಲಾ ಮಟ್ಟದ ಉನ್ನತ ನ್ಯಾಯಾಲಯವೆಂದರೆ ಸೆಷನ್ಸ್ ನ್ಯಾಯಾಲಯ.
4. ಜಿಲ್ಲಾ ನ್ಯಾಯಾಧೀಶರೆ ಇದರ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಾರೆ.
5. ಕೊಲೆ, ದರೋಡೆ, ಡಕಾಯಿತಿ ಮುಂತಾದ ಅಪರಾಧಗಳಿಗೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ ನಡೆಸುತ್ತದೆ.
6. ಈ ನ್ಯಾಯಾಲಯವು ಮರಣ ದಂಡನೆಯನ್ನೊಳಗೊಂಡು ಜೀವಾವಧಿ ಶಿಕ್ಷೆ ನೀಡುವ ಅಧಿಕಾರ ಪಡೆದಿದೆ.

ನ್ಯಾಯಾಲಯದ ಅಡಿಯಲ್ಲಿ ಇತರೆ ಅಪರಾಧ ನ್ಯಾಯಾಲಯಗಳಿವೆ.

1. ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ:
2. ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ
3. ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ:
4. ತೃತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ

**5. ಕಂದಾಯ ನ್ಯಾಯಾಲಯಗಳ ಕುರಿತು ಟಿಪ್ಪಣಿ ಬರೆಯಿರಿ.**

- ಪ್ರತಿಯೊಂದು ಜಿಲ್ಲೆಯು ಕಂದಾಯ ನ್ಯಾಯಾಲಯಗಳನ್ನು ಹೊಂದಿರುತ್ತವೆ.
- ಇವು ಕಂದಾಯಕ್ಕೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ, ಭೂ ದಾಖಲೆಗಳು, ಭೂ ಕಂದಾಯ ಮುಂತಾದವುಗಳ ವಿಚಾರಣೆ ನಡೆಸುತ್ತವೆ.
  ಕಂದಾಯ ನ್ಯಾಯಾಲಯವು ಈ ಕೆಳಕಂಡ ನ್ಯಾಯಾಲಯಗಳನ್ನು ಒಳಗೊಂಡಿದೆ.

1. ತಹಸೀಲ್ದಾರ್ ನ್ಯಾಯಾಲಯ :
2. ಜಿಲ್ಲಾ ಉಪವಿಭಾಗಾಧಿಕಾರಿಗಳ ನ್ಯಾಯಾಲಯ
3. ಜಿಲ್ಲಾ ಕಂದಾಯ ನ್ಯಾಯಾಲಯ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ
4. ಆಯುಕ್ತರ ನ್ಯಾಯಾಲಯ
5. ಕಂದಾಯ ಮಂಡಳಿ

**6. ಜನತಾ ನ್ಯಾಯಾಲಯ (ಲೋಕ್ ಅದಾಲತ್) ಸ್ಥಾಪಿಸುವ ಉದ್ದೇಶಗಳೇನು?**

- ಭಾರತದಲ್ಲಿ ನ್ಯಾಯ ವಿತರಣೆಯು ವಿಳಂಬವೂ ಹಾಗೂ ವೆಚ್ಚದಾಯಕವೂ (ದುಬಾರಿ) ಆಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ಇತ್ಯರ್ಥಪಡಿಸಲು ಜನತಾ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದವು.
- ಒಂದು ನಿರ್ದಿಷ್ಟ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ವ್ಯಕ್ತಿಗಳ ನಡುವಿನ ವಿವಾದಗಳನ್ನು ರಾಜಿ ಸಂಧಾನ ಮಾಡಿಸುವುದು ಅಥವಾ ಇತ್ಯರ್ಥ ಪಡಿಸುವ ಉದ್ದೇಶವನ್ನು ಹೊಂದಿದೆ.

## ಅಧ್ಯಾಯ – 5

# ಭಾರತದ ಚುನಾವಣಾ ವ್ಯವಸ್ಥೆ

**ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮತದಾರರ ಪಟ್ಟಿಯು ______________ ವರ್ಷಗಳಿಗೊಮ್ಮೆ ಪರಿಷ್ಕೃತಗೊಳ್ಳುತ್ತದೆ.
2. ಪ್ರಚಾರ ಕಾರ್ಯವು ಮತದಾನದ ದಿನಕ್ಕಿಂತ __________ ಗಂಟೆಗಳ ಮುಂಚಿತವಾಗಿ ಮುಕ್ತಾಯವಾಗುತ್ತದೆ.

SS STF DIGITAL GROUP

3. ರಾಜಕೀಯ ಪಕ್ಷಗಳಿಗೆ ___________ ಮಾನ್ಯತೆ ನೀಡುತ್ತವೆ.
4. ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ ಇರುವ ಸಂಸ್ಥೆ ____________
5. ಮಾಹಿತಿ ಹಕ್ಕು ಕಾಯ್ದೆಯನ್ನು ______________ ರಲ್ಲಿ ಜಾರಿಗೊಳಿಸಲಾಗಿದೆ.
6. ಎರಡಕ್ಕಿಂತ ಹೆಚ್ಚು ಪಕ್ಷಗಳ ಸಹಕಾರದಿಂದ ರಚಿತಗೊಂಡ ಸರ್ಕಾರವನ್ನು _______ ಎಂದು ಕರೆಯುತ್ತಾರೆ.
7. ಮತಗಟ್ಟೆಗಳಲ್ಲಿ ಮತದಾರನ ಗುರುತು ಖಾತ್ರಿಯಾದ ಮೇಲೆ ಅವನಿಗೆ ಮತದಾನಕ್ಕಾಗಿ ___________ ವನ್ನು ನೀಡುತ್ತಾರೆ.

**ಉತ್ತರಗಳು:- (1) ಪ್ರತಿ ವರ್ಷ (2) 48 (3) ಚುನಾವಣಾ ಆಯೋಗ (4) ಭಾರತೀಯ ಪತ್ರಿಕಾ ಪರಿಷತ್ತು (5) 2005 (6) 'ಸಮ್ಮಿಶ್ರ ಸರ್ಕಾರ' (7) 'ಮತ ಪತ್ರ' (ಃಚಿಟಟಠಿ ಕಚಿಠಿಜಡಿ)**

**ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಮತದಾರರ ಪಟ್ಟಿಯ ಕುರಿತು ಟಿಪ್ಪಣಿ ಬರೆಯಿರಿ.**

ಮತದಾನ ಮಾಡುವವರ ಹೆಸರು ಹಾಗೂ ಕೆಲವು ವಿವರಗಳನ್ನು ಒಳಗೊಂಡಿರುವ ಪಟ್ಟಿಯನ್ನು ಮತದಾರರ ಪಟ್ಟಿ ಎಂದು ಕರೆಯುತ್ತಾರೆ. ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗವು ಚುನಾವಣೆಗಿಂತ ಮುಂಚಿತವಾಗಿಯೇ ಸಿದ್ಧಪಡಿಸಿಕೊಳ್ಳುತ್ತದೆ. ಮತದಾರರ ಪಟ್ಟಿಯು ಪ್ರತಿ ವರ್ಷ ಪರಿಷ್ಕೃತಗೊಳ್ಳುತ್ತದೆ. ಹೀಗೆ ಪರಿಷ್ಕೃತಗೊಳ್ಳುವ ಸಂದರ್ಭದಲ್ಲಿ ಯಾರಿಗೆ ಹದಿನೆಂಟು (18) ವರ್ಷಗಳು ತುಂಬಿರುತ್ತವೋ ಅವರ ಹೆಸರುಗಳನ್ನು ಪಟ್ಟಿಗೆ ಹೊಸದಾಗಿ ಸೇರ್ಪಡೆ ಮಾಡಿಕೊಂಡು, ಯಾರು ಮರಣ ಹೊಂದಿರುತ್ತಾರೋ ಅಂತಹವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗುತ್ತದೆ. ಈ ಮತದಾರರ ಪಟ್ಟಿಯು ಚುನಾವಣಾ ಅಧಿಕಾರಿಗಳು ಮತದಾರರನ್ನು ಮತದಾನದ ವೇಳೆ ಗುರುತಿಸಲು ಸಹಾಯಕವಾಗುತ್ತದೆ.

**2. 'ರಾಜಕೀಯ ಪಕ್ಷಗಳು ಪ್ರತಿನಿಧಿಗಳು ಸರ್ಕಾರ ಮತ್ತು ಜನ ಸಮುದಾಯದ ನಡುವಿನ ಕೊಂಡಿಯಿದ್ದಂತೆ' ಸಮರ್ಥಿಸಿರಿ.**

- ಪ್ರಜಾಪ್ರಭುತ್ವ ಮಾದರಿ ಸರ್ಕಾರಗಳಲ್ಲಿ ರಾಜಕೀಯ ಪಕ್ಷಗಳು ಅವಶ್ಯಕ ಮತ್ತು ಅನಿವಾರ್ಯ.
- ಈ ರಾಜಕೀಯ ಪಕ್ಷಗಳು ಪ್ರತಿನಿಧಿಗಳು, ಸರ್ಕಾರ ಮತ್ತು ಜನ ಸಮುದಾಯದ ನಡುವಿನ ಕೊಂಡಿಯಿದ್ದಂತೆ.
- ರಾಜಕೀಯ ಪಕ್ಷಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ನಿಯಮಗಳನ್ನು ಹಾಗೂ ಕಾನೂನುಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.
- ರಾಜಕೀಯ ಪಕ್ಷಗಳು ಕೆಲವೊಮ್ಮೆ ರಾಜಕೀಯ ಪ್ರವೇಶ ಬಯಸುವವರಿಗೆ ತರಬೇತಿ ಕೇಂದ್ರಗಳಾಗುತ್ತವೆ.

**3. ಸಮ್ಮಿಶ್ರ ಸರ್ಕಾರಗಳ ಕುರಿತು ಬರೆಯಿರಿ.**

ಯಾವುದಾದರೊಂದು ಪಕ್ಷ ಸ್ಪಷ್ಟ ಬಹುಮತ ಪಡೆದರೆ ಅಂತಹ ಪಕ್ಷ ಸರ್ಕಾರ ರಚಿಸಿ ಆಡಳಿತ ನಡೆಸಿಕೊಂಡು ಹೋಗುತ್ತದೆ. ಎಷ್ಟೋ ಸಂದರ್ಭದಲ್ಲಿ ಯಾವ ಪಕ್ಷಕ್ಕೂ ಸರ್ಕಾರ ರಚನೆಗೆ ಬೇಕಿರುವ ಸ್ಪಷ್ಟ ಬಹುಮತ ಬರುವುದಿಲ್ಲ. ಅಂತಹ ಸಂದರ್ಭವನ್ನು "ಅತಂತ್ರ ಲೋಕಸಭೆ ಅಥವಾ ಅತಂತ್ರ ವಿಧಾನಸಭೆ" (ಊಊಟಿಂ ಕಚಿಡಿಟುಚಿಟಿಚಿಟಿಣ ಈ ಗಿಜಟಿಟಿಚಿಥಿ) ಎನ್ನಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವು ಪಕ್ಷಗಳು ಸಂಯೋಜನೆಗೊಂಡು ಅವಶ್ಯವಿರುವ ಸದಸ್ಯ ಬಲವನ್ನು ಸಾಬೀತುಪಡಿಸಿ ಸರ್ಕಾರ ರಚಿಸಿಕೊಳ್ಳುತ್ತವೆ. ಈ ಪ್ರಕಾರದ ಮೈತ್ರಿಗೆ 'ಮತದಾನೋತ್ತರ ಮೈತ್ರಿ' (ಕಿಊ-ಕಟಟ ಚಿಟಟಚಿಟಿಛಿಜ) ಎನ್ನುತ್ತಾರೆ. ಕೆಲವೊಮ್ಮೆ ಚುನಾವಣೆಗೆ ಮುಂಚಿತವಾಗಿಯೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳು ಕೂಡಿಕೊಂಡು ಸ್ಥಾನ ಹಂಚಿಕೆಯನ್ನು ಮಾಡಿಕೊಂಡು ಚುನಾವಣೆಗೆ ಜಂಟಿಯಾಗಿ ಸ್ಪರ್ಧಿಸುತ್ತವೆ. ಈ ಪ್ರಕಾರದ ಮೈತ್ರಿಯನ್ನು 'ಮತದಾನ ಪೂರ್ವ ಮೈತ್ರಿ' (ಕಡಿಜ-ಕಟಟ ಚಿಟಟಚಿಟಿಛಿಜ)ಎಂದು ಕರೆಯುತ್ತಾರೆ. ಈ ಎರಡೂ ಪ್ರಕಾರದ ಮೈತ್ರಿಗಳು ಯಾವಾಗ ಅತಂತ್ರ ಸ್ಥಿತಿ ಉಂಟಾಗುತ್ತದೆಯೋ ಆ ಸಂದರ್ಭದಲ್ಲಿ ಸರ್ಕಾರ ರಚಿಸಿಕೊಳ್ಳಲು ಸಹಕಾರಿಯಾಗುತ್ತವೆ. ಈ ಪ್ರಕಾರವಾಗಿ ಎರಡಕ್ಕಿಂತ ಹೆಚ್ಚು ಪಕ್ಷಗಳ ಸಹಕಾರದಿಂದ ರಚಿತಗೊಂಡ ಸರ್ಕಾರವನ್ನು 'ಸಮ್ಮಿಶ್ರ ಸರ್ಕಾರ' ಎಂದು ಕರೆಯುತ್ತಾರೆ.

## ಅಧ್ಯಾಯ – 6

# ದೇಶದ ರಕ್ಷಣೆ

**ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ನಮ್ಮ ರಕ್ಷಣಾ ನೀತಿಯ ಮುಖ್ಯ ಗುರಿ ______________ ಕಾಪಾಡುವುದಾಗಿದೆ.
2. ನಮ್ಮ ಮೂರು ಸೇನಾಪಡೆಗಳ ಸರ್ವೋಚ್ಚ ಪ್ರಧಾನ ದಂಡನಾಯಕರು __________ .
3. ಭೂ ಸೇನಾ ಮುಖ್ಯಸ್ಥರನ್ನು ___________ ಎಂದು ಕರೆಯಲಾಗುತ್ತದೆ.
4. ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿ _______ ಯಲ್ಲಿದೆ.
5. ಹಿಂದೂಸ್ಥಾನದ ಹಡಗು ಕಾರ್ಖಾನೆ _________ ನಲ್ಲಿದೆ.
6. ಗಡಿ ಭದ್ರತಾ ಪಡೆಯ ತರಬೇತಿ ಕೇಂದ್ರ ________ ದಲ್ಲಿದೆ.
7. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು _____________ ರಲ್ಲಿ ಸ್ಥಾಪನೆಯಾಯಿತು.

**ಉತ್ತರಗಳು:- (1) ಸಾರ್ವಭೌಮತೆ (2) ರಾಷ್ಟ್ರಪತಿ (3) ಜೆನರಲ್ (4) ದೆಹಲಿ (5) ವಿಶಾಖಪಟ್ಟಣ (6) ಬೆಂಗಳೂರಿನ ಹತ್ತರ ಯಲಹಂಕ (7) 1920**

**<u>ಖಖ. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.</u>**

**1. ಕಾರವಾರದ ಬಳಿ ಇರುವ ನೌಕಾ ನೆಲೆಯನ್ನು ಏನೆಂದು ಕರೆಯಲಾಗುತ್ತದೆ?**

ಕಾರವಾರದ ಬಳಿ ಇರುವ ನೌಕಾ ನೆಲೆಯನ್ನು ಸೀಬರ್ಡ್ ನೌಕಾನೆಲೆ ಎಂದು ಕರೆಯಲಾಗುತ್ತದೆ.

**2. ನಮ್ಮ ರಕ್ಷಣಾ ಸಚಿವಾಲಯದ ನಾಲ್ಕು ಇಲಾಖೆಗಳಾವುವು?**

ರಕ್ಷಣಾ ಸಚಿವಾಲಯದ 4 ಇಲಾಖೆಗಳು-

(1) ರಕ್ಷಣಾ ವಿಭಾಗ

(2) ರಕ್ಷಣಾ ಉತ್ಪಾದನಾ ವಿಭಾಗ

(3) ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗ ಮತ್ತು

(4) ನಿವೃತ್ತಿ ಸೇನಾ ಕಲ್ಯಾಣ ವಿಭಾಗ.3. ಭಾರತದ ಭೂಸೇನಾ ರಚನೆಯನ್ನು ವಿವರಿಸಿ.

**4. ಭಾರತೀಯ ಭೂಸೇನೆ ಕಮಾಂಡ್‌ಗಳಾವುವು?**

1) ಪಶ್ಚಿಮ ಕಮಾಂಡ್ - ಚಾಂದಿಮಂದಿರ್ (ಚಂಡೀಗಢ)

2) ಪೂರ್ವ ಕಮಾಂಡ್ - ಕೋಲ್ಕತ್ತಾ (ಪಶ್ಚಿಮಬಂಗಾಳ)

3) ಉತ್ತರ ಕಮಾಂಡ್ - ಉದಾಂಪುರ್ (ಕಾಶ್ಮೀರ)

4) ದಕ್ಷಿಣ ಕಮಾಂಡ್ - ಪುಣೆ (ಮಹಾರಾಷ್ಟ್ರ)

5) ಕೇಂದ್ರ ಕಮಾಂಡ್ - ಲಕ್ನೋ (ಉತ್ತರಪ್ರದೇಶ)

6) ತರಬೇತಿ ಕಮಾಂಡ್ - ಮಾವ್ (ಮಧ್ಯಪ್ರದೇಶ)

7) ವಾಯುವ್ಯ ಕಮಾಂಡ್ - ಜೈಪುರ (ರಾಜಸ್ತಾನ)

**5. ಭಾರತೀಯ ವಾಯುದಳದ ಕಾರ್ಯಗಳನ್ನು ವಿವರಿಸಿ.**

- ಭಾರತೀಯ ವಾಯುದಳವು ಯುದ್ಧ ಮತ್ತು ಶಾಂತಿ ಕಾಲದಲ್ಲಿ ದೇಶಕ್ಕೆ ಧೈರ್ಯದಿಂದ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ.
- ಸಮಗ್ರ ರಾಷ್ಟ್ರೀಯ ರಕ್ಷಣೆ, ಭದ್ರತೆ ಹಾಗೂ ಸ್ಥಿರತೆಯನ್ನು ಕಾಪಾಡುವಲ್ಲಿ ಯಶಸ್ಸು ಸಾಧಿಸಿದೆ.
- ಇದು ಐದು ಪರಿಣಾಮಕಾರಿ ಕಮಾಂಡನ್ನು ಮತ್ತು ಎರಡು ಔಪಚಾರಿಕ ಕಮಾಂಡನ್ನು ಹೊಂದಿದೆ.

**6. ಸೇನಾ ನೇಮಕಾತಿಗೆ ಇರಬೇಕಾದ ಅರ್ಹತೆಗಳಾವುವು?**

ಸೇನಾ ನೇಮಕಾತಿಗೆ ಸರ್ಕಾರ ನಿಗದಿಪಡಿಸಿದ ಕೆಲವು ದೈಹಿಕ, ಮಾನಸಿಕ ಆರೋಗ್ಯ, ಶೈಕ್ಷಣಿಕವಾದ ಸಾಮಾನ್ಯ ಅರ್ಹತೆ ಮತ್ತು ಆ ಹುದ್ದೆಗೆ ಬೇಕಾದ ತಾಂತ್ರಿಕ ಅರ್ಹತೆಯಂತಹ ವಿಶೇಷ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

**7. ಎನ್.ಸಿ.ಸಿ. ಯ ಗುರಿಗಳೇನು? ಅದರ ಸೌಲಭ್ಯಗಳಾವುವು?**

**ಎನ್.ಸಿ.ಸಿ. ಯ ಮುಖ್ಯ ಗುರಿ:-**

- ವೈಯಕ್ತಿಕ ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು,
- ನಾಯಕತ್ವ ಗುಣ ಬೆಳೆಸಿಕೊಳ್ಳುವುದು,
- ಗೆಳೆತನ ಬೆಳೆಸಿಕೊಳ್ಳುವುದು ಹಾಗೂ ಆದರ್ಶ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದಾಗಿದೆ.

**ಈ ಕೆಡೆಟ್‌ಗಳಿಗೆ ಹಲವು ಸೌಲಭ್ಯಗಳನ್ನು ಒದಗಿಸಲಾಗಿದೆ. ಅವುಗಳೆಂದರೆ -**

 ಎನ್.ಸಿ.ಸಿ. ತರಬೇತಿ ಪಡೆದವರಿಗೆ ರಕ್ಷಣಾ ಸೇನೆಗಳಿಗೆ ಸೇರಲು ವಿಶೇಷ ಅವಕಾಶ.

 ತರಬೇತಿಯಲ್ಲಿ ವಿಶಿಷ್ಟ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ವೃತ್ತಿಪರ ಕಾಲೇಜುಗಳಲ್ಲಿ ಮೀಸಲಾತಿ ಸೌಲಭ್ಯ.

 ತರಬೇತಿಯಲ್ಲಿ ಆಯುಧ ಶಿಕ್ಷಣ ನೀಡುವುದು.

 ದೂರ ನಡಿಗೆ (ಹೈಕಿಂಗ್)

 ಸಾಹಸ ಪ್ರಯಾಣ (ಟ್ರೆಕಿಂಗ್)

 ಜಾರಾಟ (ಗ್ಲೈಡಿಂಗ್)

 ಪರ್ವತಾರೋಹಣ (ಸ್ಕೇಲಿಂಗ್)

**8. ಭಾರತದ ರೆಡ್ ಕ್ರಾಸ್ ಸಂಸ್ಥೆಯ ಸಂಘಟನೆಯನ್ನು ವಿವರಿಸಿ.**

ಭಾರತದ ರೆಡ್ ಕ್ರಾಸ್ ಸಂಸ್ಥೆಯ ಸಂಘಟನೆಯು 1920ರಲ್ಲಿ ಅಸ್ತಿತ್ವಕ್ಕೆ ತಂದಿತು. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ. ಭಾರತದ ರೆಡ್‌ಕ್ರಾಸ್ ಸಂಸ್ಥೆಯು ಮಾನವೀಯ ಸ್ವಯಂ ಸಂಘಟನೆಯಾಗಿದ್ದು, ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು 700 ಶಾಖೆಗಳನ್ನು ಒಳಗೊಂಡಿದೆ. ಭಾರತದ ರಾಷ್ಟ್ರಪತಿಗಳು ಇದರ ಅಧ್ಯಕ್ಷರಾಗಿದ್ದರೆ, ರಾಜ್ಯಶಾಖೆಗೆ ರಾಜ್ಯಪಾಲರು ಅಧ್ಯಕ್ಷರಾಗಿರುತ್ತಾರೆ. ಅಲ್ಲದೆ ಒಬ್ಬರು ಸೆಕ್ರೆಟರಿ ಜನರಲ್ ಮುಖ್ಯ ಕಾರ್ಯನಿರ್ವಾಹಕರಾಗಿರುತ್ತಾರೆ. ಈ ಸಂಸ್ಥೆಯು 19 ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿಯನ್ನು ಹೊಂದಿದ್ದು, ಕಾರ್ಯಾಧ್ಯಕ್ಷ ಮತ್ತು 6 ಮಂದಿ ಸದಸ್ಯರನ್ನು ರಾಷ್ಟ್ರಪತಿಗಳು ನಾಮಕರಣ ಮಾಡಿದರೆ ಉಳಿದ 12 ಸದಸ್ಯರನ್ನು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಶಾಖೆಗಳು ಮತದಾನದ ಮೂಲಕ ಚುನಾಯಿಸುತ್ತಾರೆ. ಈ ಸಂಘಟನೆಯು ರಾಷ್ಟ್ರದಲ್ಲಿನ ಆಪತ್ತು ಮತ್ತು ತುರ್ತು ಪರಿಸ್ಥಿತಿಯಂತಹ ಸಂದರ್ಭದಲ್ಲಿ ಜನರಿಗೆ ನೆರವು ನೀಡುತ್ತದೆ. ಇದು ಯಾವುದೇ ಭೇದಭಾವವಿಲ್ಲದೆ ಯುದ್ಧಭೂಮಿಯಲ್ಲಿನ ಗಾಯಾಳುಗಳಿಗೆ, ಅನಾರೋಗ್ಯಪೀಡಿತರಿಗೆ ಸೇವೆ ಸಲ್ಲಿಸುತ್ತದೆ. ಈ ಸಂಸ್ಥೆಯು 7 ಮೂಲಭೂತ ತತ್ವಗಳನ್ನು ಹೊಂದಿದೆ. ಅವುಗಳೆಂದರೆ (1) ಮಾನವೀಯತೆ (2) ನಿಷ್ಪಕ್ಷಪಾತ (3) ತಾಟಸ್ಥ್ಯ (4) ಸ್ವಾತಂತ್ರ್ಯ (5) ಸ್ವಯಂಸೇವೆ (6) ಏಕತೆ ಮತ್ತು (7) ವಿಶ್ವವ್ಯಾಪಕತೆ.

## ಅಧ್ಯಾಯ - 7

## ರಾಷ್ಟ್ರೀಯ ಭಾವೈಕ್ಯತೆ

**ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತ ಒಂದು ಜಾತ್ಯಾತೀತ ರಾಷ್ಟ್ರವಾಗಿದ್ದು __________ ವಿರೋಧಿ ರಾಷ್ಟ್ರವಲ್ಲ.
2. ಕೋಮುವಾದವು ನಮ್ಮ __________ ಗೆ ಒಂದು ದೊಡ್ಡ ಅಪಾಯವಾಗಿದೆ.
3. ಗಣರಾಜ್ಯೋತ್ಸವವು __________ ಹಬ್ಬಗಳಲ್ಲಿ ಒಂದಾಗಿದೆ.
4. ಭಾರತವು ರಾಷ್ಟ್ರೀಯ ಭಾಷೆಗಳನ್ನಾಗಿ ಅಂಗೀಕರಿಸಿರುವ ಭಾಷೆಗಳ ಸಂಖ್ಯೆ ________ .
5. ನಮ್ಮ ರಾಷ್ಟ್ರೀಯ ಪ್ರಾಣಿ ____________ .
6. ನಮ್ಮ ರಾಷ್ಟ್ರೀಯ ಚಿನ್ಹೆಗಳು ಅಥವಾ ರಾಷ್ಟ್ರಲಾಂಛನ ಮುಂತಾದುವು _________ ಎಂದು ಗುರುತಿಸಿಕೊಳ್ಳಲು ಸಹಾಯಕವಾಗಿವೆ.

**ಉತ್ತರಗಳು:- (1) ಯಾವುದೇ ಧರ್ಮ (2) ರಾಷ್ಟ್ರೀಯ ಸಮಗ್ರತೆ (3) ರಾಷ್ಟ್ರೀಯ (4) 22 (5) ಹುಲಿ (6) ನಾವೆಲ್ಲಾ ಒಂದು**

**ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳ ಜೊತೆ ಚರ್ಚಿಸಿ ಉತ್ತರಿಸಿ.**

**1. ರಾಷ್ಟ್ರೀಯತೆ ಎಂದರೇನು?**

ತಾವು ವಾಸಿಸುವ ನೆಲವನ್ನು ಮಾತೃಭೂಮಿ ಎಂದು ತಿಳಿಯುವ ಜನಸಮೂಹ, ಆ ಜನ ಸಮೂಹದಲ್ಲಿ ಪರಸ್ಪರ ಸೋದರತೆಯ ಭಾವನೆ ಮತ್ತು ರಾಷ್ಟ್ರದ ಸುಖ-ದುಃಖಗಳಲ್ಲಿ ಸಮಾನ ಭಾಗಿತ್ವ. ಇಂತಹ ಭಾವನೆಯನ್ನು ರಾಷ್ಟ್ರೀಯತೆ ಎನ್ನುತ್ತಾರೆ.

**2. ರಾಷ್ಟ್ರೀಯ ಐಕ್ಯತೆ ಎಂದರೇನು?**

ಒಂದು ರಾಷ್ಟ್ರದ ಜನರು ನಾವೆಲ್ಲಾ ಒಂದೇ ಎನ್ನುವ ಭಾವನೆಯೇ ರಾಷ್ಟ್ರೀಯ ಐಕ್ಯತೆ. ಅಂದರೆ ವಿವಿಧ ಜಾತಿ, ಧರ್ಮ, ಪ್ರಾದೇಶಿಕತೆ ಮತ್ತು ವಿವಿಧ ಭಾಷೆಗಳನ್ನು ಮಾತನಾಡುವ ಜನರು ನಾವೆಲ್ಲಾ ಒಂದೇ ಎಂದು ಗುರುತಿಸಿಕೊಳ್ಳುವುದು.

**3. ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಅಂಶಗಳಾವುವು?**

**ವಿವಿಧತೆಯಲ್ಲಿ ಐಕ್ಯತೆ ಮೂಡಿಸುವ ಅಂಶಗಳು**

1. **ಭೌಗೋಳಿಕ ಐಕ್ಯತೆ :** ಭಾರತವು ವಿಶ್ವದ ಇತರ ರಾಷ್ಟ್ರಗಳಿಂದ ಬೇರ್ಪಡಿಸಿರುವ ಹಿಮಾಲಯ ಪರ್ವತ, ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರ, ಅರಬ್ಬೀ ಸಮುದ್ರ ಇವುಗಳು ಭಾರತವನ್ನು ನೈಸರ್ಗಿಕವಾಗಿ ಐಕ್ಯಗೊಳ್ಳುವಂತೆ ಮಾಡಿವೆ.
2. **ರಾಜಕೀಯ ಐಕ್ಯತೆ-** ಒಂದೇ ಸಂವಿಧಾನ, ಏಕ ರೀತಿಯ ಕಾನೂನು, ಶಿಕ್ಷಣ ಕ್ರಮ, ಏಕೀಕೃತ ನ್ಯಾಯಾಂಗ ವ್ಯವಸ್ಥೆ, ಬಲಿಷ್ಠ ಕೇಂದ್ರ ಸರ್ಕಾರದ ಆಡಳಿತಗಳಿಂದ ರಾಜಕೀಯ ಐಕ್ಯತೆಯನ್ನು ಸಾಧಿಸಿದೆ.
3. **ಧಾರ್ಮಿಕ ಐಕ್ಯತೆ :** ಭಾರತವು ಅನೇಕ ಮತಗಳಿಂದ ಕೂಡಿದ್ದರೂ ಐಕ್ಯತೆಯನ್ನು ಮೂಡಿಸುವುದೇ ಅಲ್ಲದೆ, ಸರ್ವಮತ ಸಮನ್ವಯತೆ ಅಥವಾ ಭಾರತದಲ್ಲಿ ಎಲ್ಲ ಮತೀಯರಿಗೂ ತಮ್ಮ ತಮ್ಮ ಮತ ಪಾಲಿಸುವ ಸಮಾನ ಹಕ್ಕು ಇದೆ.
4. **ಭಾಷಾ ಐಕ್ಯತೆ :** ವಿವಿಧ ಭಾಷೆಗಳಿದ್ದರೂ ಒಂದು ಭಾಷೆಯ ಜನರು ಇತರೆ ಭಾಷೆಗಳನ್ನು ಗೌರವಿಸುತ್ತಾರೆ.
5. **ಸಾಂಸ್ಕೃತಿಕ ಐಕ್ಯತೆ :** ಭಾರತದಲ್ಲಿ ವಿವಿಧ ಜನಾಂಗಗಳು, ಧರ್ಮಗಳಿದ್ದರೂ, ವಿವಿಧ ಸಂಪ್ರದಾಯ, ಆಚಾರ ವಿಚಾರಗಳು, ವೇಷಭೂಷಣಗಳು, ಆಹಾರ ಪದ್ಧತಿ, ಜೀವನ ಶೈಲಿ ಮುಂತಾದ ಸಾಂಸ್ಕೃತಿಕ ವೈವಿಧ್ಯತೆ ಇದ್ದರೂ ಸಾಮ್ಯತೆಯನ್ನು ಮತ್ತು ಸಾಮರಸ್ಯವನ್ನು ಹೊಂದಿದ್ದಾರೆ.

**4.ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಅಂಶಗಳಾವುವು?**

1. **ಜಾತ್ಯತೀತತೆ (ಮತನಿರಪೇಕ್ಷ) :** ಭಾರತ ಒಂದು ಜಾತ್ಯತೀತ ರಾಷ್ಟ್ರ.
2. **ಪ್ರಜಾಪ್ರಭುತ್ವ :** ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಎಲ್ಲಾ ಪೌರರು ದೇಶದ ಕಾನೂನಿನಡಿಯಲ್ಲಿ ಸಮಾನರು.
3. **ರಾಷ್ಟ್ರೀಯ ಹಬ್ಬಗಳು:** ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಗಾಂಧಿ ಜಯಂತಿ ಮುಂತಾದುವುಗಳು ಭಾರತೀಯರನ್ನು ಒಂದುಗೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.
4. **ನಮ್ಮ ರಾಷ್ಟ್ರೀಯ ಲಾಂಛನಗಳು :** ನಮ್ಮ ರಾಷ್ಟ್ರೀಯ ಚಿನ್ಹೆಗಳು ಅಥವಾ ರಾಷ್ಟ್ರಲಾಂಛನ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರೀಯ ಹೂ, ರಾಷ್ಟ್ರ ಪಕ್ಷಿ, ರಾಷ್ಟ್ರೀಯ ಪ್ರಾಣಿ ಮುಂತಾದುವು ಸಹ ನಾವೆಲ್ಲಾ ಒಂದು ಎಂದು ಗುರುತಿಸಿಕೊಳ್ಳಲು ಸಹಾಯಕವಾಗಿವೆ.
5. **ಪರಸ್ಪರ ಅನ್ಯೋನ್ಯತೆ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಮಾನ್ಯ ಧ್ಯೇಯೋದ್ದೇಶಗಳ ಮೂಲಕ ಕಾರ್ಯ ಸಾಧನೆ ಮಾಡುತ್ತವೆ. ರಾಷ್ಟ್ರದ ಪ್ರತಿಯೊಂದು ಭಾಗವೂ ಇನ್ನೊಂದು ಭಾಗದ ಮೇಲೆ ಅವಲಂಬಿತವಾಗಿವೆ.
6. ಇವಲ್ಲದೆ ಇತರೆ ಅಂಶಗಳಾದ ಸಂಪರ್ಕ ವಿಧಾನ, ಸಮೂಹ ಮಾಧ್ಯಮಗಳು, ನೈಸರ್ಗಿಕ ಅಂಶಗಳು, ವಿವಿಧ ಸಂಸ್ಕೃತಿ, ಮುಂತಾದುವುಗಳು ಇಡೀ ರಾಷ್ಟ್ರದ ಜನತೆ ಒಂದೇ ಎಂಬ ಐಕ್ಯತೆಯನ್ನು ಬಿಂಬಿಸುತ್ತವೆ.

**5. ರಾಷ್ಟ್ರೀಯ ಐಕ್ಯತೆಗೆ ಇರುವ ಅಡೆತಡೆಗಳನ್ನು ನಿವಾರಿಸಲು ನಿಮ್ಮ ಸಲಹೆಗಳೇನು?**

1. ಭಾರತದಲ್ಲಿ ವಿವಿಧ ಮತ ವರ್ಗಗಳು, ಜನಾಂಗದವರಿದ್ದು ಪ್ರತಿಯೊಂದು ವರ್ಗವು ಇನ್ನೊಂದು ವರ್ಗವನ್ನು, ಮತ ಬೋಧಕರನ್ನು ಗೌರವಿಸಬೇಕು, ಪ್ರೀತಿಸಬೇಕು.

SS STF DIGITAL GROUP

2. ಪ್ರತಿಯೊಂದು ಧರ್ಮದ ಪವಿತ್ರ ದಿನಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಪರಸ್ಪರ ಸಹಕಾರ, ಸಹಾಯ ಮತ್ತು ಅಭಿನಂದನೆಗಳಿರಬೇಕು.
3. ಯಾವುದೇ ಒಂದು ಮತೀಯ ಗುಂಪು ಇತರೆ ಮತದ ಗುಂಪಿನ ಬಗ್ಗೆ ಉದಾಸೀನತೆ ಹೊಂದಿರಬಾರದು.
4. ವೃತ್ತಿ ಶಿಕ್ಷಣವನ್ನು ಹೆಚ್ಚು ಹೆಚ್ಚು ನೀಡಬೇಕು.
5. ಶಾಲೆ ಬಿಡುವ ಮಕ್ಕಳನ್ನು ನಿಯಂತ್ರಿಸಬೇಕು.
6. ಹೀಗೆ ಜವಾಬ್ದಾರಿಯುತ ಪ್ರಜೆಗಳಾದ ನಾವು ಇತರೆ ಭಾಷೆಗಳಿಗೆ, ಸಂಸ್ಕೃತಿಗೆ, ಮತಗಳಿಗೆ ಸೂಕ್ತ ಗೌರವ ಕೊಡಬೇಕು. ಆಗಲೇ ರಾಷ್ಟ್ರದಲ್ಲಿ ನೈಜ ಸಮಗ್ರತೆ ಮೂಡುವುದು.

# ಸಮಾಜಶಾಸ್ತ್ರ

### ಅಧ್ಯಾಯ–1

## ಕುಟುಂಬ

**ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಕುಟುಂಬ ಎಂಬ ಪದವು ಲ್ಯಾಟಿನ್ ಭಾಷೆಯ ____________ ಪದದಿಂದ ಉಗಮವಾಗಿದೆ.
2. ಸಮಾಜದ ಜೀವಕೋಶ ____________ ಆಗಿದೆ.
3. ತಂದೆಯೇ ಕುಟುಂಬದ ಒಡೆಯನಾದರೆ ಆ ಕುಟುಂಬವನ್ನು ____________ ಎನ್ನುತ್ತಾರೆ.
4. ಕೇರಳದ ಮಲಬಾರ್‌ನ ನಾಯರ್‌ಗಳಲ್ಲಿ ____________ ಕುಟುಂಬ ಕಂಡುಬರುತ್ತದೆ.
5. ತಂದೆ, ತಾಯಿ ಮಕ್ಕಳು ಮಾತ್ರ ಸದಸ್ಯರಾಗಿರುವ ಕುಟುಂಬವನ್ನು _______ ಎಂದು ಕರೆಯುತ್ತೇವೆ.

**ಉತ್ತರಗಳು:– (1) 'ಫ್ಯಾಮುಲಸ್' (ಈಚಿಟಿಚಿಟಿಚ) (2) ಕುಟುಂಬ (3) ಪಿತೃಪ್ರಧಾನ ಕುಟುಂಬ (4) ಮಾತೃಪ್ರಧಾನ ಕುಟುಂಬ (5) 'ಕೇಂದ್ರ ಕುಟುಂಬ'**

**. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಕುಟುಂಬವು ಸಮಾಜದ ಘಟಕ ಹೇಗೆ?**

ಕುಟುಂಬವು ಅತ್ಯಂತ ಸಣ್ಣ ಸಾಮಾಜಿಕ ಸಂಸ್ಥೆಯಾದರೂ ಅದು ಸಮಾಜದ ಮೂಲಸಂಸ್ಥೆ. ಸಮಾಜದ ಎಲ್ಲಾ ಚಟುವಟಿಕೆಗಳು ನಡೆಯುವುದು ಕುಟುಂಬದ ಆಧಾರದಲ್ಲಿ, ಅಂದರೆ ಕುಟುಂಬದ ಸದಸ್ಯರೆ, ಸಾಮಾಜಿಕ ಸಂಸ್ಥೆಗಳ ಸದಸ್ಯರೂ ಆಗಿರುತ್ತಾರೆ.

ಯಾವುದೇ ಸಮಾಜದ ಸಾಮಾಜಿಕ ಸಂಸ್ಥೆಗಳ ಚಟುವಟಿಕೆಗಳು ಪ್ರಾರಂಭವಾಗುವುದೇ ಕುಟುಂಬದಿಂದ. ಸಮಾಜದ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಇನ್ನೂ ಮೊದಲಾದ ಚಟುವಟಿಕೆಗಳು ಮೊಳಕೆಯಾಗುವುದು ಕುಟುಂಬದಿಂದ. ಈ ಹಿಂದೆ ಸಾಮುದಾಯಿಕ ಪ್ರಮುಖ ಕೆಲಸಗಳಿಗೆ (ಊರೊಟ್ಟಿನ) ಕುಟುಂಬವು ತನ್ನ ಸದಸ್ಯರನ್ನು ಕಳುಹಿಸುತ್ತಿತ್ತು. ಇಂದಿನ ಸಂಕೀರ್ಣ ಸಮಾಜದಲ್ಲಿ ತನ್ನ ಕೆಲವು ಕಾರ್ಯಗಳನ್ನು ಸಮಾಜದ ಇತರೆ ಸಂಸ್ಥೆಗಳಿಗೆ ಬಿಟ್ಟುಕೊಟ್ಟಿದೆ.

**2. ಕುಟುಂಬದ ಪ್ರಕಾರಗಳನ್ನು ತಿಳಿಸಿ.**

- ಕುಟುಂಬದ ರಚನೆಯ ಆಧಾರದಲ್ಲಿ ಕುಟುಂಬದ ಪ್ರಕಾರಗಳು–
  - ಕೇಂದ್ರ ಕುಟುಂಬ
  - ಅವಿಭಕ್ತ ಕುಟುಂಬ.
- ವಿವಾಹ ಪದ್ಧತಿ ಆಧಾರದಲ್ಲಿ ಕುಟುಂಬ ಪ್ರಕಾರಗಳು–
  - ಏಕಪತ್ನಿತ್ವ ಕುಟುಂಬ
  - ಬಹುಪತ್ನಿತ್ವ ಕುಟುಂಬ ಮತ್ತು
  - ಬಹುಪತಿತ್ವ ಕುಟುಂಬ
- ಸಂಗಾತಿಗಳ ವಾಸಸ್ಥಾನಗಳ ಆಧಾರದಲ್ಲಿ ಕುಟುಂಬ ಪ್ರಕಾರಗಳು–
  - ಮಾತೃನೆಲೆ ಕುಟುಂಬ ಮತ್ತು
  - ಪಿತೃನೆಲೆ ಕುಟುಂಬ,
- ಅಧಿಕಾರ ಕೇಂದ್ರತೆಯ ಆಧಾರದಲ್ಲಿ
  - ಮಾತೃಪ್ರಧಾನ ಮತ್ತು
  - ಪಿತೃಪ್ರಧಾನ ಕುಟುಂಬ

**3. ಅವಿಭಕ್ತ ಕುಟುಂಬ ಎಂದರೇನು?**

ಅಜ್ಜ–ಅಜ್ಜಿ ಅವರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಕೆಲವು ಸಂದರ್ಭಗಳಲ್ಲಿ ಇನ್ನೂ ವಿಸ್ತೃತವಾಗಿ ಎರಡು ತಲೆಮಾರುಗಳಿಗಿಂತಲೂ ಹೆಚ್ಚಿನ ಜನರು ಒಂದೇ ಕುಟುಂಬದಲ್ಲಿ ಒಂದೇ ಸೂರಿನಡಿಯಲ್ಲಿ ಒಂದೇ ಅಡುಗೆ ಮನೆಯನ್ನು ಹೊಂದಿ ಇರುತ್ತಾರೆ ಇದನ್ನೇ ಅವಿಭಕ್ತ ಕುಟುಂಬ ಎನ್ನುವರು.

**4. ಕೇಂದ್ರ ಕುಟುಂಬ ಎಂದರೇನು?**

ತಂದೆ, ತಾಯಿ ಮತ್ತು ಅವರ ಅವಿವಾಹಿತ ಮಕ್ಕಳು ಮಾತ್ರ ಸದಸ್ಯರಾಗಿರುವ ಕುಟುಂಬವನ್ನು 'ಕೇಂದ್ರ ಕುಟುಂಬ' ಎಂಬುದಾಗಿ ಕರೆಯುತ್ತೇವೆ.

**5. ಕುಟುಂಬದ ಲಕ್ಷಣಗಳು ಯಾವುವು?**

1. **ಕುಟುಂಬ ಸರ್ವವ್ಯಾಪಕವಾದದ್ದು:** ಪ್ರಪಂಚದ ಎಲ್ಲಾ ಸಮಾಜಗಳಲ್ಲಿಯೂ ನಾವು ಎಲ್ಲ ಸಮಾಜಗಳಲ್ಲಿ ಕುಟುಂಬವನ್ನು ಕಾಣಬಹುದು.
2. **ಸಮಾಜದ ಎಲ್ಲಾ ಚಟುವಟಿಕೆಗಳ ಮೂಲಘಟಕ:** ಯಾವುದೇ ಸಮಾಜದ ಸಾಮಾಜಿಕ ಸಂಸ್ಥೆಗಳ ಚಟುವಟಿಕೆಗಳು ಪ್ರಾರಂಭವಾಗುವುದೇ ಕುಟುಂಬದಿಂದ.
3. **ಜವಾಬ್ದಾರಿ ಮತ್ತು ಸಾಮಾಜಿಕ ಹೊಣೆಗಾರಿಕೆ:** ಕುಟುಂಬಲ್ಲಿ, ಸಮಾಜದಲ್ಲಿ ಯಾವ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಕುಟುಂಬ ತನ್ನ ಸದಸ್ಯರಿಗೆ ಹೇಳಿ ಕೊಡುತ್ತದೆ.

SS STF DIGITAL GROUP

**4. ಪಾಲನೆ ಮತ್ತು ಪೋಷಣೆ: ಮಕ್ಕಳ,** ವೃದ್ಯಾಪ್ಯದಲ್ಲಿ ಕುಟುಂಬದ ಹಿರಿಯರ ಆರೈಕೆ-ಪೋಷಣೆ-ಶುಶ್ರೂಷೆ ಮತ್ತು ಅವರ ರಕ್ಷಣೆಯನ್ನು ಮಾಡುತ್ತದೆ.

**5. ಸಾಮಾಜಿಕ ವರ್ತನೆಗಳನ್ನು ಹೇಳಿ ಕೊಡುತ್ತದೆ:** ಸಮ ವಯಸ್ಸಿನ ಮಕ್ಕಳೊಂದಿಗೆ, ಹಿರಿಯರೊಂದಿಗೆ, ಗುಂಪುಗಳೊಂದಿಗೆ ವಿವಿಧ ಸಂದರ್ಭಗಳಲ್ಲಿ ಹೇಗೆ ಬೆರೆಯಬೇಕು ಎಂಬುದನ್ನು ಕುಟುಂಬ ಹೇಳಿಕೊಡುತ್ತಿರುತ್ತದೆ.

**6. ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಕುಟುಂಬದ ಪಾತ್ರವನ್ನು ತಿಳಿಸಿ.**

ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಬಾಲ್ಯ, ಯೌವ್ವನ ಮುಖ್ಯ. ಮಗುವು ಕುಟುಂಬದೊಳಗೆ ಮಾತನಾಡುವ ಮಾತೃಭಾಷೆಯನ್ನು ಮೊದಲು ತಿಳಿಯುತ್ತದೆ. ಅದರ ಸಹಾಯದಿಂದ ಸಾಮಾಜಿಕ ವಿಚಾರಗಳನ್ನು ತಿಳಿದುಕೊಳ್ಳುತ್ತದೆ. ಕುಟುಂಬದ ಸುತ್ತಮುತ್ತಲಿನ ಸಾಮಾಜಿಕ ಪರಿಸರದಲ್ಲಿ ಬೆಳೆಯುವ ಮಕ್ಕಳು ಅದಕ್ಕನುಗುಣವಾದ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುತ್ತಾರೆ. ಸಮ ವಯಸ್ಸಿನ ಮಕ್ಕಳೊಂದಿಗೆ, ಹಿರಿಯರೊಂದಿಗೆ, ಗುಂಪುಗಳೊಂದಿಗೆ ವಿವಿಧ ಸಂದರ್ಭಗಳಲ್ಲಿ ಹೇಗೆ ಬೆರೆಯಬೇಕು ಎಂಬುದನ್ನು ಕುಟುಂಬ ಹೇಳಿಕೊಡುತ್ತಿರುತ್ತದೆ. ಅಂದರೆ ಸಾಮಾಜಿಕ ವರ್ತನೆಗಳುಬೇಡಿಕೆಗಳು-ನಿಯಂತ್ರಣಗಳು ಮಗುವಿನ ಮೇಲೆ ಪರೋಕ್ಷವಾದ ಪ್ರಭಾವವನ್ನು ಬೀರುತ್ತಿರುತ್ತವೆ. ಬಾಲ್ಯ-ಯೌವ್ವನ, ಮಧ್ಯವಯಸ್ಸು ಮತ್ತು ಮುಪ್ಪಿನಲ್ಲಿ ಸ್ನೇಹ, ಸ್ವಾತಂತ್ರ್ಯ, ಭದ್ರತೆ ಹಾಗೂ ಇತರೆ ವರ್ತನೆಗಳನ್ನು ಕುಟುಂಬ ಹೇಳಿಕೊಡುತ್ತದೆ.

**7. ಅವಿಭಕ್ತ ಕುಟುಂಬದ ಲಕ್ಷಣಗಳನ್ನು ವಿವರಿಸಿ.**

**ಅವಿಭಕ್ತ ಕುಟುಂಬದ ಲಕ್ಷಣಗಳು**

- **ಅವಿಭಕ್ತ ಕುಟುಂಬ ಗಾತ್ರದಲ್ಲಿ ದೊಡ್ಡದು :** ಎರಡು ತಲೆಮಾರಿಗಿಂತಲೂ ಹೆಚ್ಚಿನ ಜನರು ಒಂದೇ ಮನೆಯಲ್ಲಿ ವಾಸ ಮಾಡುವುದರಿಂದ ಈ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಾಗಿರುತ್ತವೆ.
- **ಸಹಕಾರ ಸಹಭಾಗಿತ್ವ:** ಅವಿಭಕ್ತ ಕುಟುಂಬದಲ್ಲಿ ಸದಸ್ಯರ ಪರಸ್ಪರ ಸಹಕಾರದಿಂದ ದಿನನಿತ್ಯದ ಚಟುವಟಿಕೆಗಳು ಸೇರಿದಂತೆ ಎಲ್ಲ ಕಾರ್ಯಗಳು ನಡೆಯುತ್ತಿರುತ್ತವೆ.
- **ವಾಸಸ್ಥಾನ ಮತ್ತು ಅಡುಗೆ ಮನೆ-** ಒಂದೇ ಅಡುಗೆ ಮನೆಯಲ್ಲಿ ಆಹಾರವನ್ನು ಸಿದ್ಧಪಡಿಸಿ ಒಟ್ಟಗೆ ಊಟ ಮಾಡುತ್ತಾರೆ.
- **ಧರ್ಮ:** ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಒಂದೇ ಧರ್ಮವನ್ನು ನಂಬುತ್ತಾರೆ ಮತ್ತು ಆಚರಿಸುತ್ತಾರೆ.
- **ಸ್ವಯಂಪೂರ್ಣ ಘಟಕ:** ತನ್ನ ಕುಟುಂಬದ ಸದಸ್ಯರಿಗೆ ಬೇಕಾಗುವ ಬಹುಪಾಲು ಅಗತ್ಯಗಳನ್ನು ಪೂರೈಸುತ್ತದೆ.
- **ಅಧಿಕಾರ ಸಂರಚನೆ:** ಅವಿಭಕ್ತ ಕುಟುಂಬದ ಹಿರಿಯ ಸದಸ್ಯರು ರಚನೆಯ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ.

**8. ಆಧುನಿಕ ಕೇಂದ್ರ ಕುಟುಂಬಗಳು ದಿನೇದಿನೇ ಹೆಚ್ಚಾಗಲು ಕಾರಣಗಳೇನು?**

ವೈಯಕ್ತಿಕತೆ, ವೈಯಕ್ತಿಕ ಸಂತೋಷ, ಸುಖ, ಆಸ್ತಿಯ ಹಕ್ಕು ಬದಲಾದ ಸಾಮಾಜಿಕ ಮೌಲ್ಯಗಳು, ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆದ ಪ್ರಗತಿ, ನಗರೀಕರಣ, ಪ್ರಜಾಸತಾತ್ಮಕ ಹಾಗೂ ಸಮಾನತೆಯ ತತ್ವಗಳು ಇವೆ ಮುಂತಾದ ಅನೇಕ ಅಂಶಗಳು ಕೇಂದ್ರ ಕುಟುಂಬದ ಹೆಚ್ಚಳಕ್ಕೆ ಕಾರಣವಾಗಿವೆ.

### ಅಧ್ಯಾಯ-2

## ಸಾಮಾಜೀಕರಣ

**ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮಾನವ ಸಾಮಾಜಿಕ ವ್ಯಕ್ತಿಯಾಗುವ ಪ್ರಕ್ರಿಯೆಯನ್ನು _________ ಎನ್ನುತ್ತೇವೆ.
2. ತಾಯಿಯೇ ಮಗುವಿನ ಮೊದಲ ___________.
3. ಸಾಮಾಜೀಕರಣದ ಪ್ರಮುಖ ನಿಯೋಗಿ ___________
4. ರೇಡಿಯೋ ಸಾಮಾಜೀಕರಣದ __________ ನಿಯೋಗಿ.

**ಉತ್ತರಗಳು:- (1) ಸಾಮಾಜೀಕರಣ (2) ಗುರು (3) ಕುಟುಂಬ (4) ಸಾಮಾಜೀಕರಣ**

**ಈ ಕೆಳಗಿನ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರ ಬರೆಯಿರಿ.**

**1. ಸಾಮಾಜೀಕರಣದಲ್ಲಿ ಶಾಲೆಯ ಪಾತ್ರವನ್ನು ವಿವರಿಸಿ.**

- ಶಾಲೆಯಲ್ಲಿ ಶಿಕ್ಷಣದ ಪ್ರಭಾವದ ಜೊತೆಗೆ ಸಹ ವಿದ್ಯಾರ್ಥಿಗಳು ಮತ್ತು ಸ್ನೇಹಿತರ ವ್ಯಕ್ತಿತ್ವದ ಪ್ರಭಾವಕ್ಕೆ ಮಕ್ಕಳು ಒಳಪಡುತ್ತಾರೆ.
- ಶಿಕ್ಷಣದಿಂದ ಮಗುವಿನ ಸಾಮಾಜಿಕ ವರ್ತನೆ, ಜ್ಞಾನ ಮತ್ತು ಅನುಭವಗಳು ರೂಪುಗೊಳ್ಳುತ್ತವೆ. ಮಕ್ಕಳ ಸುಪ್ತಶಕ್ತಿ ಸಾಮರ್ಥ್ಯಗಳು ಬೆಳೆಯುತ್ತವೆ.
- ಅವನ/ಳ ಜೀವನವನ್ನು ವಿಶಾಲಗೊಳಿಸಿ, ಅವರನ್ನು ಸಾಮಾಜಿಕ ಜೀವನಕ್ಕೆ ಅಣಿಗೊಳಿಸುತ್ತವೆ.
- ಶಿಕ್ಷಕರ ಸನ್ನಡತೆ, ಸದ್ಭಾವನೆ, ಸಮಾನತೆ, ಮುಂತಾದ ಗುಣಗಳು ಶಿಕ್ಷಕರ ನಡೆನುಡಿಯಲ್ಲ ಅಭಿವ್ಯಕ್ತವಾಗಿ ಮಕ್ಕಳಿಗೆ ಪ್ರೀತಿ, ವಿಶ್ವಾಸ, ಸಹನೆ, ಸಹಬಾಳ್ವೆ, ಸಹಜೀವನ, ಸಹೃದಯತೆ ಮೊದಲಾದ ಜೀವನ ಮೌಲ್ಯಗಳನ್ನು ಮಕ್ಕಳೂ ಮೈಗೂಡಿಸಿಕೊಳ್ಳುವಂತೆ ಮಾಡುತ್ತವೆ.

- ಜೊತೆಗೆ ಮಕ್ಕಳು ಪಠ್ಯೇತರ ಚಟುವಟಿಕೆಗಳು, ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ.

**2. ಕುಟುಂಬದ ಸದಸ್ಯರ ಜೊತೆ ಮಗು ಕಲಿಯುವ ಮೌಲ್ಯಗಳು ಯಾವುವು?**

- ತಾಯಿ ತಂದೆಯರ ನಡೆ–ನುಡಿ, ಆಚಾರ–ವಿಚಾರ, ಚಟುವಟಿಕೆಗಳು, ವ್ಯವಹರಿಸುವಿಕೆ ಮೊದಲಾದ ಅಂಶಗಳು ಮಗುವಿನ ಭಾವನಾತ್ಮಕ ಬೆಳವಣಿಗೆಯ ಮೇಲೆ ಬಹಳ ಪ್ರಭಾವ ಬೀರುತ್ತವೆ.
- ಪ್ರೀತಿ, ವಾತ್ಸಲ್ಯ, ವಿಶ್ವಾಸ, ಸಹನೆ, ಸಹೃದಯತೆ, ಸಹಕಾರ ಮೊದಲಾದ ಜೀವನ ಮೌಲ್ಯಗಳ ಮೊದಲ ಪಾಠಗಳನ್ನು ಮಗುವು ಮನೆಯಲ್ಲಿಯೇ ಕಲಿಯುತ್ತದೆ.

**3. ಸಾಮಾಜೀಕರಣ ಪ್ರಕ್ರಿಯೆಯ ಮಹತ್ವವನ್ನು ವಿವರಿಸಿ.**

1. ಮಾನವ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿಸುತ್ತದೆ.
2. ವಿವಿಧ ಕೌಶಲ್ಯಗಳ ಕಲಿಕೆ ಮತ್ತು ಅಳವಡಿಕೆಗೆ ಅವಕಾಶ ಒದಗಿಸುತ್ತದೆ.
3. ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಬದ್ಧತೆ ಮತ್ತು ಬೆಂಬಲವನ್ನು ನೀಡುತ್ತದೆ.
4. ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯ ಮಾಡುತ್ತದೆ.
5. ಪರಂಪರೆಯ ಮುಂದುವರಿಕೆಗೆ ಸಹಕಾರಿಯಾಗಿದೆ.

**4. ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಸಮೂಹ ಮಾಧ್ಯಮದ ಪಾತ್ರವನ್ನು ವಿವರಿಸಿ.**

- ರೇಡಿಯೊ, ದೂರದರ್ಶನ, ಚಲನಚಿತ್ರ, ಸುದ್ದಿಪತ್ರಿಕೆಗಳು, ನಿಯತಕಾಲಿಕೆಗಳು, ಬೀದಿನಾಟಕಗಳು ಮೊದಲಾದ ಸಮೂಹ ಮಾಧ್ಯಮಗಳು ಸಾಹಿತ್ಯವನ್ನು ವಿಪುಲವಾಗಿ ಬಳಸುತ್ತವೆ.
- ಜಾಹೀರಾತು, ರೇಡಿಯೊ ಕಾರ್ಯಕ್ರಮಗಳು, ಕಥೆ, ಕವನ, ಕಾದಂಬರಿಗಳು, ನಾಟಕ, ನೃತ್ಯರೂಪಕ, ಸಂಗೀತ, ಭಿತ್ತಿಪತ್ರ, ಮಹಾನ್‌ವ್ಯಕ್ತಿಗಳ ವಿಶೇಷ ಹೇಳಿಕೆಗಳು, ಅನುಭವದ ನುಡಿಗಳಿಂದ ನಾವು ಆಳವಾಗಿ ಪ್ರಭಾವಿತರಾಗುತ್ತೇವೆ.
- ವಾರ್ತೆಗಳು, ರಸಪ್ರಶ್ನೆ ಕಾರ್ಯಕ್ರಮಗಳು, ಪರಿಚಯ, ಸಂವಾದ, ವಿಚಾರ ಸಂಕಿರಣ ವಿವಿಧ ಸ್ಥಳಗಳ ವೀಕ್ಷಣೆ, ಅನ್ವೇಷಣೆ ಮೊದಲಾದವುಗಳಿಂದ ಸಮೂಹ ಮಾಧ್ಯಮಗಳ ಸದ್ಬಳಕೆಯಾಗುತ್ತದೆ.
- ಹಾಗೆಯೇ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗುವ, ಶೈಕ್ಷಣಿಕ ಮಹತ್ವವುಳ್ಳ ಕಾರ್ಯಕ್ರಮಗಳು ಮಹತ್ವದ ಪರಿಣಾಮವನ್ನು ಮಕ್ಕಳ ಸಾಮಾಜಿಕ ವರ್ತನೆಯಲ್ಲಿ ಬೀರುತ್ತವೆ.

**5. ಸಾಮಾಜೀಕರಣ ಪ್ರಕ್ರಿಯೆಯಲ್ಲಿ ನೆರೆಹೊರೆಯ ಪಾತ್ರವನ್ನು ವಿವರಿಸಿ.**

- ನೆರೆಹೊರೆಯವರು ಸ್ಥಳೀಯವಾಗಿ ವಾಸಿಸುವ ಜನರಿಗೆ ಹಲವಾರು ರೀತಿಯಲ್ಲಿ ಅಗತ್ಯ ಸಹಕಾರ ಮಾಡುತ್ತಾರೆ.
- ನೆರೆಹೊರೆಯ ಜನರು ಕಷ್ಟ–ಸುಖ, ಸಂತೋಷ ಸಮಾರಂಭ ಮುಂತಾದವುಗಳನ್ನು ಪರಸ್ಪರ ಹಂಚಿಕೊಂಡು ಒಂದೇ ಕುಟುಂಬದವರಂತೆ ಜೀವಿಸುವರು.
- ಆಸಕ್ತಿ, ಅಭಿರುಚಿ, ಹಬ್ಬ, ಜಾತ್ರೆ, ವಿವಾಹ, ಧಾರ್ಮಿಕ ಸಮಾರಂಭ ಮುಂತಾದ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಸ್ಪಂದಿಸುವರು.
- ಗ್ರಾಮೀಣ ಪರಿಸರದಲ್ಲಿ ಎಂತಹ ಸಂದರ್ಭದಲ್ಲಿಯೂ ನೆರೆಹೊರೆಯರಿದ್ದಾರೆ ಎಂಬ ಭಾವನೆಯೊಂದಿಗೆ ಜೀವಿಸುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

**6. ಸಾಮಾಜೀಕರಣ ಎಂದರೇನು?**

ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವ ಕ್ರಿಯೆಯನ್ನು 'ಸಾಮಾಜೀಕರಣ' ಎಂದು ಕರೆಯುತ್ತಾರೆ. 'ಸಾಮಾಜೀಕರಣ' ಎಂದರೆ ಸಮಾಜದ ಜೀವಿಗಳಲ್ಲಿ ಪರಸ್ಪರ ಅವಲಂಬನೆ ಉಂಟಾಗಿ ಅವರೆಲ್ಲರೂ ನಮ್ಮ ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಜೀವಿಸುವ ಕ್ರಮಬದ್ಧ ಪ್ರಕ್ರಿಯೆ.

## ಅಧ್ಯಾಯ –3
## ಸಾಮಾಜಿಕ ಬದಲಾವಣೆ

**ಖಾಲಿಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಬದಲಾವಣೆ __________ ನಿಯಮ.
2. ಸಹಕಾರ ಜೀವನಕ್ಕೆ ಶಾಲೆ ಒಂದು __________ ಎನ್ನುತ್ತಾರೆ.
3. ವಿಕಾಸವಾದವನ್ನು ಮಂಡಿಸಿದವರು __________

**ಉತ್ತರಗಳು:–** (1) **ಪ್ರಕೃತಿ** (2) **ಮಾಧ್ಯಮ** (3) **ಚಾರ್ಲ್ಸ್ ಡಾರ್ವಿನ್**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಸಾಮಾಜಿಕ ಬದಲಾವಣೆ ಎಂದರೇನು?**

ಹಲವಾರು ಕಾರಣಗಳಿಂದ ಸಮಾಜದ ಸಂರಚನೆ ಮತ್ತು ಕಾರ್ಯಗಳ ಸಂಬಂಧಗಳಲ್ಲಿ ಹಲವು ಬದಲಾವಣೆಗಳನ್ನು ತಂದಿದೆ. ಇದನ್ನೇ ಸಾಮಾಜಿಕ ಬದಲಾವಣೆ ಎನ್ನುವರು.

**2. ಸಹಕಾರ ಎಂದರೇನು?**

ಸಮಾಜದಲ್ಲಿ ಕೊಡು ಕೊಳ್ಳುವಿಕೆಯ ಪ್ರಕ್ರಿಯೆಯೇ ಸಹಕಾರ ಮನೋಭಾವ ಎಂದು ಕರೆಯತ್ತೇವೆ.

**3. ಸಹಜೀವನ ಮೂಲ ಅಂಶಗಳು ಯಾವುವು?**

SS STF DIGITAL GROUP

ಸಮಾನ ಅವಕಾಶದಿಂದ, ಸ್ವಾತಂತ್ರ್ಯ, ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯಗಳಿಂದ ಒಟ್ಟಿಗೆ ಬಾಳುವುದು ಸಹಜೀವನ ಮೂಲ ಅಂಶಗಳಾಗಿವೆ.

**4. ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ತಿಳಿಸಿ.**

**ಸಾಮಾಜಿಕ ಬದಲಾವಣೆಯ ಲಕ್ಷಣಗಳು**

- ಸಾಮಾಜಿಕ ಬದಲಾವಣೆಯು ನಿರಂತರವಾದದ್ದು
- ಸಾಮಾಜಿಕ ಬದಲಾವಣೆಯು ಸಾರ್ವತ್ರಿಕವಾದದ್ದು
- ಸಾಮಾಜಿಕ ಬದಲಾವಣೆಯ ರೂಪ ಮತ್ತು ಗತಿ ಒಂದೇ ರೀತಿಯಲ್ಲಿರುವುದಿಲ್ಲ.
- ಸಾಮಾಜಿಕ ಪ್ರಕ್ರಿಯೆಗಳ ಸರಪಳಿಗಳು ಸಾಮಾಜಿಕ ಬದಲಾವಣೆಗಳನ್ನು ಸೃಷ್ಟಿ ಮಾಡುತ್ತವೆ.

**5. ಸಾಮಾಜಿಕ ಬದಲಾವಣೆ ಅಗತ್ಯವೆ?**

- ಸಾಮಾಜಿಕ ಪ್ರಕ್ರಿಯೆಗಳ ರೂಪಾವಳಿಗಳನ್ನು ಮತ್ತು ಸಾಮಾಜಿಕ ಸಾಂಸ್ಕೃತಿಕ ವಿಕಾಸವನ್ನು ಸೂಚಿಸುತ್ತದೆ.
- ಸಾಮಾಜಿಕ ಬದಲಾವಣೆಯು ಸಾಮಾಜಿಕ-ಆರ್ಥಿಕ ರಚನೆಯಲ್ಲಿನ ಬದಲಾವಣೆಗಳನ್ನು ವಿವರಿಸುತ್ತದೆ.
- ಬದಲಾವಣೆಯ ವೇಗವನ್ನು ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕ ಅಥವಾ ತಾಂತ್ರಿಕ ಅವಿಷ್ಕಾರಗಳು ಹೆಚ್ಚಿಸುತ್ತವೆ.
- ಅಂದರೆ ಮಾನವನ ಚಲನ ಸ್ಥಿತಿಗೆ ಸಾಮಾಜಿಕ ಬದಲಾವಣೆಯೇ ಪ್ರಮುಖ ಕಾರಣ ಎಂದು ಹೇಳಬಹುದು.
- ಸಮಾಜದ ಸಂರಚನೆ ಮತ್ತು ಕಾರ್ಯಗಳ ಸಂಬಂಧಗಳಲ್ಲಿ ಹಲವು ಬದಲಾವಣೆಗಳನ್ನು ತಂದಿದೆ.
- ಸಾಮಾಜಿಕ ಪ್ರಕ್ರಿಯೆಯ ಮೂಲಕ ಸಾಮಾಜಿಕ ಬದಲಾವಣೆ ಉಂಟಾಗುತ್ತದೆ.

**6. ಸ್ಪರ್ಧೆ ದಿನೇ ದಿನೇ ಹೆಚ್ಚಾಗಲು ಕಾರಣಗಳೇನು?**

- ಇತ್ತೀಚಿನ ಜಾಗತೀಕರಣ ಅರ್ಥವ್ಯವಸ್ಥೆಯು ಮನುಷ್ಯನ ಆರೋಗ್ಯವನ್ನು ಪಣಕಿಟ್ಟು ಹೆಚ್ಚು ಸಂಪತ್ತು ಗಳಿಸಲು ಸ್ಪರ್ಧೆಯ ಹೆಸರಿನಲ್ಲಿ ಮುನ್ನುಗ್ಗುತ್ತಿದೆ. ಇದು ಮನುಷ್ಯನ ಮನೋಭಾವವನ್ನೇ ಬದಲಾಯಿಸಿದೆ.
- ಆಧುನೀಕತೆ, ಕೈಗಾರಿಕೀಕರಣ ಮತ್ತು ಜನಸಂಖ್ಯೆಯು ದಿನೇ ದಿನೇ ಸ್ಪರ್ಧೆ ಹೆಚ್ಚಾಗಲು ಪ್ರಮೂಖ ಕಾರಣಗಳಾಗಿವೆ.

**ಅಧ್ಯಾಯ-4**

## ಸಮುದಾಯ

**ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1 ಅಲೆಮಾರಿತನವು ಒಂದು ಜೀವನ ವಿಧಾನ ಎಂದು __________ ಹೇಳುತ್ತದೆ.

2. ಭಾರತೀಯ ಸಮಾಜದ ಆಧಾರ ಸ್ತಂಭ _____ ಸಮುದಾಯ.

3. ಈಶಾನ್ಯ ವಲಯದ ಆದಿವಾಸಿಗಳು ___________.

4. ________ ಬುಡಕಟ್ಟಿಗೆ ಸೇರಿದ ಜನರು ಶ್ವೇತವರ್ಣೀಯರು

5. ಸೋಲಿಗರು ಭಾರತದ __________ ವಲಯದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

6. _______ ಪ್ರಕ್ರಿಯೆಗಳು ನಗರಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿವೆ.

**ಉತ್ತರಗಳು:- (1) ಎನ್ಸೈಕ್ಲೋಪೀಡಿಯ ಬ್ರಿಟಾನಿಕಾ (2) ಗ್ರಾಮೀಣ (3) ಮಂಗೋಲಿಯನ್ ಬುಡಕಟ್ಟಿನವರು (4) ಕಕೇಶಿಯನ್ (5) ದಕ್ಷಿಣ (6) ಕೈಗಾರಿಕಾ ಕ್ರಾಂತಿಯ**

**. ಈ ಕೆಳಗಿನ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರ ಬರೆಯಿರಿ.**

**1. ಬುಡಕಟ್ಟು ಎಂದರೇನು?**

ಬುಡಕಟ್ಟು ಎಂಬ ಪದವನ್ನು ಜೀವ ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು ವಿಭಿನ್ನ ಅರ್ಥದಲ್ಲಿ ಬಳಸಿದ್ದಾರೆ. ಕುಟುಂಬ ಹಾಗೂ ರಕ್ತ ಸಂಬಂಧ ಹೊಂದಿದ ಕುಲಗಳ ಕೂಟಕ್ಕೆ ಕನ್ನಡದಲ್ಲಿ ಬುಡಕಟ್ಟು ಎಂಬ ಪದ ಬಳಸಲಾಗುತ್ತದೆ.

**2. ಗ್ರಾಮ ಎಂದರೇನು?**

ಕಡಿಮೆ ಜನಸಾಂದ್ರತೆಯುಳ್ಳ, ಸರಳ ಹಾಗೂ ಮಿತವ್ಯಯವಾದ ಜೀವನ ಸಾಗಿಸುವ, ಪ್ರಾಥಮಿಕ ಸಂಬಂಧಗಳನ್ನೊಳಗೊಂಡ ಕುಟುಂಬಗಳ ಒಕ್ಕೂಟವೇ ಗ್ರಾಮ ಸಮುದಾಯ.

**3. ನಗರ ಪರಿಕಲ್ಪನೆಯನ್ನು ತಿಳಿಸಿ.**

ಯಾವ ಸಮುದಾಯ 5000 ಜನಸಂಖ್ಯೆಗಿಂತ ಹೆಚ್ಚಿಗೆ ಜನರನ್ನು ಹೊಂದಿದ್ದು, ಪ್ರತಿ ಚದರ ಕಿಲೋಮೀಟರಿಗೆ 1000 ಜನಸಾಂದ್ರತೆ ಹೊಂದಿದ್ದು, ಅಲ್ಲಿ ನೆಲೆಸಿರುವ ಜನರಲ್ಲಿ ಶೇಕಡ 75ಕ್ಕಿಂತ ಹೆಚ್ಚು ಜನರು ಬದುಕಿಗೆ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿದ್ದಾರೊ ಅದಕ್ಕೆ ನಗರ ಎಂದು ಕರೆಯುತ್ತಾರೆ. ಜನಸಂಖ್ಯಾಶಾಸ್ತ್ರದ ದೃಷ್ಟಿಯಲ್ಲಿ ಯಾವ ಪ್ರದೇಶ ಅತಿ ಹೆಚ್ಚು ಜನಸಂಖ್ಯೆ ಮತ್ತು ಜನಸಾಂದ್ರತೆ ಹೊಂದಿರುತ್ತದೆಯೊ ಅದನ್ನು ನಗರ ಎಂದು ಕರೆಯಬಹುದು.

**4. ಬುಡಕಟ್ಟು ಸಮುದಾಯಗಳ ಲಕ್ಷಣಗಳನ್ನು ವಿವರಿಸಿ.**

ಬುಡಕಟ್ಟುಗಳ ಲಕ್ಷಣಗಳು

1. ಸರಳ ಮತ್ತು ಸ್ವಯಂ ಪರಿಪೂರ್ಣತೆ.
2. ಪ್ರಕೃತಿಯ ಪೂಜೆ.
3. ಸಮೂಹದ ಬಗ್ಗೆ ಅವರ ನಿಷ್ಠೆ ಮತ್ತು ಸಮಗ್ರತೆಗೆ ಮಹತ್ವ.
4. ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಸಮಾನತೆ.
5. ಒಳಬಾಂಧವ್ಯ ವಿವಾಹ.
6. ವಿಭಿನ್ನ ಮಾತೃಭಾಷೆ.
7. ಪ್ರಾಕೃತಿಕ ಪರಿಸರದಲ್ಲಿಯೇ ವಾಸ.
8. ಬೇಟೆ, ಸ್ವಲ್ಪ ಪ್ರಮಾಣದ ಕೃಷಿ, ಅರಣ್ಯ ಉಪ-ಉತ್ಪನ್ನಗಳ ಆರ್ಥಿಕ ವ್ಯವಸ್ಥೆ.

SS STF DIGITAL GROUP

**5. ಭೌಗೋಳಿಕ ನೆಲೆಯಲ್ಲಿ ಭಾರತದ ಬುಡಕಟ್ಟುಗಳನ್ನು ಹೇಗೆ ವಿಭಾಗಿಸಲಾಗಿದೆ ವಿವರಿಸಿ.**

ಭೌಗೋಳಿಕ ನೆಲೆಯಲ್ಲಿ ಭಾರತದ ಬುಡಕಟ್ಟುಗಳನ್ನು 3 ಭೌಗೋಳಿಕ ವಲಯಗಳಾಗಿ ವಿಭಾಗಿಸಲಾಗಿದೆ.

1. **ಉತ್ತರ ಮತ್ತು ಉತ್ತರ-ಪೂರ್ವ ವಲಯ :** ಹಿಮಾಲಯದ ಉಪ ಗಿರಿಕಂದರ ಶ್ರೇಣಿಯಲ್ಲಿ ನಾಗಾ ಬುಡಕಟ್ಟಿನ ಕೊನ್ಯಾಕ್, ರೆಂಗ್ಮಾ, ಸೆಂಗ್ಮಾ, ಅಹೋ, ಅಂಗಾಮಾ, ಲ್ಹೋಟಾ, ಫೋಮಿ, ಚಾಂಗ, ಕಾಬುಲ, ಕುಕಿ ಬುಡಕಟ್ಟಿನ ಲುಶಾಮಿ, ಲಾಖೇರ, ಚಿನ್ಸ್, ಖುಷಿ, ಗಾರೊ, ಕಚಾರಿ, ಲೆಪ್ಚಾ, ಭೂಟಿಯ, ರಾಭಾ, ಥಾರು, ಖಾಸಾ, ಚೇನಿ ಇತ್ಯಾದಿ ಸಮುದಾಯಗಳು ವಾಸಿಸುತ್ತಿವೆ.
2. **ಕೇಂದ್ರೀಯ ಅಥವಾ ಮಧ್ಯ ವಲಯ :** ಈ ವಲಯದಡಿ ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸಾ, ದಕ್ಷಿಣದ ಉತ್ತರಪ್ರದೇಶ, ಉತ್ತರ ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ರಾಜಸ್ತಾನ ರಾಜ್ಯಗಳಲ್ಲಿರುವ ಸಂತಾಲ, ಮುಂಡಾ, ಉರಾಂವ, ಭೂಮಿಜ, ಕೋಯ, ಲೋಧಾ, ಸಾಪುರ, ಜವುಂಗ, ಖೊಂಡ, ಕೊರ್ಕು, ಗೊಂಡ, ಭಿಲ್, ಬಿರಹಾರ್, ಕೋಲ್, ಮಾಲೇರ, ಅಸುರ, ಬೈಗಾ, ಪ್ರಧಾನ, ಬಿರಝಿಮ. ಅಗೇರಿಯ, ಹಿಲ್ ಮಾರಿಯ, ಬಿಸೊನ್ ಹಾರ್ನಮಾರಿಮ ಇತ್ಯಾದಿ ಬುಡಕಟ್ಟುಗಳು ಪ್ರಮುಖವಾಗಿವೆ.
3. **ದಕ್ಷಿಣ ವಲಯ :** ಈ ವಲಯದ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳಲ್ಲಿ ಚೆಂಚು, ತೋಡ, ಬಡಗ, ಕೋಟ, ಪಣಿಯನ್, ಇರುಳ, ಕುರಮನ್, ಕುರುಂಬ, ಗೊಂಡ, ರಾಜಗೊಂಡ, ಸೋಲಿಗ, ಕಾಡುಕುರುಬ, ಜೇನುಕುರುಬ, ಕೊರಗ, ಹಸಲ, ಕೋಟ, ಪಳ್ಳಿಯನ್, ಯರವ, ಧನಗರ ಗೌಳಿ, ಕಾಡು ಗೊಲ್ಲ, ಹಾಲಕ್ಕಿ ಒಕ್ಕಲಿಗ, ಇತ್ಯಾದಿ ಬುಡಕಟ್ಟುಗಳು ಪ್ರಮುಖವಾಗಿವೆ.

**6. ಗ್ರಾಮ ಸಮುದಾಯಗಳ ಪ್ರಕಾರಗಳನ್ನು ವಿವರಿಸಿ.**

**ಗ್ರಾಮಗಳ ಪ್ರಕಾರ'ಗಳು**

1. **ಕೇಂದ್ರೀಕೃತ ಗ್ರಾಮ :** ಈ ಗ್ರಾಮಗಳ ಮುಖ್ಯ ಲಕ್ಷಣ ಎಂದರೆ ಹೊಲಗಳ ಮಧ್ಯದಲ್ಲಿ ಮನೆಗಳಿರುತ್ತವೆ.
2. **ಪ್ರತ್ಯೇಕಿತ ಹೊಲ ಮನೆಗಳ ಗ್ರಾಮ :** ಇಲ್ಲಿ ಒಂದು ರೈತ ಕುಟುಂಬ ಇನ್ನೊಂದು ರೈತ ಕುಟುಂಬದಿಂದ ಪ್ರತ್ಯೇಕವಾಗಿ ವಾಸಿಸುತ್ತದೆ.
3. **ಚದುರಿದ ಗುಂಪು ಗ್ರಾಮ :** ಜಿಲ್ಲೆಗಳಲ್ಲಿ ಕಾಣಬಹುದು. ಇಲ್ಲಿ ಮನೆಗಳು ಒಟ್ಟಾಗಿ ಇರುವುದಿಲ್ಲ.
4. **ಸಾಲುಮನೆಗಳ ಗ್ರಾಮ :** ಬೀದಿಯ ಎರಡು ಬದಿಗೆ ಸಾಲಾಗಿ ಒಂದಕ್ಕೊಂದು ಅಂಟಿಕೊಂಡು ಹಲವು ಕುಟುಂಬಗಳು ವಾಸಿಸುತ್ತವೆ.
5. **ಚಕ್ರಾಕಾರದ ಗ್ರಾಮಗಳು:** ವಿಶೇಷವಾಗಿ ದೇವಾಲಯ, ಮಸೀದಿ, ಚರ್ಚ್, ಕೆರೆ ಮುಂತಾದ ಸ್ಥಳಗಳ ಸುತ್ತಲೂ ಜನರ ವಾಸದ ಮನೆಗಳಿರುತ್ತವೆ.
6. **ಚೌಕಾಕಾರದ ಅಥವಾ ಆಯತಾಕಾರದ ಗ್ರಾಮ:** ಮನೆಗಳ ಸಾಲು ಒಂದಕ್ಕೊಂದು ಸಮಾನಾಂತರ ಅಥವಾ ಲಂಬ ರೂಪದಲ್ಲಿ ಇರುತ್ತವೆ.
7. **ಕೂಡುದಾರಿ ಹಾಗೂ ಮಾರುಕಟ್ಟೆ ಗ್ರಾಮ :** ಎರಡು ಮೂರು ರಸ್ತೆಗಳು ಕೂಡುವ ಪ್ರದೇಶದಲ್ಲಿ ಮನೆಗಳಿರುತ್ತವೆ.

**7. ಗ್ರಾಮ ಸಮುದಾಯದ ಲಕ್ಷಣಗಳು ಯಾವುವು?**

**ಗ್ರಾಮ ಸಮುದಾಯದ ಲಕ್ಷಣಗಳು**

1. **ಗಾತ್ರದಲ್ಲಿ ಚಿಕ್ಕದು:**
2. **ಕೃಷಿ ಮತ್ತು ಕೃಷಿ ಪೂರಕ ಆರ್ಥಿಕ ಜೀವನ :**
3. **ಸಮುದಾಯ ಜೀವನ :** ಗ್ರಾಮ ಸಮುದಾಯದವರು ಪ್ರಕೃತಿಯಲ್ಲಿ ಅಚಲವಾದ ಭಕ್ತಿ ಇಟ್ಟಿರುತ್ತಾರೆ. ಇಲ್ಲಿ ಸ್ಪರ್ಧೆ, ವಂಚನೆ, ಮೋಸ, ಕೃತ್ರಿಮತೆ, ದೌರ್ಜನ್ಯಗಳಿಗೆ ಹೆಚ್ಚು ಸ್ಥಾನವಿಲ್ಲ.
4. **ಪ್ರಜಾಪ್ರಭುತ್ವದ ಆದರ್ಶ :**
5. **ನಾಗರಿಕ ಮೂಲ ಸೌಲಭ್ಯಗಳ ಕೊರತೆ :**

**8. ನಗರ ಸಮುದಾಯದ ಲಕ್ಷಣಗಳು ಯಾವುವು?**

1. **ಗಾತ್ರದಲ್ಲಿ ದೊಡ್ಡದು :** ನಗರ ಸಮುದಾಯ ದೊಡ್ಡದಿದ್ದು, ಹೆಚ್ಚಿನ ಜನಸಾಂದ್ರತೆ ಹೊಂದಿರುತ್ತದೆ
2. **ಸಾಂಸ್ಕೃತಿಕ ಬಹುತ್ವ :** ಏಕೆಂದರೆ, ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಜನರು ಬೇರೆ ಬೇರೆ ಪ್ರದೇಶಗಳಿಂದ ಬಂದು ಒಂದೇ ಕಡೆ ವಾಸಮಾಡುತ್ತಿರುತ್ತಾರೆ. ಆಗ ಅವರ ಜೀವನವು ಒಂದೇ ಸಾಂಸ್ಕೃತಿಕ ನೆಲೆಯಲ್ಲಿ ನಡೆಯದೆ, ವಿವಿಧ ಭಾಷಿಕ, ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ನಡೆಯುತ್ತಿರುತ್ತದೆ.
3. **ಕೃಷಿಯೇತರ ವೃತ್ತಿ :** ನಗರಗಳಲ್ಲಿ ಹೆಚ್ಚಿನ ಜನರು ಕೃಷಿಯೇತರ ವೃತ್ತಿಗಳನ್ನು ಮಾಡುತ್ತಾರೆ.
4. **ಗೌಣವಾಗುವ ಪ್ರಾಥಮಿಕ ಸಂಬಂಧಗಳು:** ನಗರ ಸಮುದಾಯದಲ್ಲಿ ಔಪಚಾರಿಕ ಸಂಬಂಧಗಳೇ ಹೆಚ್ಚು.
5. **ಔಪಚಾರಿಕ ಸಾಮಾಜಿಕ ನಿಯಂತ್ರಣ:** ನಗರ ಪ್ರದೇಶದಲ್ಲಿ ಸಮಾಜದ ರಕ್ಷಣೆ ಮತ್ತು ನಾಗರಿಕ ರಕ್ಷಣೆಗೆ ಪೋಲಿಸ್ ವ್ಯವಸ್ಥೆ ಇತ್ಯಾದಿಗಳಿವೆ.

**9. ಭೌತಿಕ ಮಾನವಶಾಸ್ತ್ರಜ್ಞರು ಮಾನವ ದೈಹಿಕ ಲಕ್ಷಣಗಳ ಆಧಾರದಲ್ಲಿ ಮಾಡಿರುವ ಬುಡಕಟ್ಟುಗಳ ವಿಭಾಗಗಳಾವುವು?**

ಭೌತಿಕ ಮಾನವಶಾಸ್ತ್ರಜ್ಞರು ಮಾನವ ದೈಹಿಕ ಲಕ್ಷಣಗಳನ್ನು ಅಧ್ಯಯನ ಮಾಡಿ 3 ಭಾಗ ವಿಭಾಗಿಸುತ್ತಾರೆ.

(ಅ) **ಕಕೇಶಿಯನ್:** ಈ ಬುಡಕಟ್ಟಿಗೆ ಸೇರಿದ ಜನರು ಶ್ವೇತವರ್ಣೀಯರು. ಇವರು ಎತ್ತರ ನಿಲುವು, ಉದ್ದವಾದ, ಚೂಪಾದ, ನೇರವಾದ ಮೂಗು, ಓರೆ ತಲೆ, ನೇರ ದವಡೆ, ಉದ್ದವಾದ ಮುಖ, ಸಣ್ಣ ತುಟಿ, ಮೈಮೇಲೆ ದಟ್ಟವಾಗಿ ಬೆಳೆದ ಕೂದಲು, ಕಂದು ಬಣ್ಣ ಮುಂತಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಕಕೇಶಿಯನ್ ಬುಡಕಟ್ಟಿನಲ್ಲಿ ನಾರ್ಡಿಕ್, ಆಲ್ಫೈನ್, ಮೆಡಿಟರೇನಿಯನ್ ಮತ್ತು ಹಿಂದು ಎಂಬ ನಾಲ್ಕು ಉಪಪಂಗಡಗಳಿವೆ.

(ಆ) **ಮಂಗೋಲಿಯನ್:** ಈ ಬುಡಕಟ್ಟಿಗೆ ಸೇರಿದ ಜನರು ಪೀತವರ್ಣೀಯರು (ಹಳದಿ ಬಣ್ಣ). ಗುಂಡು ತಲೆ, ಓರೆ ಕಣ್ಣು, ಚಪ್ಪಟೆಯಾದ ಹಾಗೂ ದುಂಡನೆಯ ಆಕಾರದ

SS STF DIGITAL GROUP

ಮುಖ, ನೇರವಾದ ಮತ್ತು ಉದ್ದವಾದ ತಲೆಗೂದಲು ಮೊದಲಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಅವರ ದವಡೆ ಅಷ್ಟಾಗಿ ಮುಂದಕ್ಕೆ ಚಾಚಿರುವುದಿಲ್ಲ. ಈ ಬುಡಕಟ್ಟಿನಲ್ಲಿ ಮಂಗೋಲಿಯನ್, ಮಲೇಶಿಯನ್, ಅಮೆರಿಕನ್ ಇಂಡಿಯನ್ ಎಂಬ ಮೂರು ಉಪಪಂಗಡಗಳಿವೆ.

(ಇ) **ನೀಗ್ರೊ** : ಈ ಬುಡಕಟ್ಟಿಗೆ ಸೇರಿದ ಜನರು ಕಪ್ಪು ಬಣ್ಣ, ಗುಂಡು ತಲೆ, ಚಪ್ಪಟೆಯಾದ ಮೂಗು, ಮುಂದಕ್ಕೆ ಚಾಚಿದ ದವಡೆ, ದುಂಡನೆಯ ಕಂದುಬಣ್ಣದ ಕಿರುಗಣ್ಣುಗಳು, ಹೊಳಪಾದ ಹಾಗೂ ಮೋಟಾದ ಗುಂಗುರು ಕೂದಲು, ದಪ್ಪ ತುಟಿ ಮುಂತಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಈ ಬುಡಕಟ್ಟಿನಲ್ಲಿ ಮಲೇಷಿಯನ್ನರು, ನೀಗ್ರೊ ಮತ್ತು ಕರಿಯಬಣ್ಣದ ಕುಳ್ಳರು ಎಂಬ ಮೂರು ಉಪಪಂಗಡಗಳಿವೆ.

**10. ಅಲೆಮಾರಿ ಸಮುದಾಯದ ಲಕ್ಷಣಗಳೇನು?**

1. ಜೀವನ ಅಥವಾ ಬದುಕಿಗಾಗಿ ಅಲೆದಾಟ :
2. ಸ್ಥಿರವಾಗಿ ನೆಲೆನಿಲ್ಲದೆ, ತಾತ್ಕಾಲಿಕ ವಾಸ :
3. ಶೂನ್ಯ ಅಥವಾ ಅಲ್ಪ ಬಂಡವಾಳದ ಕಾಯಕ ಜೀವಿಗಳು :
4. ಸರ್ವಚೇತನವಾದಿಗಳು : ಅಗಾಧವಾದ ಪ್ರಾಕೃತಿಕ ಜ್ಞಾನ, ಪ್ರಕೃತಿಯ ಅಗೋಚರ ಶಕ್ತಿಗಳಲ್ಲಿ ಸಿದ್ಧಹಸ್ತರು ಮತ್ತು ಅದರಲ್ಲಿ ನಂಬಿಕೆಯುಳ್ಳವರು.
5. ವಿಭಿನ್ನ ಮಾತೃಭಾಷಿಕರು.

# Part 2

# ಭೂಗೋಳ

## ಅಧ್ಯಾಯ:-01

## <u>ನಮ್ಮ ರಾಜ್ಯ ಕರ್ನಾಟಕ</u>

### I.ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ

1.ಕನ್ನಡ ರಾಜ್ಯೋತ್ಸವವನ್ನು ಪ್ರತಿ ವರ್ಷ **01 ನವಂಬರ್** ದಿನಾಂಕದಂದು ಆಚರಿಸಲಾಗುತ್ತದೆ.

2.ಕರ್ನಾಟಕ ಎಂದು ಮರುನಾಮಕರಣ ಮಾಡಿದವರ್ಷ

1973

3. ಕರ್ನಾಟಕದ ಪೂರ್ವಭಾಗದಲ್ಲಿ **ಆಂಧ್ರಪ್ರದೇಶ** ಮತ್ತು **ತೆಲಂಗಾಣ** ರಾಜ್ಯಗಳಿವೆ.

4. ಕರ್ನಾಟಕದ **ಬೆಳಗಾವಿ** ಜಿಲ್ಲೆಯು ವಿಸ್ತೀರ್ಣದಲ್ಲಿ ದೊಡ್ಡದಾಗಿದೆ.

5. ಕರ್ನಾಟಕವು ಭಾರತದ **ದಕ್ಷಿಣ** ಭಾಗದಲ್ಲಿದೆ.

### II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.

1.ಕರ್ನಾಟಕದ ಅಕ್ಷಾಂಶ ಮತ್ತು ರೇಖಾಂಶಗಳ ವಿಸ್ತರಣೆಯನ್ನು ಬರೆಯಿರಿ.

ಕರ್ನಾಟಕವು $11^0$ 31' ಮತ್ತು $18^0$ 45' ಉತ್ತರ ಅಕ್ಷಾಂಶಗಳು $74^0$ 12' ಮತ್ತು $78^0$ 40' ಪೂರ್ವರೇಖಾಂಶಗಳ ನಡುವೆ

2. ನಮ್ಮ ನೆರೆಯ ರಾಜ್ಯಗಳನ್ನು ಹೆಸರಿಸಿ.

ಉತ್ತರಕ್ಕೆ ಮಹಾರಾಷ್ಟ್ರ ಹಾಗೂ ಪೂರ್ವಕ್ಕೆ ಆಂಧ್ರ ಪ್ರದೇಶವಿದೆ. ದಕ್ಷಿಣ ಮತ್ತು ಆಗ್ನೇಯಕ್ಕೆ ತಮಿಳುನಾಡು, ನೈರುತ್ಯಕ್ಕೆ ಕೇರಳವಿದೆ. ವಾಯುವ್ಯಕ್ಕೆ ಗೋವಾರಾಜ್ಯಗಳಿವೆ

3. ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಾವುವು?

- ಬೆಂಗಳೂರು
- ಮೈಸೂರು
- ಬೆಳಗಾವಿ
- ಕಲಬುರಗಿ.

4. ಭಾರತದಲ್ಲಿ ಕರ್ನಾಟಕದ ಭೌಗೋಳಿಕ ಸ್ಥಾನವನ್ನುತಿಳಿಸಿ.

ಕರ್ನಾಟಕವು ಭಾರತದ ದಕ್ಷಿಣದಲ್ಲಿದ್ದು, ಪರ್ಯಾಯ ದ್ವೀಪದ ಪಶ್ಚಿಮ ಮಧ್ಯಭಾಗದಲ್ಲಿದೆ.

## ಅಧ್ಯಾಯ:-02

## ಪ್ರಾಕೃತಿಕ ವಿಭಾಗಗಳು

### I.ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿಮಾಡಿರಿ.

1.ಮಲ್ಪೆ ಸಮೀಪದಲ್ಲಿ <u>ಸೇಂಟ್ ಮೇರಿಸ್ ದ್ವೀಪ</u> ದ್ವೀಪವಿದೆ.

SS STF DIGITAL GROUP

2.ಸಹ್ಯಾದ್ರಿ ಎಂದು ಪಶ್ಚಿಮ ಘಟ್ಟ ಗಳನ್ನು ಕರೆಯುತ್ತಾರೆ.

3.ಆಗುಂಬೆ ಘಾಟಿಯು ಶಿವಮೊಗ್ಗ ಮತ್ತು ಉಡುಪಿ ಸ್ಥಳಗಳನ್ನು ಸಂಪರ್ಕಿಸುತ್ತದೆ.

4. ಕರ್ನಾಟಕದ ಕಾಶ್ಮೀರ ಎಂದು ಕೊಡಗು ಜಿಲ್ಲೆಯನ್ನು ಕರೆಯುತ್ತಾರೆ.

**II. ಗುಂಪುಗಳಲ್ಲಿ ಚರ್ಚಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1.ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿರಿ.

- ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಭಾಗಗಳು
- ಕರಾವಳಿ ಮೈದಾನ
- ಮಲೆನಾಡು
- ಮೈದಾನ ಪ್ರದೇಶ

2. ಮಲೆನಾಡು ಪ್ರದೇಶದ ಲಕ್ಷಣಗಳನ್ನು ಕುರಿತು ಬರೆಯಿರಿ.

ಮಲೆನಾಡು ಉತ್ತರ ದಕ್ಷಿಣವಾಗಿ ಕರಾವಳಿಗೆ ಸಮಾನಾಂತರವಾಗಿ ಹಬ್ಬಿದೆ.ಪಶ್ಚಿಮ ಭಾಗವು ಕಡಿದಾದ ಇಳಿಜಾರನ್ನು ಹೊಂದಿದ್ದು, ಪೂರ್ವದ ಕಡೆಗೆ ಹೋದಂತೆ ನಿಧಾನವಾಗಿ ಹಂತ ಹಂತವಾಗಿ ಇಳಿಜಾರಾಗುತ್ತಾ ಹೋಗುತ್ತದೆ. ಆದ್ದರಿಂದಲೇ ಇದನ್ನು ಘಟ್ಟಗಳೆಂದು ಕರೆಯುತ್ತಾರೆ.ಮಲೆನಾಡು ಪ್ರದೇಶದ ಉದ್ದ 650 ಕಿ.ಮೀ. ಅಗಲ 50 – 76 ಕಿ.ಮೀ.ಗಳು.ಮಲೆನಾಡು ಪ್ರದೇಶದ ಸರಾಸರಿ ಎತ್ತರ ಸಮುದ್ರಮಟ್ಟದಿಂದ 900 ರಿಂದ 1500 ಮೀಟರಗಳು.ಇದು ಅರಬ್ಬಿ ಸಮುದ್ರದಿಂದ ಬೀಸುವ ಮಳೆಮಾರುತಗಳನ್ನು ತಡೆದು 200 ಸೆಂ.ಮೀ.ಗಿಂತ ಹೆಚ್ಚು ಮಳೆಯನ್ನು ಪಡೆಯುತ್ತದೆ

3. ಕರ್ನಾಟಕದ ಕರಾವಳಿ ಮೈದಾನಗಳ ಬಗ್ಗೆ ಬರೆಯಿರಿ.

ಈ ಮೈದಾನವು ಅರಬ್ಬೀ ಸಮುದ್ರ ಮತ್ತು ಮಲೆನಾಡುಗಳ ಮಧ್ಯೆ ವಿಸ್ತರಿಸಿದೆ. ಇದು ದಕ್ಷಿಣದಲ್ಲಿ ಮಂಗಳೂರಿನಿಂದ ಉತ್ತರದಲ್ಲಿ ಕಾರವಾರದವರೆಗೆ 320 ಕಿ.ಮೀ. ಉದ್ದವಾಗಿದೆ. ಹಾಗೂ 12 ರಿಂದ 64 ಕಿ.ಮೀ. ಅಗಲವಾಗಿದೆ.ದಕ್ಷಿಣದಲ್ಲಿ ಅಗಲವಾಗಿದ್ದು, ಉತ್ತರದ ಕಡೆಗೆ ಕಿರಿದಾಗುತ್ತಾ ಕಡಿದಾದ ಇಳಿಜಾರಿನಿಂದ ಕೂಡಿದೆ.ಇದರ ಎತ್ತರ ಸಮುದ್ರಮಟ್ಟದಿಂದ 200 ಮೀಟರಗಳನ್ನು ಮೀರುತ್ತದೆ.
ಇದನ್ನು ಕೆನರಾ ಕರಾವಳಿ ಅಥವಾ ಕರ್ನಾಟಕ ಕರಾವಳಿ ಎಂದು ಕರೆಯುವರು

4. ದಕ್ಷಿಣ ಮೈದಾನದ ಪ್ರಮುಖ ಬೆಟ್ಟಗಳನ್ನು ಹೆಸರಿಸಿ.

ಚಿತ್ರದುರ್ಗದ ಬೆಟ್ಟಗಳು, ತುಮಕೂರು ಜಿಲ್ಲೆಯ ಮಧುಗಿರಿ ಬೆಟ್ಟ, ಆದಿಚುಂಚನಗಿರಿ ಬೆಟ್ಟ, ಮೈಸೂರು ಜಿಲ್ಲೆಯ ಚಾಮುಂಡಿಬೆಟ್ಟ ಪ್ರಮುಖವಾದವು.

5. ಪಶ್ಚಿಮ ಘಟ್ಟ ಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳಾವುವು ?

- ಚಾರ್ಮಾಡಿ ಘಾಟಿ :- ಇದು ಮಂಗಳೂರು ಮತ್ತು ಚಿಕ್ಕಮಗಳೂರುಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.
- ಶಿರಾಡಿ ಘಾಟಿ :- ಇದು ಹಾಸನ – ಸಕಲೇಶಪುರ – ಮಂಗಳೂರು ನಡುವೆ ಸಂಪರ್ಕ ಕಲ್ಪಿಸುತ್ತದೆ.
- ಆಗುಂಬೆ ಘಾಟಿ :- ಇದು ಶಿವಮೊಗ್ಗ ಮತ್ತು ಉಡುಪಿಯ ನಡುವೆ ಸಂಪರ್ಕ ಕಲ್ಪಿಸುತ್ತದೆ.
- ಹುಲಿಕಲ್ ಘಾಟಿ :- ಇದು ಶಿವಮೊಗ್ಗ – ಕುಂದಾಪುರ ನಡುವೆ ಸಂಪರ್ಕ ಕಲ್ಪಿಸುತ್ತದೆ.

**ಅಧ್ಯಾಯ:-03**

# ಕರ್ನಾಟಕದ ವಾಯುಗುಣ, ಮಣ್ಣು, ಸ್ವಾಭಾವಿಕ ಸಸ್ಯವರ್ಗ

I. ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.

1) ಬೇಸಿಗೆ ಕಾಲವು **ಮಾರ್ಚ್,ಏಪ್ರಿಲ್ ಮತ್ತು ಮೇ** ತಿಂಗಳುಗಳಲ್ಲಿ ಇರುತ್ತದೆ.

2) ಅತಿ ಹೆಚ್ಚು ಮಳೆ ಬೀಳುವ ಋತುಮಾನ **ಮಳೆಗಾಲ** ಆಗಿದೆ.

3) ಉತ್ತರ ಕರ್ನಾಟಕದಲ್ಲಿ **ಕಪ್ಪು** ಮಣ್ಣು ಹೆಚ್ಚಾಗಿ ಕಂಡುಬರುತ್ತದೆ.

4) ಸದಾಹಸಿರಿನಿಂದ ಕೂಡಿರುವ ಅರಣ್ಯಗಳು **ಪಶ್ಚಿಮ ಘಟ್ಟ** ಪ್ರದೇಶದಲ್ಲಿದೆ.

5) ಅತಿ ಹೆಚ್ಚು ಅರಣ್ಯ ಪ್ರದೇಶವು**ಉತ್ತರ ಕನ್ನಡ** ಜಿಲ್ಲೆಯಲ್ಲಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಕರ್ನಾಟಕದ ನಾಲ್ಕು ಋತುಮಾನಗಳಾವುವು?

- ❖ ಬೇಸಿಗೆ ಕಾಲ
- ❖ ಮಳೆಗಾಲ
- ❖ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ
- ❖ ಚಳಿಗಾಲ

2) ಕರ್ನಾಟಕದ ಮಳೆಗಾಲವನ್ನು ಕುರಿತು ಬರೆಯಿರಿ.

- ❖ ಕರ್ನಾಟಕದಲ್ಲಿ ಮಳೆಗಾಲವನ್ನು ನೈರುತ್ಯ ಮಾನ್ಸೂನ್ ಮಾರುತಗಳ ಕಾಲವೆಂದು ಕರೆಯುವರು.
- ❖ ಅರಬ್ಬಿಸಮುದ್ರದ ಮೇಲಿಂದ ಬೀಸುವ ತೇವಾಂಶಭರಿತ ಮಾರುತಗಳನ್ನು ಮಲೆನಾಡು ಘಟ್ಟಗಳು ತಡೆದು ಅಧಿಕ ಮಳೆಯನ್ನು ಸುರಿಸುತ್ತವೆ.
- ❖ ಪೂರ್ವದ ಕಡೆಗೆ ಹೋದಂತೆಲ್ಲಾ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಪೂರ್ವದ ಮೈದಾನವು ಮಳೆಯ ನೆರಳಿನ ಪ್ರದೇಶವೆಂದು ಕರೆಯಲ್ಪಡುವದು.
- ❖ ರಾಜ್ಯದಲ್ಲಿ ಆಗುಂಬೆ ಅಧಿಕ ಮಳೆ ಪಡೆದರೆ, ಚಿತ್ರದುರ್ಗ ಜಿಲ್ಲೆಯ ನಾಯಕನ ಹಟ್ಟಿ ಅತಿ ಕಡಿಮೆ ಮಳೆಯನ್ನು ಪಡೆದ ದಾಖಲೆಯಿದೆ.
- ❖ ಈ ಋತುಮಾನದಲ್ಲಿ ಕರ್ನಾಟಕದಲ್ಲಿ ಶೇ. ೮೦ ರಷ್ಟು ಮಳೆಯಾಗುತ್ತದೆ.

3) ಕರ್ನಾಟಕದಲ್ಲಿನ ಮಣ್ಣಿನ ವಿಧಗಳನ್ನು ತಿಳಿಸಿ.

- ❖ ಕರ್ನಾಟಕದಲ್ಲಿ ನಾಲ್ಕು ಪ್ರಕಾರದ ಮಣ್ಣಿನ ವಿಧಗಳಿವೆ. ಅವುಗಳೆಂದರೆ
- ❖ ಕೆಂಪುಮಣ್ಣು
- ❖ ಕಪ್ಪು ಮಣ್ಣು
- ❖ ಜಂಬಿಟ್ಟಿಗೆ ಮಣ್ಣು
- ❖ ಕರಾವಳಿಯ ಮೆಕ್ಕಲು ಮಣ್ಣು

4)ಕರ್ನಾಟಕದ ವಿವಿಧ ಸ್ವಾಭಾವಿಕ ಸಸ್ಯವರ್ಗಗಳನ್ನು ತಿಳಿಸಿ.

- ❖ ನಿತ್ಯ ಹರಿದ್ವರ್ಣ ಕಾಡುಗಳು
- ❖ ಎಲೆ ಉದುರುವ ಸಸ್ಯವರ್ಗ
- ❖ ಮಿಶ್ರಣ ಕಾಡುಗಳು
- ❖ ಕುರುಚಲು ಮತ್ತು ಹುಲ್ಲುಗಾವಲುಗಳು

5) ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ?

- ❖ ಕರ್ನಾಟಕದ ಕಾಡುಗಳಲ್ಲಿ ವಿಶೇಷವಾಗಿ ಶ್ರೀಗಂಧದ ಮರಗಳು ಬೆಳೆಯುತ್ತವೆ.
- ❖ ಇದರಿಂದ ಸುಗಂಧ ದ್ರವ್ಯ, ಕುಸುರಿ ಕೆಲಸದ ಕುಶಲ ವಸ್ತುಗಳು ಸಾಬೂನು, ಔಷಧಿಗಳನ್ನು ತಯಾರಿಸಲಾಗುವುದು.
- ❖ ಇವು ವಿಶ್ವವಿಖ್ಯಾತವಾಗಿದ್ದು, ದೇಶೀಯ ಅಪಾರವಾದ ಬೇಡಿಕೆ ಪೂರೈಸುವದಲ್ಲದೇ ವಿದೇಶಗಳಿಗೂ ರಫ್ತು ಮಾಡಲಾಗುತ್ತದೆ.
- ❖ ಆದ್ದರಿಂದ ಕರ್ನಾಟಕವು ಶ್ರೀಗಂಧದ ನಾಡು ಎಂದೇ ಪ್ರಸಿದ್ಧಿ ಪಡೆದಿದೆ.

6) ನಮ್ಮ ಅರಣ್ಯಗಳಲ್ಲಿರುವ ಪ್ರಮುಖ ವನ್ಯಪ್ರಾಣಿಗಳನ್ನು ಹೆಸರಿಸಿ.

ನಮ್ಮ ಅರಣ್ಯಗಳಲ್ಲಿರುವ ಪ್ರಮುಖ ವನ್ಯಪ್ರಾಣಿಗಳೆಂದರೆ, ಆನೆ ಹುಲಿ ಚಿರತೆ, ಕಾಡುಹಂದಿ, ಕಾಡೆಮ್ಮೆ, ಕಡವೆ, ಜಿಂಕೆ, ಕರಡಿ, ಮುಳ್ಳು ಹಂದಿ ಮೊದಲಾದವು.

************************************

ಅಧ್ಯಾಯ – 4

# ಕರ್ನಾಟಕದ ಜಲಸಂಪನ್ಮೂಲಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತಪದಗಳಿಂದ ಭರ್ತಿಮಾಡಿರಿ.**

1. ಕಾವೇರಿ ನದಿಯು ಕೊಡಗುಜಿಲ್ಲೆಯ **ತಲಕಾವೇರಿ** ಎಂಬಲ್ಲಿ ಉಗಮ ಹೊಂದುತ್ತದೆ.
2. ಪ್ರಸಿದ್ಧ ಜೋಗ್ ಜಲಪಾತ **ಶರಾವತಿ** ನದಿಯಿಂದ ಸೃಷ್ಟಿಯಾಗಿದೆ.
3. ಕೃಷ್ಣರಾಜಸಾಗರ ಅಣೆಕಟ್ಟು **ಮಂಡ್ಯ** ಜಿಲ್ಲೆಯಲ್ಲಿದೆ.
4. ಕರ್ನಾಟಕದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ **ಶಿವನಸಮುದ್ರ** .

5) ಆಲಮಟ್ಟಿ ಅಣೆಕಟ್ಟೆಯನ್ನು **ಕೃಷ್ಣಾ** ನದಿಗೆ ನಿರ್ಮಿಸಲಾಗಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1.ಕರ್ನಾಟಕದ ಪ್ರಮುಖ ನದಿಗಳನ್ನು ಹೆಸರಿಸಿ.

ಪೂರ್ವಾಭಿಮುಖವಾಗಿ ಹರಿಯುವ ನದಿಗಳು –

ಕೃಷ್ಣಾ, ಕಾವೇರಿ, ಪೆನ್ನಾರ್ ಮತ್ತು ಪಾಲಾರ್ ನದಿಗಳು

ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು –

ಶರಾವತಿ, ಕಾಳಿ, ಗಂಗಾವಳಿ(ಬೆಡ್ತಿ), ನೇತ್ರಾವತಿ,

ವರಾಹಿ, ಅಘನಾಶಿನಿ.

2. ಕೃಷ್ಣಾನದಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

ಕೃಷ್ಣಾನದಿಯು ದಕ್ಷಿಣ ಭಾರತದ ಎರಡನೇ ಮುಖ್ಯ ನದಿ.ಇದು ಮಹಾಬಳೇಶ್ವರ ಎಂಬಲ್ಲಿ ಉಗಮ ಹೊಂದಿ 1392 ಕಿ.ಮೀ. ದೂರ ಪೂರ್ವದೆಡೆಗೆ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ.ಇದು ಕರ್ನಾಟಕದಲ್ಲಿ 480 ಕಿ.ಮೀ ದೂರ ಹರಿಯುವುದು.

ಭೀಮ, ತುಂಗಭದ್ರಾ, ಘಟಪ್ರಭ ಮತ್ತು ಮಲಪ್ರಭ ನದಿಗಳು ಇದರ ಉಪನದಿಗಳಾಗಿವೆ. ಕೃಷ್ಣಾ ನದಿಯು ಉತ್ತರ ಕರ್ನಾಟಕದ ನೀರಾವರಿ ಮತ್ತು ಜಲವಿದ್ಯುತ್ ತಯಾರಿಕೆಗೆ ಅನುಕೂಲವಾಗಿದೆ.

3. ಕಾವೇರಿ ನದಿಯ ಉಪನದಿಗಳಾವುವು?

ಹೇಮಾವತಿ, ಹಾರಂಗಿ, ಲೋಕಪಾವನಿ, ಅರ್ಕಾವತಿ, ಶಿಂಷಾ, ಲಕ್ಷ್ಮಣತೀರ್ಥ, ಕಪಿಲೆ ಮತ್ತು ಸುವರ್ಣಾವತಿ ನದಿಗಳು ಕಾವೇರಿ ನದಿಯ ಉಪನದಿಗಳಾಗಿವೆ

4. ಕರ್ನಾಟಕ ನೀರಾವರಿಯ ವಿಧಗಳನ್ನು ತಿಳಿಸಿ.

ಮೂರು ರೀತಿಯ ನೀರಾವರಿ ವಿಧಗಳಿವೆ

1. ಕಾಲುವೆ ನೀರಾವರಿ
2. ಬಾವಿ ನೀರಾವರಿ
3. ಕೆರೆ ನೀರಾವರಿ.

5. ನಮ್ಮ ರಾಜ್ಯದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.

ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ಯೋಜನೆಗಳೆಂದರೆ – ಶಿವನಸಮುಂದ್ರ, ಶಿಂಷಾ ಮಹಾತ್ಮಾಗಾಂಧಿ ಜಲವಿದ್ಯುಚ್ಛಕ್ತಿ ಯೋಜನೆ ಸೂಪ, ನಾಗಝರಿ, ಕದ್ರ, ಕೊಡಸಳ್ಳಿ ವಾರಾಹಿ ಮತ್ತು ಮಾರಿಕಣಿವೆ, ಭದ್ರ, ತುಂಗಭದ್ರ ಮತ್ತು ಆಲಮಟ್ಟಿ ಯೋಜನೆಗಳು ಪ್ರಮುಖವಾದವುಗಳು.

6. ನದಿಗಳು ರಾಜ್ಯಗಳ ನಡುವೆ ಹೇಗೆ ಸಾಮರಸ್ಯ ಬೆಳೆಸುತ್ತವೆ?

ಭಾರತದಲ್ಲಿ ನದಿಗಳು ಹಲವಾರು ರಾಜ್ಯಗಳಲ್ಲಿ ಹರಿಯುತ್ತವೆ. ಉದಾ : ಕಾವೇರಿ ನದಿಯು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳಲ್ಲಿ ಹರಿಯುತ್ತದೆ. ಕೃಷ್ಣಾ ನದಿಯು ಮಹಾರಾಷ್ಟ್ರ, ಕರ್ನಾಟಕ, ಆಂದ್ರಪ್ರದೇಶಗಳಲ್ಲಿ ಹರಿಯುತ್ತದೆ. ಈ ರಾಜ್ಯಗಳು ಜಲವಿವಾದಗಳಿದ್ದಾಗ್ಯೂ ನದಿಯ ನೀರನ್ನು ಕೃಷಿ ಕ್ಷೇತ್ರಕ್ಕೆ, ಕೈಗಾರಿಕಾ ಕ್ಷೇತ್ರಕ್ಕೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ.

**********************************

**ಅಧ್ಯಾಯ:– 5**

# ಕರ್ನಾಟಕದ ಭೂಸಂಪತ್ತು

**I. ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ.**

1. ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದನ್ನು **ಬೂ ಬಳಕೆ**ಎನ್ನುವರು.

2. ಅತಿ ಹೆಚ್ಚು ಸಾಗುವಳಿ ಭೂಮಿಯನ್ನು **ಕಲುಬುರುಗಿ** ಜಿಲ್ಲೆಯು ಹೊಂದಿದೆ.

3. 'ಸೊರ್ಗಾಮ್‌ವಲ್ಗರೆ' ಎಂಬುದು **ಜೋಳದ** ಬೆಳೆಯ ವೈಜ್ಞಾನಿಕ ಹೆಸರು.

4. ಕರ್ನಾಟಕದಲ್ಲಿ ಅತಿಹೆಚ್ಚು ಕಬ್ಬು ಬೆಳೆಯುವ ಜಿಲ್ಲೆ **ಬೆಳಗಾವಿ** .

5. ತಂಬಾಕಿನಲ್ಲಿ **ನಿಕೋಟಿನ್** ಎಂಬ ಮಾದಕವಸ್ತುವಿರುತ್ತದೆ.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕರ್ನಾಟಕದ ಭೂ ಬಳಕೆಯ ಮಾದರಿಗಳನ್ನು ತಿಳಿಸಿ.

- ❖ ಕರ್ನಾಟಕದ ಭೂ ಬಳಕೆಯ ಮಾದರಿಗಳು.
- ❖ ನಿವ್ವಳ ಸಾಗುವಳಿ ಭೂಮಿ
- ❖ ಅರಣ್ಯ ಪ್ರದೇಶ
- ❖ ಸಾಗುವಳಿಗೆ ಲಭ್ಯವಿಲ್ಲದ ಭೂಮಿ
- ❖ ಸಾಗುವಳಿ ಮಾಡದ ಇತರೆ ಭೂಮಿ
- ❖ ಬೀಳು ಭೂಮಿ

2. ಕರ್ನಾಟಕದಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.

- ❖ ಇದು ಜನರ ಜೀವನಾಧಾರಕ್ಕೆ ಉದ್ಯೋಗವನ್ನು ಒದಗಿಸಿ ಕೊಡುತ್ತದೆ.
- ❖ ಇದು ಜನರಿಗೆ ಆಹಾರ ಮತ್ತು ಜಾನುವಾರುಗಳಿಗೆ ಮೇವನ್ನು ಒದಗಿಸುತ್ತದೆ.
- ❖ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸಿಕೊಡುತ್ತದೆ.
- ❖ ರಾಜ್ಯದ ಆದಾಯದ ಮೂಲವಾಗಿದೆ.
- ❖ ವಿದೇಶಿ ವಿನಿಮಯ ಗಳಿಸಿಕೊಡುತ್ತದೆ.
- ❖ ತೃತೀಯ ವೃತ್ತಿಗಳಾದ ಸಾರಿಗೆ, ಬ್ಯಾಂಕಿಂಗ್ ವ್ಯವಸ್ಥೆ, ವಿಮೆ ಇತ್ಯಾದಿಗಳ ಪ್ರಗತಿಗೂ ಪೂರಕವಾಗಿದೆ.

3. ನೀರಾವರಿ ಬೇಸಾಯ ಎಂದರೇನು ? ನೀರಾವರಿ ಬೆಳೆಗಳನ್ನು ಹೆಸರಿಸಿ.

ಕಾಲುವೆ, ಕೆರೆ, ಬಾವಿ ಮೂಲಗಳಿಂದ ಬಳಕೆ ಮಾಡಿ ಸಾಗುವಳಿ ಮಾಡುವ ಕೃಷಿ ಪದ್ಧತಿಗೆ 'ನೀರಾವರಿ ಬೇಸಾಯ' ವೆನ್ನುವರು. ಭತ್ತ, ಕಬ್ಬು ನೀರಾವರಿ ಬೇಸಾಯದ ಪ್ರಮುಖ ಬೆಳೆಗಳಾಗಿವೆ.

4. ಮಿಶ್ರ ಬೇಸಾಯದ ಮುಖ್ಯ ಲಕ್ಷಣಗಳನ್ನು ತಿಳಿಸಿ.

- ❖ ಇದು ಪ್ರಮುಖ ಮುಂಗಾರು ಬೆಳೆ. ಬೇಸಿಗೆಯಲ್ಲೂ ಇದನ್ನು ನೀರಾವರಿ ಸಹಾಯದಿಂದ ಬೆಳಯಬಹುದು.
- ❖ ರಾಗಿಯ ಉತ್ಪಾದನೆಯಲ್ಲಿ ಭಾರತದಲ್ಲೇ ಕರ್ನಾಟಕವು ಮೊದಲ ಸ್ಥಾನದಲ್ಲಿದೆ.
- ❖ ದಕ್ಷಿಣದ ಮೈದಾನದ ಜಿಲ್ಲೆಗಳಲ್ಲಿ ರಾಗಿ ಬೆಳೆಯುವ ಪ್ರದೇಶಗಳು ಕೇಂದ್ರಿಕೃತವಾಗಿವೆ.
- ❖ ಕರ್ನಾಟಕದಲ್ಲಿ ತುಮಕೂರು ಅತಿ ಹೆಚ್ಚು ರಾಗಿ ಬೆಳೆಯುವ ಮತ್ತು ಉತ್ಪಾದಿಸುವ ಜಿಲ್ಲೆ. ಅನಂತರ ಸ್ಥಾನಗಳಲ್ಲಿ ರಾಮನಗರ, ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಗಳು ರಾಗಿ ಬೆಳೆಗೆ ಪ್ರಸಿದ್ಧವಾಗಿವೆ.

5. ರಾಗಿಯ ಉಪಯೋಗಗಳನ್ನು ತಿಳಿಸಿ.

ರಾಗಿಯು ಉತ್ತಮ ಪೋಷಕಾಂಶಗಳನ್ನು ಹೊಂದಿರುವ ಆಹಾರ ಧಾನ್ಯವಾಗಿದೆ. ರಾಗಿಯಿಂದ ಮುದ್ದೆ, ಗಂಜಿ, ರೊಟ್ಟಿ, ಹುರಿಹಿಟ್ಟು, ಮಾಲ್ಟ್, ದೋಸೆ ಮುಂತಾದ ಆಹಾರ ಪದಾರ್ಥಗಳನ್ನು ತಯಾರಿಸಿ ಬಳಸಲಾಗುತ್ತದೆ.

*********************************************

## ಅಧ್ಯಾಯ:-6

# ಖನಿಜಸಂಪನ್ಮೂಲಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದ ಭರ್ತಿಮಾಡಿರಿ.**

1. ಕುದುರೆಮುಖದಲ್ಲಿ **ಕಬ್ಬಿಣದ** ಅದಿರು ದೊರೆಯುತ್ತದೆ.
2. ಉತ್ತಮದರ್ಜೆಯ ಕಬ್ಬಿಣದ ಅದಿರು **ಮ್ಯಾಗ್ನಟೈಟ್**
3. ಬಳ್ಳಾರಿ ಜಿಲ್ಲೆಯ ಸಂಡೂರು **ಮ್ಯಾಂಗನೀಸ್** ಗಣಿಗಳನ್ನು ಹೊಂದಿದೆ.
4. ಬಾಕ್ಸೈಟ್ ಅದಿರಿನಿಂದ **ಅಲ್ಯುಮಿನಿಯಂ** ಲೋಹವನ್ನು ಉತ್ಪಾದಿಸುತ್ತಾರೆ.
5. ಅತ್ಯಂತ ಆಳವಾದ ಚಿನ್ನದ ಗಣಿ **ಚಾಂಪಿಯನ್ ರೀಫ್**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕರ್ನಾಟಕವನ್ನು `ಚಿನ್ನದ ನಾಡು' ಎಂದು ಏಕೆ ಕರೆಯುತ್ತಾರೆ?

ಕರ್ನಾಟಕವು ಚಿನ್ನದ ಗಣಿಗಾರಿಕೆಯಲ್ಲಿ ಭಾರತದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಉತ್ಪಾದನೆಯ ಹೆಚ್ಚು ಚಿನ್ನವನ್ನು ಕರ್ನಾಟಕ ಗಣಿಯಿಂದಲೇ ಪಡೆಯಲಾಗುತ್ತಿದೆ. ಆದ್ದರಿಂದ ಇದನ್ನು 'ಚಿನ್ನದನಾಡು' ಎಂದುಕರೆಯುವರು.

2. ಕರ್ನಾಟಕದಲ್ಲಿ ಸಿಗುವ ಪ್ರಮುಖ ಖನಿಜಗಳಾವುವು?

ಕಬ್ಬಿಣದಅದಿರು, ಚಿನ್ನ, ಮ್ಯಾಂಗನೀಸ್, ಸುಣ್ಣಕಲ್ಲು, ತಾಮ್ರ, ಬಾಕ್ಸೈಟ್, ಕ್ರೋಮೈಟ್, ಕಲ್ನಾರು, ಅಭ್ರಕ ಮತ್ತು ಗ್ರಾಫೈಟ್ ಇತ್ಯಾದಿ ಕರ್ನಾಟಕದಲ್ಲಿ ದೊರೆಯುವ ಪ್ರಮುಖ ಖನಿಜಗಳಾಗಿವೆ.

3. ಮಿಶ್ರಲೋಹವಾಗಿ ಬಳಸುವ ಅದಿರು ಯಾವುದು?

SS STF DIGITAL GROUP

ಮಿಶ್ರಲೋಹವಾಗಿ ಬಳಸುವ ಅದಿರು **ಮ್ಯಾಂಗನೀಸ್**

4. ನಮ್ಮ ರಾಜ್ಯದಲ್ಲಿ ಕಬ್ಬಿಣದ ಅದಿರು ದೊರೆಯುವ ಪ್ರದೇಶಗಳನ್ನು ತಿಳಿಸಿ.

ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯು ಅಪಾರವಾದ ಕಬ್ಬಿಣದ ನಿಕ್ಷೇಪವನ್ನು ಹೊಂದಿದ್ದು,ಪ್ರಥಮಸ್ಥಾನದಲ್ಲಿದೆ. ಅದು ಹೊಸಪೇಟೆ ಮತ್ತು ಸಂಡೂರು ಪ್ರದೇಶದಲ್ಲಿ ಕಂಡು ಬರುತ್ತದೆ. ಚಿಕ್ಕಮಗಳೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಬಾಬಬುಡನಗಿರಿ, ಕೆಮ್ಮಣ್ಣುಗುಂಡಿ, ಕುದುರೆಮುಖ, ಗಂಗಾಮೂಲ, ಕಲ್ಲತಗಿರಿ, ಜೇನುಸುರಿ, ಗುಡ್ಡಗಳಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ. ಬಾಗಲಕೋಟೆ ಜಿಲ್ಲೆಯ ಅಮಿನಗಡ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಸಾಸಲು, ತುಮಕೂರು ಜಿಲ್ಲೆಯ ಹುಳಿಯಾರು, ಚಿಕ್ಕನಾಯಕನಹಳ್ಳಿ, ಶಿವಮೊಗ್ಗ ಜಿಲ್ಲೆಯ ಕುಂಸಿ, ಶಂಕರಗುಡ್ಡ, ಸಿದ್ದರಹಳ್ಳಿ, ದಕ್ಷಿಣಕನ್ನಡ, ಉತ್ತರಕನ್ನಡ ಮತ್ತು ಗದಗ ಜಿಲ್ಲೆಗಳಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ.

5. ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ಜಿಲ್ಲೆ ಯಾವುದು?

ಬಾಕ್ಸೈಟ್ ಉತ್ಪಾದಿಸುವ ಪ್ರಮುಖ **ಬೆಳಗಾವಿ.**

6. ಕರ್ನಾಟಕದ ಪ್ರಮುಖ ಚಿನ್ನದ ಗಣಿಗಳನ್ನು ತಿಳಿಸಿ.

❖ ಕೋಲಾರದ ಕೆಜಿಎಫ್
❖ ರಾಯಚೂರು ಜಿಲ್ಲೆಯ ಹಟ್ಟಿ
❖ ತುಮಕೂರು ಜಿಲ್ಲೆಯ ಬೆಳ್ಳಾರ
❖ ಶಿರಾ ಸಮೀಪವಿರುವ ಅಜ್ಜನಹಳ್ಳಿ
❖ ಗದಗ ಜಿಲ್ಲೆಯ ಮುಳಗುಂದ, ಕಪ್ಪತಗುಡ್ಡ
❖ ಹಾಸನ ಜಿಲ್ಲೆಯ ಕೆಂಪಿನಕೋಟೆಗಳಲ್ಲಿ ಚಿನ್ನದ ನಿಕ್ಷೇಪಗಳಿವೆ

*********************************************
*

## ಅಧ್ಯಾಯ:-7

## ಸಾರಿಗೆ

### I. ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ.

1. ಪ್ರತಿಯೊಂದು ಹಳ್ಳಿ-ಪಟ್ಟಣಗಳನ್ನು **ರಸ್ತೆ** ಸಾರಿಗೆ ಸಂಪರ್ಕಿಸುತ್ತದೆ.

2. ಕರ್ನಾಟಕದಲ್ಲಿ ಒಟ್ಟು **14** ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ.

3. ಬೆಂಗಳೂರಿನಲ್ಲಿರುವ ನಗರ ರೈಲನ್ನು **ನಮ್ಮ ಮೆಟ್ರೋ** ಎನ್ನುತ್ತಾರೆ.

4. ಕರ್ನಾಟಕದ ಹೆಬ್ಬಾಗಿಲು ಎಂದು **ಮಂಗಳೂರು** ಬಂದರನ್ನು ಕರೆಯಲಾಗಿದೆ.

5. ಕರ್ನಾಟಕದ ಕರಾವಳಿಯ ರೈಲುಮಾರ್ಗವನ್ನು **ಕೊಂಕಣ ರೈಲ್ವೆ ಮಾರ್ಗ** ಕರೆಯಲಾಗಿದೆ.

### II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

1. ರಸ್ತೆ ಸಾರಿಗೆಯ ಮಹತ್ವವನ್ನು ತಿಳಿಸಿ.

❖ ಹೆಚ್ಚಾಗಿಜನರು ಹಳ್ಳಿಗಾಡಿನಲ್ಲೇ ವಾಸ ಮಾಡುವುದರಿಂದ ಪ್ರತಿಯೊಂದು ಹಳ್ಳಿ-ಪಟ್ಟಣ ಹಾಗೂ ಇತರ ಜನವಸತಿಗಳನ್ನು ಸಂಪರ್ಕಿಸುವುದರಲ್ಲಿ ರಸ್ತೆ ಸಾರಿಗೆಯ ಪಾತ್ರ ಮಹತ್ವದ್ದಾಗಿದೆ.
❖ ರಸ್ತೆಗಳನ್ನು ಸುಲಭವಾಗಿ, ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದು.
❖ ಪ್ರಯಾಣಿಕರು ಸರಕುಗಳನ್ನು ರಾಜ್ಯದ ಮೂಲೆ ಮೂಲೆಗೂ ಸಾಗಿಸಬಹುದು.
❖ ರಸ್ತೆಗಳು ಅಭಿವೃದ್ಧಿಯು ರಾಜ್ಯದ ಕೃಷಿ, ಕೈಗಾರಿಕೆ, ಗಣಿಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯನ್ನು ನಿರ್ಧರಿಸುತ್ತದೆ.
❖ ರಸ್ತೆ ಸಾರಿಗೆಗಳು ರೈಲು ಸಾರಿಗೆಗಳಿಗೆ ಪೂರಕವಾಗಿವೆ.

2. ಕರ್ನಾಟಕದ ರಸ್ತೆಗಳ ವಿಧಗಳನ್ನು ಬರೆಯಿರಿ.

❖ ರಾಷ್ಟ್ರೀಯ ಹೆದ್ದಾರಿಗಳು.
❖ ರಾಜ್ಯ ಹೆದ್ದಾರಿಗಳು
❖ ಜಿಲ್ಲಾ ರಸ್ತೆಗಳು
❖ ಗ್ರಾಮೀಣ ರಸ್ತೆಗಳು

3. ಕರ್ನಾಟಕದ ಪ್ರಮುಖ ರೈಲುಮಾರ್ಗಗಳನ್ನು ಹೆಸರಿಸಿ.

❖ ಕರ್ನಾಟಕದಲ್ಲಿ ಪ್ರಮುಖವಾಗಿ ಬೆಂಗಳೂರು, ಬಳ್ಳಾರಿ, ಬೆಳಗಾವಿ, ಹಾಸನ, ಉತ್ತರ ಕನ್ನಡ, ಚಿತ್ರದುರ್ಗ, ಉಡುಪಿ, ರಾಮನಗರ, ದಕ್ಷಿಣ ಕನ್ನಡ ಜಿಲ್ಲೆಗಳು ಸರಾಸರಿ 150 – 200 ಕಿ.ಮೀ. ಉದ್ದದ ರೈಲು ಮಾರ್ಗಗಳನ್ನು ಹೊಂದಿವೆ. ಅಲ್ಲದೇ
❖ ಕೊಂಕಣ ರೈಲ್ವೆ
❖ ಮೆಟ್ರೋ ರೈಲು ರೈಲುಮಾರ್ಗಗಳಿವೆ

4. ವಾಯು ಸಾರಿಗೆಯ ಅನುಕೂಲಗಳೇನು?



SS STF DIGITAL GROUP

❖ ವಾಯು ಸಾರಿಗೆಯು ಅತಿ ವೇಗ ಚಾಲಿತ ಸಾರಿಗೆ ಮಾಧ್ಯಮ.
❖ ಇದು ಪ್ರಯಾಣಿಕರು, ಅಂಚೆ ಮತ್ತು ಬೆಲೆ ಬಾಳುವ ಹಗುರವಾದ ವಸ್ತುಗಳನ್ನು ದೂರದ ಸ್ಥಳಗಳಿಗೆ ಬೇಗ ಸಾಗಿಸುವದಕ್ಕೆ ಬಹಳ ಉಪಯುಕ್ತವಾದುದು.
❖ ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ ಹಾಗೂ ಯುದ್ಧಗಳಂತಹ ತುರ್ತು ಪರಿಸ್ಥಿತಿಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವುದಕ್ಕೂ ನೆರವಾಗುವುದು.

5. ಕರ್ನಾಟಕದಲ್ಲಿರುವ ಬಂದರುಗಳನ್ನು ಹೆಸರಿಸಿ.

ಕರ್ನಾಟಕದಲ್ಲಿರುವ ಬಂದರುಗಳೆಂದರೆ ನವಮಂಗಳೂರು ಬಂದರು, ಮಲ್ಪೆ, ಹಂಗಾರಕಟ್ಟೆ, ಕುಂದಾಪುರ, ಪಡುಬಿದ್ರಿ, ಭಟ್ಕಳ, ಹೊನ್ನಾವರ, ಬೇಲೆಕೇರಿ, ತದ್ರಿ ಮತ್ತು ಕಾರವಾರಗಳು.

*******************************************

* **ಅಧ್ಯಾಯ:-8**

# ಕರ್ನಾಟಕದಕೈಗಾರಿಕೆಗಳು

## I. ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.

1. ಕರ್ನಾಟಕದ ಮೊಟ್ಟಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪನೆಗೊಂಡ ಸ್ಥಳ **ಭದ್ರಾವತಿ** .
2. ಕರ್ನಾಟಕದ ಮ್ಯಾಂಚೆಸ್ಟರ್ **ದಾವಣಗೆರೆ** .
3. ಕಬ್ಬಿನಿಂದ **ಸಕ್ಕರೆಯನ್ನು** ಉತ್ಪಾದಿಸುತ್ತಾರೆ.
4. ಅಮ್ಮಸಂದ್ರದಲ್ಲಿ **ಸಿಮೆಂಟ್** ಕೈಗಾರಿಕೆಯಿದೆ.
5. `ಸಿಲಿಕಾನ್ ಕಣಿವೆ' ಎಂದು **ಬೆಂಗಳೂರು** ನಗರವನ್ನು ಕರೆಯುತ್ತಾರೆ.

## II. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಯನ್ನು ಕುರಿತು ಬರೆಯಿರಿ

❖ ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಸರ್ ಎಂ. ವಿಶ್ವೇಶ್ವರಯ್ಯನವರ ಕೊಡುಗೆ ಅಪಾರ.
❖ ಸರ್ ಎಂ ವಿಶ್ವೇಶ್ವರಯ್ಯರವರು 'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬ ತತ್ವದಡಿ ರಾಜ್ಯದ ಅನೇಕ ಕೈಗಾರಿಕೆಗಳಿಗೆ ಬುನಾದಿಯನ್ನು ಹಾಕಿದರು.
❖ 1902ರಲ್ಲಿ ಶಿವನಸಮುದ್ರದಲ್ಲಿ ಜಲವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭಗೊಂಡ ಮೇಲೆ ವಿವಿಧ ಮೂಲಸಾಮಗ್ರಿ, ದಿನೋಪಯೋಗಿ ವಸ್ತುಗಳನ್ನು ತಯಾರಿಸುವ ಉದ್ಯಮಗಳು ಅಸ್ತಿತ್ವಕ್ಕೆಬಂದವು.
❖ ಅಕ್ಕಿಗಿರಣಿ, ಹೆಂಚಿನತಯಾರಿಕೆ, ಬೀಡಿ, ಸಿಗರೇಟು, ಕಬ್ಬಿಣ ಮತ್ತು ಹಿತ್ತಾಳೆ ಫೌಂಡ್ರಿಗಳು ಸ್ಥಾಪನೆಯಾದವು.
❖ 1923ರ ನಂತರ ರಾಜ್ಯದಲ್ಲಿ ಕಬ್ಬಿಣ ಮತ್ತು ಉಕ್ಕುಕೈಗಾರಿಕೆ, ಸಾಬೂನು ತಯಾರಿಕೆ, ಹತ್ತಿ ಮತ್ತು ರೇಷ್ಮೆ ಗಿರಣಿ, ಕಾಗದ, ಸಿಮೆಂಟ್, ಬಣ್ಣ, ಸಕ್ಕರೆ, ಶ್ರೀಗಂಧದೆಣ್ಣೆ ಮುಂತಾದ ಆಧುನಿಕ ಕೈಗಾರಿಕೆಗಳು ಸ್ಥಾಪನೆಗೊಂಡವು.

2. ಕರ್ನಾಟಕದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಕುರಿತು ಬರೆಯಿರಿ..

❖ ಕರ್ನಾಟಕವು ದಕ್ಷಿಣ ಭಾರತದಲ್ಲೇ ಮೊಟ್ಟ ಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸಿದ ಕೀರ್ತಿಗೆ ಪಾತ್ರವಾಗಿದೆ.
❖ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ 1923ರಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪಿಸಲಾಯಿತು. ಇದನ್ನು ಮೈಸೂರು ಐರನ್ & ಸ್ಟೀಲ್ ಇಂಡಸ್ಟ್ರೀಸ್ ಲಿಮಿಟೆಡ್ ಎಂದು ಕರೆಯಲಾಯಿತು. ಇಂದು ಇದಕ್ಕೆ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯೆಂದು ಕರೆಯುತ್ತಾರೆ.
❖ ಕರ್ನಾಟಕದಮತ್ತೊಂದುಪ್ರಮುಖಕಬ್ಬಿಣಮತ್ತುಉಕ್ಕಿನಕೈಗಾರಿಕೆಖಾಸಗಿವಲಯದಜಿಂದಾಲ್ವಿಜಯನಗರಉಕ್ಕುಲಿಮಿಟೆಡ್. ಇದು ಬಳ್ಳಾರಿ ಜಿಲ್ಲೆಯ ತೋರಣಗಲ್ಎಂಬಲ್ಲಿ 2001 ರಲ್ಲಿ ಅತ್ಯಾಧುನಿಕ ಕೊರೆಕ್ಸ್ ತಂತ್ರಜ್ಞಾನವನ್ನು ಉಪಯೋಗಿಸಿ ಸ್ಥಾಪಿಸಲಾಯಿತು.

3. ಹತ್ತಿಬಟ್ಟೆ ಕೈಗಾರಿಕೆಗಳ ಹಂಚಿಕೆಯನ್ನು ತಿಳಿಸಿ.

❖ ಕರ್ನಾಟಕದಲ್ಲಿ ಮೊದಲು 1884 ರಲ್ಲಿ ಎಂ.ಎಸ್.ಕೆ. ಗಿರಣಿ ಗುಲ್ಬರ್ಗಾದಲ್ಲಿ ಸ್ಥಾಪನೆಗೊಂಡಿತು.
❖ ಹುಬ್ಬಳ್ಳಿ, ಬೆಂಗಳೂರು, ದಾವಣಗೆರೆಗಳಲ್ಲಿ ಸ್ಥಾಪನೆಯಾದ ಹತ್ತಿಬಟ್ಟೆ ಗಿರಣಿಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ಥಾಪನೆಗೊಂಡವು.
❖ ದಾವಣಗೆರೆಯಲ್ಲಿ ಅತ್ಯಂತ ಹೆಚ್ಚು ಹತ್ತಿಬಟ್ಟೆ ಗಿರಣಿಗಳು ಇರುವುದರಿಂದ ಅದನ್ನು ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಕರೆಯುತ್ತಾರೆ.

ರಾಜ್ಯದ ಇತರ ಹತ್ತಿಬಟ್ಟೆ ಗಿರಣಿಗಳೆಂದರೆ – ಇಲಕಲ್, ಗುಳೇದಗುಡ್ಡ, ರಬಕವಿ, ಬಾಗಲಕೋಟೆ, ಮೊಣಕಾಲ್ಮೂರು, ಗದಗ-ಬೆಟಗೇರಿ, ಬಾದಾಮಿ, ನರಗುಂದ, ಗೋಕಾಕ್,

SS STF DIGITAL GROUP

ಬಳ್ಳಾರಿ, ಹುಣಸೂರು, ನಂಜನಗೂಡು, ಪಿರಿಯಾಪಟ್ಟಣ ಪ್ರಮುಖವಾದವು

4. ಸಕ್ಕರೆ ಕೈಗಾರಿಕೆಗಳ ಸ್ಥಾಪಿಸಲು ಬೇಕಾಗುವ ಅಂಶಗಳನ್ನು ತಿಳಿಸಿ.

- ❖ ಕಬ್ಬುಉತ್ಪಾದನೆ, ಉತ್ತಮಹವಾಮಾನ, ವಿದ್ಯುತ್ಸರಬರಾಜು, ಸ್ಥಳೀಯಮಾರುಕಟ್ಟೆ, ಸಾರಿಗೆವ್ಯವಸ್ಥೆ, ಇತ್ಯಾದಿ ಅಂಶಗಳುಸಕ್ಕರೆ ಕೈಗಾರಿಕೆಗಳು ಸ್ಥಾಪಿಸಲುಬೇಕಾಗುವಅಂಶಗಳು.

**5** .ಬೆಂಗಳೂರಿನಲ್ಲಿ ಮಾಹಿತಿತಂತ್ರಜ್ಞಾನ ಕೈಗಾರಿಕೆಗಳು ಕೇಂದ್ರಿಕೃತವಾಗಲು ಕಾರಣ ತಿಳಿಸಿ.

- ❖ ಬೆಂಗಳೂರು ಉತ್ತಮ ಹವಾಮಾನ, ವಿದ್ಯುತ್ಪೂರೈಕೆ, ತಾಂತ್ರಿಕಪರಿಣಿತರು, ಆರ್ಥಿಕನೆರವು, ವಿಶಾಲವಾದ ಮಾರುಕಟ್ಟೆ ಹಾಗೂ ಮೂಲ ಸೌಕರ್ಯಗಳಿರುವುದರಿಂದ ಭಾರತದ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿ ಹೊರಹೊಮ್ಮಿದೆ.

********************

**ಅಧ್ಯಾಯ:-9**

# ಕರ್ನಾಟಕದ ಪ್ರಮುಖ ಪ್ರವಾಸಿಕೇಂದ್ರಗಳು

**I.ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ.**

1. ನಂದಿ ಗಿರಿಧಾಮ **ಚಿಕ್ಕಬಳ್ಳಾಪುರ** ಜಿಲ್ಲೆ ಯಲ್ಲಿದೆ.

2. ಅಬ್ಬಿ ಜಲಪಾತ **ಮಡಿಕೇರಿ** ನಗರದ ಸಮೀಪ ಇದೆ.

3. ಕರ್ನಾಟಕದ ನಯಾಗರ ಎಂದು **ಗೋಕಾಕ ಜಲಪಾತ** ಜಲಪಾತವನ್ನು ಕರೆಯುತ್ತಾರೆ.

4. ಗೋಕರ್ಣದ ಸಮೀಪ **ಓಂ ಬೀಚ್** ಇದೆ.

5. ಅರಮನೆಗಳ ನಗರ ಎಂದು **ಮೈಸೂರು** ನ್ನು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಪ್ರವಾಸ ಮಾಡುವುದರಿಂದಾಗುವ ಪ್ರಯೋಜನಗಳೇನು

- ❖ ಪ್ರವಾಸ ಮಾಡುವುದರಿಂದಾಗುವ ಪ್ರಯೋಜನಗಳು
- ❖ ವ್ಯಾಪಾರ ವಹಿವಾಟುಗಳು ಸುಗಮವಾಗಿ ನಡೆಯುತ್ತವೆ.
- ❖ ಪುಣ್ಯಕ್ಷೇತ್ರಗಳಿಗೆ ಪ್ರವಾಸ ಕೈಗೋಳ್ಳುವುದರಿಂದ ಧಾರ್ಮಿಕ ಆಚರಣೆಗಳ ಮಹತ್ವ ತಿಳಿಯುತ್ತದೆ.
- ❖ ಪ್ರವಾಸದಿಂದ ಮನಃಶಾಂತಿ ದೊರಕಿ ಆರೋಗ್ಯ ಉತ್ತಮಗೊಳ್ಳುತ್ತದೆ.
- ❖ ಪ್ರಕೃತಿ ಸೌಂದರ್ಯವನ್ನು ನೋಡುವುದರಿಂದ ಮನಸ್ಸು ಉಲ್ಲಾಸಿತವಾಗುತ್ತದೆ.

2. ಪ್ರವಾಸ ಸ್ಥಳಗಳಲ್ಲಿರಬೇಕಾದ ಮೂಲ ಸೌಲಭ್ಯಗಳನ್ನು ತಿಳಿಸಿ.

- ❖ ಪ್ರವಾಸಿಸ್ಥಳಗಳಲ್ಲಿ
- ❖ ತಂಗುವ ಸಲುವಾಗಿ ಪ್ರವಾಸಿಗೃಹ,
- ❖ ಯಾತ್ರಿನಿವಾಸದವ್ಯವಸ್ಥೆ,
- ❖ ಉಪಹಾರವ್ಯವಸ್ಥೆ,
- ❖ ಕುಡಿಯುವ ನೀರಿನ ಸೌಲಭ್ಯ,
- ❖ ಭದ್ರತಾವ್ಯವಸ್ಥೆ ಮುಂತಾದ ಸೌಲಭ್ಯಗಳು ಇರಬೇಕು.

4. ಕುದುರೆಮುಖ ಗಿರಿಧಾಮವನ್ನು ಕುರಿತು ಬರೆಯಿರಿ.

ಕರ್ನಾಟಕದಲ್ಲಿ ಅನೇಕ ಗಿರಿಧಾಮಗಳು ಕಂಡುಬರುತ್ತವೆ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಗಿರಿಧಾಮ ಪ್ರಮುಖವಾಗಿದ್ದು, ಇದರ ಸುತ್ತಲೂ ಹಸಿರಿನಿಂದ ಕೂಡಿದ ದಟ್ಟ ಅರಣ್ಯಗಳು, ಬೆಟ್ಟಗಳು, ಕಾಫಿತೋಟಗಳು, ಜಲಪಾತಗಳು ಇರುವುದರಿಂದ ಆಕರ್ಷಣೀಯ ಸ್ಥಳವಾಗಿದೆ

5. ಕರ್ನಾಟಕದ ವನ್ಯಜೀವಿಧಾಮಗಳನ್ನು ಹೆಸರಿಸಿ.

ಕರ್ನಾಟಕದಲ್ಲಿ ಪ್ರಾಣಿಗಳನ್ನು ಅವುಗಳ ನೆಲೆಯಲ್ಲಿಯೇ ಸಂರಕ್ಷಿಸಲು ರಾಜ್ಯದಲ್ಲಿ 18 ವನ್ಯಜೀವಿಧಾಮಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – ಮುತ್ತೋಡಿ, ಬಂಡಿಪುರ, ನಾಗರಹೊಳೆ, ದಾಂಡೇಲಿ, ಭದ್ರಾವನ್ಯಜೀವಿಧಾಮ, ರಂಗನತಿಟ್ಟು, ಕೊಕ್ಕರೆ, ಮಂದಗದ್ದೆ, ಗುಡವಿಪಕ್ಷಿಧಾಮಇತ್ಯಾದಿ.

6. ಕರ್ನಾಟಕದ ಐತಿಹಾಸಿಕ ಮಹತ್ವದ ಸ್ಥಳ ಗಳನ್ನು ತಿಳಿಸಿ.

ಕರ್ನಾಟಕದ ಐತಿಹಾಸಿಕ ಮಹತ್ವದ ಸ್ಥಳಗಳೆಂದರೆ – ಹಂಪಿ, ಬೇಲೂರು, ಹಳೇಬೀಡು, ಸೋಮನಾಥಪುರ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಬಿಜಾಪುರದಗೋಲಗುಮ್ಮಟ, ಲಕ್ಕುಂಡಿ, ಬನವಾಸಿ, ಬಸರಾಳು, ಬಳ್ಳಿಗಾವೆ, ಮೈಸೂರು, ಶ್ರೀರಂಗಪಟ್ಟಣ,

SS STF DIGITAL GROUP

ಬಿಜಾಪುರ ಮುಂತಾದ ಚಾರಿತ್ರಿಕ ತಾಣಗಳಿವೆ.

********************

ಅಧ್ಯಾಯ:-10

# ಕರ್ನಾಟಕದ ಜನಸಂಖ್ಯೆ

I. ಬಿಟ್ಟಿರುವ ಸ್ಥಾನಗಳನ್ನು ಸೂಕ್ತವಾದ ಪದಗಳಿಂದ ಭರ್ತಿಮಾಡಿರಿ.

1. 2011ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ **5,11,60,704** .
2. ಕರ್ನಾಟಕದ ಬೆಂಗಳೂರುನಗರ ಜಿಲ್ಲೆಯು ಹೆಚ್ಚು ಜನಸಂಖ್ಯೆ ಹೊಂದಿರುವ ಜಿಲ್ಲೆ.
3. ಮಹಿಳೆಯರ ಪ್ರಮಾಣ ಹೆಚ್ಚಾಗಿರುವ ಜಿಲ್ಲೆ **ಉಡುಪಿ ಜಿಲ್ಲೆ** .
4. ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆ **ಕೊಡಗು ಜಿಲ್ಲೆ** .
5. ಕರ್ನಾಟಕದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ **319 ಜನರು**

II. ಗುಂಪಿನಲ್ಲಿ ಚರ್ಚಿಸಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕರ್ನಾಟಕದ ಜನಸಂಖ್ಯೆಯ ಬೆಳವಣಿಗೆಯನ್ನು ಕುರಿತು ಬರೆಯಿರಿ.

2001 ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆಯು 5,28,50,562ಗಳಷ್ಟಿತ್ತು.2011ರ ಜನಗಣತಿಯಲ್ಲಿ ಕರ್ನಾಟಕದ ಒಟ್ಟು ಜನಸಂಖ್ಯೆ 6,11,30,704ರಷ್ಟಾಯಿತು.2001 ರಿಂದ 2011 ರ ದಶಕದಲ್ಲಿ 80,80,142ರಷ್ಟು ಜನಸಂಖ್ಯೆಹೆಚ್ಚಾಯಿತು.2001 ರಿಂದ 2011 ರಅವಧಿಯಲ್ಲಿ ಜನಸಂಖ್ಯೆ ಬೆಳವಣಿಗೆಯ ದರವು ಶೇ. 15.67 ಗಳಾಗಿರುತ್ತದೆ. ಇದು ಭಾರತದ ಜನಸಂಖ್ಯೆಯ ಬೆಳವಣಿಗೆಯ (ಶೇ. 17.64%)ದರಕ್ಕಿಂತ ಕಡಿಮೆ.ಕುಟುಂಬ ಯೋಜನಾ ಕಾರ್ಯಕ್ರಮದ ಜಾಗೃತಿ, ಸಾಕ್ಷರತಾ ಕಾರ್ಯಕ್ರಮ, ಜನನ ನಿಯಂತ್ರಣಗಳು ಇತ್ಯಾದಿಗಳು ಕಾರಣದಿಂದ ಜನನ ಬೆಳವಣಿಗೆ ದರ ಕಡಿಮೆಯಿದೆ

2. ಕಡಿಮೆ ಮತ್ತು ಅಧಿಕ ಜನಸಾಂದ್ರತೆಯುಳ್ಳ ಜಿಲ್ಲೆಗಳನ್ನು ಹೆಸರಿಸಿ.

- ❖ 2011 ರ ಜನಗಣತಿಯ ಪ್ರಕಾರ ಬೆಂಗಳೂರುನಗರ ಜಿಲ್ಲೆಯು ಅಧಿಕ ಜನಸಾಂದ್ರತೆ ಹೊಂದಿದ್ದು ಮೊದಲ ಸ್ಥಾನದಲ್ಲಿದೆ.
- ❖ ದಕ್ಷಿಣಕನ್ನಡ, ಮೈಸೂರು, ಬೆಂಗಳೂರುಗ್ರಾಮಾಂತರ, ಧಾರವಾಡ, ಕೋಲಾರ ಜಿಲ್ಲೆಗಳು ನಂತರದ ಸ್ಥಾನಗಳಲ್ಲಿ ಬರುತ್ತವೆ.
- ❖ ಇದಕ್ಕೆ ಪ್ರತಿಯಾಗಿ ಕೊಡಗುಜಿಲ್ಲೆ (135) ಅತಿಕಡಿಮೆ ಜನಸಾಂದ್ರತೆಯನ್ನು ಹೊಂದಿದ ಜಿಲ್ಲೆಯಾಗಿದೆ.

3. ಕರ್ನಾಟಕದಲ್ಲಿ ನಗರ ಮತ್ತು ಗ್ರಾಮೀಣ ಜನಸಂಖ್ಯೆ ಕುರಿತು ವಿವರಿಸಿ.

- ❖ ಕರ್ನಾಟಕವು ಗ್ರಾಮೀಣ ಪ್ರಧಾನವಾಗಿದ್ದು, 2011ರ ಜನಗಣತಿಯ ಪ್ರಕಾರ 29,406 ಹಳ್ಳಿಗಳನ್ನೊಳಗೊಂಡಿದೆ.
- ❖ 2011ರ ಜನಗಣತಿಯ ಪ್ರಕಾರ ಗ್ರಾಮೀಣ ಪ್ರದೇಶಗಳು 3.75 ಕೋಟಿ ಜನಸಂಖ್ಯೆಯನ್ನು ಹೊಂದಿವೆ.
- ❖ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿಶೇ. 61.4% ಗ್ರಾಮೀಣರು ಹಾಗೂ ಶೇ. 38.6% (2.35 ಕೋಟಿ) ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ.
- ❖ ಭಾರತದ ಸರಾಸರಿಗೆ ಹೋಲಿಸಿದಾಗ ಕರ್ನಾಟಕದ ನಗರ ಜನಸಂಖ್ಯೆ ಹೆಚ್ಚಾಗಿದೆ.
- ❖ ಬೆಂಗಳೂರು ನಗರ ಜಿಲ್ಲೆ ಅಧಿಕ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ್ದರೆ, ಕೊಡಗು ಜಿಲ್ಲೆ ಅತಿ ಕಡಿಮೆ ನಗರ ಜನಸಂಖ್ಯೆಯನ್ನು ಹೊಂದಿದ ಜಿಲ್ಲೆಯಾಗಿದೆ.

4. ಕರ್ನಾಟಕದಲ್ಲಿನ ಸಾಕ್ಷರತೆ ಕುರಿತು ಬರೆಯಿರಿ.

- ❖ 2011 ರ ಜನಗಣತಿಯ ಪ್ರಕಾರ ರಾಜ್ಯದ ಪ್ರಮಾಣಶೇ. 75.6% ರಷ್ಟಿದೆ.
- ❖ ರಾಜ್ಯದ ಸಾಕ್ಷರತೆಯ ಪ್ರಮಾಣವು ಭಾರತದ (ಶೇ. 74%) ಸರಾಸರಿಗಿಂತ ಉತ್ತಮವಾಗಿದೆ.
- ❖ ಜಿಲ್ಲಾವಾರು ಸಾಕ್ಷರತೆಯನ್ನು ಗಮನಿಸಿದಾಗ ದಕ್ಷಿಣಕನ್ನಡ ಜಿಲ್ಲೆಯಲ್ಲಿಶೇ. 88.6 ಭಾಗದಷ್ಟಿದ್ದು, ಅದು ಪ್ರಥಮಸ್ಥಾನದಲ್ಲಿದೆ.

SSTF DIGITAL GROUP

- ❖ ಅನಂತರ ಬೆಂಗಳೂರು ನಗರಜಿಲ್ಲೆಯು (88.5%) ದ್ವಿತೀಯಸ್ಥಾನದಲ್ಲಿದೆ.
- ❖ ಉಡುಪಿ ಜಿಲ್ಲೆಯು ತೃತೀಯಸ್ಥಾನದಲ್ಲಿದೆ.
- ❖ ಯಾದಗಿರಿ ಜಿಲ್ಲೆಯು ಅತಿಕಡಿಮೆ ಸಾಕ್ಷರತೆ (52.4%) ಹೊಂದಿದ ಜಿಲ್ಲೆಯಾಗಿದೆ.
- ❖ ಕರ್ನಾಟಕವು ಪುರುಷರ ಸಾಕ್ಷರತೆಯ ಪ್ರಮಾಣವು ಶೇ. 82.9%, ಮಹಿಳೆಯರ ಸಾಕ್ಷರತೆ ಪ್ರಮಾಣವುಶೇ. 68.2% ರಷ್ಟಿರುತ್ತದೆ.
- ❖ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಾಕ್ಷರತೆಯನ್ನು ಗಮನಿಸಿದಾಗ ಸ್ವಾಭಾವಿಕವಾಗಿ ನಗರ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚು ಸಾಕ್ಷರತೆ ಕಂಡುಬರುತ್ತದೆ.

********************

ಅಧ್ಯಾಯ –1

# ಅರ್ಥಶಾಸ್ತ್ರ

**ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1.ನೈಸರ್ಗಿಕ ಸಂಪನ್ಮೂಲಗಳು ನಿಸರ್ಗದ **ಕೊಡುಗೆ** ಆಗಿವೆ.

2. ನಿರ್ದಿಷ್ಟ ಅವಧಿಯಲ್ಲಿ **ನವೀಕರಣಗೊಳ್ಳುವ** ಸಂಪನ್ಮೂಲಗಳು ಪುನರುತ್ತಪಾದನೆ ಹೊಂದುತ್ತವೆ.

3.ಕಬ್ಬಿಣದ ಅದಿರು**ಮುಗಿದು** ಹೋಗುವ ಸಂಪನ್ಮೂಲವಾಗಿದೆ.

4. ಸಂಪನ್ಮೂಲದ ಅವಶ್ಯಕತೆಯು ಅದರ ಲಭ್ಯತೆಗಿಂತ ಅಧಿಕವಾದಾಗ **ಕೊರತೆ** ಉಂಟಾಗುತ್ತದೆ.

5. ಮುಂದಿನ ಪೀಳಿಗೆಯವರ ಅವಶ್ಯಕತೆಗಳನ್ನೂ ಪೂರೈಸಲು ಸಾಧ್ಯವಾಗುವಂಥ ಅಭಿವೃದ್ಧಿ ತಂತ್ರವನ್ನು **ಸುಸ್ಥಿರ ಅಭಿವೃದ್ಧಿ** ಅಭಿವೃದ್ಧಿ ಎಂದು ಕರೆಯುತ್ತೇವೆ.

6. 2010ರಲ್ಲಿ ಮಾನವರು ತಮ್ಮ ತಮ್ಮ ಇಷ್ಟಗಳನ್ನು ಪೂರೈಸಿಕೊಳ್ಳಲು **ಒಂದೂವರೆ** ಪೃಥ್ವಿಗಳಷ್ಟು ಪ್ರದೇಶದ ಬಳಕೆ ಮಾಡುತ್ತಿದ್ದರು.

**ಈ ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ:**

1.ನೈಸರ್ಗಿಕ ಸಂಪನ್ಮೂಲಗಳೆಂದರೇನು?

ನೈಸರ್ಗಿಕವಾಗಿ ಲಭ್ಯವಿದ್ದು, ತಾವಿದ್ದ ಸ್ವರೂಪದಲ್ಲಿಯೇ ಮೌಲ್ಯಯುತ ಎಂದು ಪರಿಗಣಿತ ವಾಗಿರುವ ವಸ್ತುಗಳನ್ನು ನೈಸರ್ಗಿಕ ಸಂಪನ್ಮೂಲಗಳೆಂದು ಕರೆಯಬಹುದು.

2. ನವೀಕರಣ ಹೊಂದುವ ಎರಡು ಸಂಪನ್ಮೂಲಗಳನ್ನು ಉದಾಹರಿಸಿರಿ.

ಉತ್ತರ :ನೀರು, ಭೂಮಿ, ಅರಣ್ಯ, ಗಾಳಿ, ಸೂರ್ಯನ ಶಾಖಮುಂತಾದುವು ನವೀಕರಣ ಹೊಂದುವ ಸಂಪನ್ಮೂಲಗಳಾಗಿವೆ.

3. ಜೈವಿಕ ಸಂಪನ್ಮೂಲಗಳಿಗೆ ಎರಡು ಉದಾಹರಣೆಗಳನ್ನು ನೀಡಿರಿ.

ಉತ್ತರ :ಸಸ್ಯ ಮತ್ತು ಪ್ರಾಣಿಗಳು, ಜೈವಿಕ ಸಂಪನ್ಮೂಲಗಳು.

4. ಸಂರಕ್ಷಣೆ ಎಂದರೇನು?

ಉತ್ತರ :ನೈಸರ್ಗಿಕಸಂಪನ್ಮೂಲಗಳನ್ನುಸರಿಯಾಗಿ ನಿರ್ವಹಿಸಿ ಅವುಗಳ ಅತಿಯಾದ ಬಳಕೆ, ಅಪವ್ಯಯ ಮತ್ತು ಅವನತಿಗಳನ್ನು ನಿಯಂತ್ರಿಸುವುದು ಎಂದರ್ಥ.

5. ಜೀವ ಪರಿಸರದ ಹೆಜ್ಜೆ ಗುರುತನ್ನು ವ್ಯಾಖ್ಯಾನಿಸಿ.

ಸದ್ಯದ ತಾಂತ್ರಿಕತೆಯನ್ನು ಬಳಸುತ್ತಾ ಒಬ್ಬ ವ್ಯಕ್ತಿಪೃಥ್ವಿಯ ಎಷ್ಟು ಭೌತಿಕ ಪ್ರದೇಶವನ್ನು ಬಳಸಿ ಜೀವಿಸುತ್ತಿದ್ದಾನೆ ಎಂಬುದನ್ನು ಸೂಚಿಸುವ ಸಾಧನವೇ ಪರಿಸರದ ಹೆಜ್ಜೆಗುರುತು.

6. ಪುನರ್ಬಳಕೆ ಎಂದರೇನು?

ಸಂಪನ್ಮೂಲವು ಬೇರೆ ಬೇರೆ ಕೆಲಸಗಳಿಗಲ್ಲದೇ ಹಲವು ಬಾರಿ ಉಪಯೋಗಿಸಲು ಲಭ್ಯವಿರುವದನ್ನು ಪುನರ್ಬಳಕೆ ಎನ್ನುವರು.

7.ಜೀವಪರಿಸರದ ಹೆಜ್ಜೆಗುರುತು ಎಂಬ ಸಾಧನ ಸಿದ್ದಪಡಿಸಿದ ಸಂಸ್ಥೆ ಯಾವುದು?

ಉತ್ತರ : ವರ್ಲ್ಡ್ ವೈಲ್ಡಲೈಫ್ ಫಂಡ್ ಸಂಸ್ಥೆಯು ಜೀವಪರಿಸರದ ಹೆಜ್ಜೆಗುರುತು ಎಂಬ ಸಾಧನ ಸಿದ್ದಪಡಿಸಿದೆ.



SS STF DIGITAL GROUP

೮. ಜೀವಪರಿಸರದ ಹೆಜ್ಜೆಗುರುತು ಎಂದರೇನು?

ಸದ್ಯದ ತಾಂತ್ರಿಕತೆಯನ್ನು ಬಳಸುತ್ತಾ ಒಬ್ಬ ವ್ಯಕ್ತಿ ಪೃಥ್ವಿಯ ಎಷ್ಟು ಭೌತಿಕ ಪ್ರದೇಶವನ್ನು ಬಳಸಿ ಜೀವಿಸುತ್ತಿದ್ದಾನೆ ಎಂಬು ದನ್ನು ಸೂಚಿಸುವ ಸಾಧನವೇ ಪರಿಸರದ ಹೆಜ್ಜೆಗುರುತು.

೯. ಜೈವಿಕ ಸಂಪನ್ಮೂಲಗಳೆಂದರೇನು?

ಉತ್ತರ : ಜೀವಿಗಳಿಂದ ಪಡೆಯಲಾದ ಸಂಪನ್ಮೂಲಗಳನ್ನು ಜೈವಿಕ ಸಂಪನ್ಮೂಲಗಳೆಂದು ಕರೆಯುತ್ತಾರೆ.

10. "ಎಲ್ಲರ ಆಸೆಗಳನ್ನು ಈಡೇರಿಸಲು ಈ ಪೃಥ್ವಿಯಲ್ಲಿ ಎಲ್ಲ ಇದೆ, ಆದರೆ ದುರಾಸೆಗಳನ್ನಲ್ಲ." ಎಂದು ವ್ಯಾಖ್ಯಾನಿಸಿದವರು ಯಾರು?

ಉತ್ತರ : ಮಹಾತ್ಮಾ ಗಾಂಧೀಜಿ

**ಈ ಕೆಳಗಿನ ಪ್ರಶ್ನೆಗಳನ್ನು ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ನವೀಕರಣ ಹೊಂದುವ ಮತ್ತು ಬರಿದಾಗುವ ಸಂಪನ್ಮೂಲಗಳ ನಡುವಿನ ವ್ಯತ್ಯಾಸ ತಿಳಿಸಿ.

ಉತ್ತರ **:ನವೀಕರಣ ಹೊಂದುವ ಸಂಪನ್ಮೂಲಗಳು :**ಬಳಸಿದಂತೆ ಪುನಃ ತಮ್ಮ ಮೂಲ ಸ್ವರೂಪ ಪಡೆದು ನಿರಂತರವಾಗಿ ನಮ್ಮ ಬಳಕೆಗೆ ದೊರಕುವ ಸಂಪನ್ಮೂಲವಾಗಿದೆ. ಉದಾ : ನೀರು, ಭೂಮಿ, ಅರಣ್ಯ, ಗಾಳಿ, ಸೂರ್ಯನ ಶಾಖ. ಇವುಗಳನ್ನು ನವೀಕರಿಸಬಲ್ಲ ಸಂಪನ್ಮೂಲಗಳು' ಎಂತಲೂ ಕರೆಯುತ್ತಾರೆ.

**ಬರಿದಾಗುವ ಸಂಪನ್ಮೂಲಗಳ ಸಂಪನ್ಮೂಲಗಳು :**ಕೆಲವು ನೈಸರ್ಗಿಕ ಸಂಪನ್ಮೂಲಗಳು ನಾವು ಬಳಸಿದಂತೆ ಕ್ರಮೇಣ ಕಡಿಮೆಯಾಗಿ ಅಂತಿಮವಾಗಿ ಖಾಲಿಯಾಗುತ್ತವೆ. ಅವುಗಳ ಸೃಷ್ಟಿಮತ್ತೆ ಸಾಧ್ಯವಿಲ್ಲ. ಇಂತಹ ಸಂಪನ್ಮೂಲಗಳನ್ನು ಮುಗಿದು ಹೋಗುವ ಸಂಪನ್ಮೂಲಗಳು ಎನ್ನುತ್ತೇವೆ. ಕಬ್ಬಿಣದ ಅದಿರು, ತಾಮ್ರ, ಚಿನ್ನ, ಮ್ಯಾಂಗನೀಸ್, ಪೆಟ್ರೋಲಿಯಮ್, ಇವುಗಳನ್ನು ನವೀಕರಿಸಲಾಗದ ಸಂಪನ್ಮೂಲಗಳು' ಎಂತಲೂ ಕರೆಯುತ್ತಾರೆ.

2. ಸಂಪನ್ಮೂಲಗಳ ಕೊರತೆಯು ಅಧಿಕವಾಗುತ್ತಿರುವುದಕ್ಕೆ ಕಾರಣಗಳನ್ನು ನೀಡಿ.

ಉತ್ತರ :. ಕೊರತೆಯನ್ನು ಅಧಿಕಗೊಳಿಸುತ್ತಿರುವ ಪ್ರಮುಖ ಅಂಶಗಳೆಂದರೆ

1.ಮಿತಿಮೀರಿದ ಜನಸಂಖ್ಯೆ : ಅಗಾಧ ಪ್ರಮಾಣದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಮತ್ತುವಸತಿ ಸೌಕರ್ಯ ಒದಗಿಸಲು ಹೆಚ್ಚುವರಿ ಜಮೀನು ಬೇಕಾಗುತ್ತದೆ.

2.ಹೆಚ್ಚುತ್ತಿರುವ ಔದ್ಯೋಗೀಕರಣ : ಆಹಾರ ಹಾಗೂ ಕೃಷಿ ಸಂಘಟನೆಯ ವರದಿಯ ಪ್ರಕಾರ, ಉದ್ಯಮಗಳ ಸಂಖ್ಯೆ ಹೆಚ್ಚಿದಂತೆ ಅದಿರು, ಕಚ್ಚಾ ತೈಲ ಮತ್ತು ನೀರಿನ ಹೊರತೆಗೆಯುವಿಕೆ ಅಧಿಕವಾಗಿದ್ದುಹಲವಾರುಗಣಿಗಳು, ತೈಲಬಾವಿಗಳು ಮತ್ತು ಜಲಮೂಲಗಳುಬರಿದಾಗಿವೆ.

3.ವಿಸ್ತರಣೆಯಾಗುತ್ತಿರುವ ನಗರ ಪ್ರದೇಶಗಳು : ಅಂಥ ಪ್ರದೇಶಗಳಲ್ಲಿಸಹಜವಾಗಿ ಸಂಪನ್ಮೂಲಗಳ ಬಳಕೆ ಮತ್ತು ತ್ಯಾಜ್ಯ ಉತ್ಪಾದನಾ ಪ್ರಮಾಣವು ಅತ್ಯಧಿಕವಾಗಿರುತ್ತದೆ.

4.ವಾಯು ಮಾಲಿನ್ಯ: ಕಲ್ಲಿದ್ದಲು, ಡೀಸೆಲ್ ಮತ್ತು ಪೆಟ್ರೋಲ್ ಇವುಗಳದಹಿಸುವಿಕೆಯಿಂದಾಗಿ, ಹಾನಿಕಾರಕ ಅಂಶಗಳಾದಇಂಗಾಲದ ಡೈಆಕ್ಸೈಡ್, ಹೈಡ್ರೋಜನ್ಸಲ್ಫೈಡ್, ಮಸಿ, ಧೂಳು ಮುಂತಾದವುಗಳು ವಾಯು ಮಂಡಲವನ್ನು ಪ್ರವೇಶಿಸಿ ಅದನ್ನು
ಮಲಿನಗೊಳಿಸುತ್ತವೆ. ಇದರಿಂದಾಗಿ ಶುದ್ಧ ವಾಯುವಿನ ಲಭ್ಯತೆ ಕಡಿಮೆಯಾಗುತ್ತದೆ.

5.ಜಲಮಾಲಿನ್ಯ ಮತ್ತು ಭೂ ಸವಕಳಿ : ಮಾನವರ, ಆಸ್ಪತ್ರೆಗಳ, ಉದ್ಯಮಗಳ ಹಾಗೂ ಇತರ ತ್ಯಾಜ್ಯಗಳನ್ನು ಬಯಲಿನಲ್ಲಿ ಸುರಿಯುವುದರಿಂದ ಅಲ್ಲಿನ ಭೂಮಿ ಮತ್ತು ನೀರಿನ ಉಪಯುಕ್ತತೆ ಕಡಿಮೆಯಾಗುತ್ತದೆ. ಕೃಷಿ ಹಾಗೂ

ಕುಟುಂಬಗಳಚಟುವಟಿಕೆ ದೆಸೆಯಿಂದಾಗಿ ಸಹ ಜಲ ಮಾಲಿನ್ಯ ಉಂಟಾಗುತ್ತದೆ.

3. 4R ಗಳೆಂದರೇನು? ಸಂಕ್ಷಿಪ್ತವಾಗಿ ಬರೆಯಿರಿ.

ಉತ್ತರ :1.ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವುದು (Reduce) : ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವ ಪ್ರಯತ್ನಮಾಡಿದರೆ ಒಟ್ಟಾರೆ ಮಾಲಿನ್ಯವೂ ಕಡಿಮೆಯಾಗುತ್ತದೆ. ಉದಾ: ಮೋಟರ್ ಬೈಕ್ಬದಲಾಗಿ ಸೈಕಲ್ ಬಳಸುವುದು.

2.ಸಂಪನ್ಮೂಲಗಳ ಮರು ಬಳಕೆ ಮಾಡುವುದು (Reuse) : ಪ್ರತಿಯೊಂದು ಸಂಪನ್ಮೂಲಗಳನ್ನು ಬೇರೆಬೇರೆ ಕೆಲಸಗಳಿಗಲ್ಲದೇ ಹಲವು ಬಾರಿ ಉಪಯೋಗಿಸಬಹುದಾಗಿದೆ. ಉದಾಹರಣೆಗೆ ಸ್ನಾನಕ್ಕೆಬಳಸಿದ ನೀರನ್ನು ತೋಟಕ್ಕೆ ಬಳಸಬಹುದು.

3.ಸಂಪನ್ಮೂಲಗಳ ಪುನಃರ್ಭರ್ತಿ ಮಾಡುವುದು (Recharge) ಮತ್ತು ಪುನರುಜ್ಜೀವನಗೊಳಿಸುವುದು (Regenerate) : ನಮ್ಮ ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಸಂಪನ್ಮೂಲಗಳನ್ನು ವೃಧ್ಧಿಸುವ ಕಾರ್ಯವಾಗಿದೆ. ಉದಾ : ಅಂತರ್ಜಲ ಮರುಪೂರಣಗೊಳಿಸವದು.

4.ಸಂಶೋಧನೆ (Research) : ಬರಿದಾಗುವ ಸಂಪನ್ಮೂಲಗಳಿಗೆ ಬದಲಾಗಿ ನವೀಕರಣಗೊಳಿಸಬಹುದಾದ ವಸ್ತುಗಳ ಸಂಶೋಧನೆನಿರಂತರವಾಗಿಆಗಬೇಕು. ಉದಾ: ಇಂಧನಕ್ಕೆ ಬದಲಾಗಿಸೌರಶಕ್ತಿ.

4. ನಿಮ್ಮ ಮನೆ ಮತ್ತು ಶಾಲೆಗಳಲ್ಲಿ ಇಂಧನ ಉಳಿತಾಯಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳುವಿರಿ?

- ಉತ್ತರ : ಶಾಲೆಗೆ ನಡೆದುಕೊಂಡು ಹೋಗುವದು.
- ಸೌರ ವಿದ್ಯುತ್ ಬಳಕೆ ಮಾಡುವುದು.
- ಸಾರ್ವಜನಿಕ ಸಾರಿಗೆ ಬಳಸುವುದು.
- ಸಂಪನ್ಮೂಲಗಳನ್ನು ಮಿತವಾಗಿ ಬಳಕೆ ಮಾಡುವುದು.

5. ಜೀವಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ?

ಉತ್ತರ :**ಆಹಾರ**

- ಸಾವಯವ ಅಥವಾ ಸ್ಥಳೀಯವಾಗಿ ಬೆಳೆದ ಆಹಾರವನ್ನು ಖರೀದಿಸಿರಿ.
- ಕೈತೋಟವನ್ನು ಬೆಳೆಸಿರಿ (ತನ್ಮೂಲಕ ನೀವು ಆಹಾರ ಸಾಗಾಟದಿಂದಾಗುವ ಮಾಲಿನ್ಯ,ರಸಗೊಬ್ಬರ ಬಳಕೆ, ಪೊಟ್ಟಣಗಳ ಅವಶ್ಯಕತೆಯನ್ನು ಕಡಿಮೆ ಮಾಡಬಹುದಲ್ಲದೇ, ನಿಮಗೆ ತಾಜಾತರಕಾರಿ ಲಭ್ಯವಾಗುತ್ತದೆ).
- ಅಂಗಡಿಗಳಿಗೆ ನಿಮ್ಮದೇ ಕೈಚೀಲಗಳನ್ನು ತೆಗೆದುಕೊಂಡು ಹೋಗಿರಿ.
- ಹಣ್ಣಿನ ರಸದ ಪೊಟ್ಟಣ ಕೊಳ್ಳುವದರ ಬದಲಾಗಿ ಹಣ್ಣನ್ನೇ ಖರೀದಿಸಿರಿ.

**ಇಂಧನ/ವಿದ್ಯುಚ್ಛಕ್ತಿ**

- ಬಳಕೆ ಮುಗಿದ ಮೇಲೆ ಎಲ್ಲ ವಿದ್ಯುದ್ದೀಪಗಳನ್ನು ಆರಿಸಿರಿ.
- ರಾತ್ರಿ ಹೊತ್ತಿನಲ್ಲಿ ಏರ್ ಕಂಡೀಷನರ್ ಮತ್ತು ಹೀಟರ್ಗಳನ್ನು ಆರಿಸಿರಿ.
- ಮನೆಯಿಂದಾಚೆಗೆ ಬನ್ನಿ, ನೀವು ಉಲ್ಲಾಸಭರಿತರಾಗಿರುತ್ತೀರಲ್ಲದೇ, ಕಡಿಮೆ ಇಂಧನ ಬಳಸುತ್ತೀರಿ.

**ಸಾರಿಗೆ**

- ಶಾಲೆಗೆ ನಡೆದು ಬನ್ನಿ ಅಥವಾ ಸೈಕಲ್ ತನ್ನಿ.
- ಸಾರ್ವಜನಿಕ ಸಾರಿಗೆಯನ್ನು ಬಳಸಿರಿ.
- ಹೊರಗೆ ಹೋಗುವಾಗ ಅಥವಾ ನಡೆಯುವ ದಾರಿ ದೂರ ಇದ್ದಾಗ ಕಾರ್ ಪೂಲ್ ಬಳಸಿರಿ.

**ಕಡಿಮೆ ಪ್ರಮಾಣದ ತ್ಯಾಜ್ಯ ಸೃಷ್ಟಿಸುವುದು**

- ಆದಷ್ಟು ಕಡಿಮೆ ಪ್ಯಾಕೇಜ್ ಇರುವ ವಸ್ತುಗಳನ್ನು ಖರೀದಿಸುವುದು.
- ಅವಶ್ಯಕತೆಯಿಲ್ಲದಿದ್ದಾಗ ಚೀಲವನ್ನು ಕೇಳದಿರುವುದು.
- ಮುರಿದ ಸಾಮಾನುಗಳನ್ನು ಜೋಡಿಸಿ ರಿಪೇರಿ ಮಾಡುವುದು.
- ಪುನಃ ಪುನಃ ಬಳಸಬಹುದಾದಂಥ ವಸ್ತುಗಳನ್ನು ಖರೀದಿಸುವುದು.

**ನೀರು**

- ಹಲ್ಲುಜ್ಜುವಾಗ ನಲ್ಲಿ ಬಂದ್ ಮಾಡುವುದು.
- ಚರಂಡಿಗಳಲ್ಲಿ ವಿಷಕಾರಕ ವಸ್ತುಗಳನ್ನು ಸುರಿಯದಿರುವುದು.
- ಭಾರತೀಯ ವಿಧದ ಶೌಚಾಲಯವನ್ನು ಹೆಚ್ಚು ಬಳಸಿರಿ

**ಸಮುದಾಯ**

- ಸಮುದಾಯದ ಜನರಿಗೆ ಪರಿಸರದ ಹೆಜ್ಜೆಗುರುತಿನ ಕುರಿತು ಮಾಹಿತಿ ನೀಡಿ, ಅದನ್ನು ಕಡಿಮೆಮಾಡಲು ಏನು ಮಾಡಬಹುದೆಂಬುದನ್ನೂ ತಿಳಿಸಿ.
- ಸ್ಥಳೀಯ ಜಲಮೂಲಗಳನ್ನು ರಕ್ಷಿಸುವ/ಶುದ್ಧೀಕರಿಸುವ ಯಾವುದಾದರೂ ಸಂಘ ಸಂಸ್ಥೆಯಿದ್ದರೆ ಅದರ ಸದಸ್ಯರಾಗಿರಿ.
- ಪುನರ್ಬಳಕೆ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಿರಿ.
- ಶಾಲೆಯ ಇಂಧನದ ಆಡಿಟ್ ಮಾಡಿ, ಯಾವ ಕ್ರಮಗಳ ಮೂಲಕ ವಿದ್ಯುತ್ ಹಾಗೂ ಹಣಉಳಿಸಬಹುದೆಂಬುದನ್ನು ಗಮನಿಸಿರಿ.

************************************

**ಅಧ್ಯಾಯ 2**

# ಮಾನವ ಸಂಪನ್ಮೂಲ

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ದುಡಿಯುವ ಜನರು ಎಂದು ಯಾರನ್ನು ಗುರುತಿಸಲಾಗುತ್ತಿದೆ?

ಉತ್ತರ : 15 ವರ್ಷದ ಮೇಲ್ಪಟ್ಟು 60 ವರ್ಷದ ಒಳಗಿನ ವಯಸ್ಕರು ದುಡಿಯಲು ಸಮರ್ಥರಿದ್ದು, ಇವರನ್ನು ದುಡಿಯುವ ಜನರು ಎನ್ನುತ್ತೇವೆ.

2. ಮಾನವ ಸಂಪನ್ಮೂಲ ಎಂದರೇನು?

ಉತ್ತರ :ಪ್ರಸ್ತುತ ದೇಶದಲ್ಲಿರುವ ಉತ್ಪಾದನಾ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ ಹೊಂದಿರುವ ದುಡಿಯುವ ಜನರನ್ನು
ಮಾನವ ಸಂಪನ್ಮೂಲ ಎಂದು ಕರೆಯಲಾಗುತ್ತಿದೆ.

3. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ ಎಷ್ಟು?

ಉತ್ತರ :2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ 121.1 ಕೋಟಿ ತಲುಪಿದೆ

4. ಜನನ ದರ ಎಂದರೇನು?

ಉತ್ತರ :ಪ್ರತಿ ಸಾವಿರ ಜನಸಂಖ್ಯೆಗೆ ಜನಿಸುವ ಮಕ್ಕಳ ಪ್ರಮಾಣವನ್ನು ಜನನ ದರ ಎನ್ನುವರು.

5. 2011ರಲ್ಲಿ ಭಾರತದ ಜನನ ದರ 22 ಮತ್ತು ಮರಣ ದರ 6 ಇದೆ. ಹಾಗಾದರೆ ಜನಸಂಖ್ಯೆ
ಬೆಳವಣಿಗೆ ದರ ಕಂಡು ಹಿಡಿಯಿರಿ?

ಉತ್ತರ :16

7. 2011ಜನಗಣತಿ ಪ್ರಕಾರ ಭಾರತದ ಜನಸಾಂದ್ರತೆ ಎಷ್ಟು?

2011ರ ಜನಗಣತಿ ಪ್ರಕಾರ ಭಾರತದ ಜನಸಾಂದ್ರತೆ 382.

7. ಮುಂದುವರೆದ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆ ದರ ಕಡಿಮೆಯಿದೆ. ಏಕೆ?

ಉತ್ತರ :ಮುಂದುವರೆದ ರಾಷ್ಟ್ರಗಳಲ್ಲಿ ಜನನ ದರ ಮತ್ತು ಮರಣ ದರಗಳೆರಡೂ ಅತ್ಯಂತ ಕಡಿಮೆಯಿದ್ದು, ಜನಸಂಖ್ಯಾ ಬೆಳವಣಿಗೆ ದರವು ಅತ್ಯಂತ ಕಡಿಮೆಯಾಗುತ್ತದೆ.

**ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಜನ ಸಾಂದ್ರತೆಎಂದರೇನು? ಒಂದು ದೇಶದ ಜನಸಾಂದ್ರತೆಯನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ?

ಉತ್ತರ: ಒಂದು ಚದರ ಕಿಲೋ ಮೀಟರ್ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಸರಾಸರಿ ಸಂಖ್ಯೆಗೆ ಜನಸಾಂದ್ರತೆ ಎನ್ನುತ್ತೇವೆ. ಒಂದು ದೇಶದಲ್ಲಿರುವ ಒಟ್ಟು ಜನಸಂಖ್ಯೆಯನ್ನು ಅಲ್ಲಿನ ಒಟ್ಟು ಭೂವಿಸ್ತೀರ್ಣದಿಂದ ಭಾಗಿಸುವ ಮೂಲಕಜನಸಾಂದ್ರತೆಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

2. ಉತ್ಪಾದನಾಂಗಗಳಲ್ಲಿ ಮಾನವ ಬಂಡವಾಳ ಅತ್ಯುತ್ತಮವಾದುದು ಎಂದು ಏಕೆ ಪರಿಗಣಿಸಲಾಗುತ್ತದೆ?

ಉತ್ತರ: ಸರಕು–ಸೇವೆಗಳ ಉತ್ಪಾದನೆಯಲ್ಲಿನಿಸರ್ಗ ಸಂಪತ್ತು ಮತ್ತು ಭೌತಿಕ ಬಂಡವಾಳಕ್ಕಿಂತ ಮಾನವ ಸಂಪತ್ತು ಹೆಚ್ಚಿನ ಮಹತ್ವವನ್ನು ಪಡೆದಿದೆ.ಮಾನವ ಸಂಪತ್ತು ಉತ್ಪಾದನೆಗೆ ಬೇಕಾದ ಜ್ಞಾನ ಮತ್ತು ಶ್ರಮಶಕ್ತಿಯನ್ನು ಒದಗಿಸುತ್ತದೆ. ಕೃಷಿ, ಕೈಗಾರಿಕೆಮತ್ತು ಸೇವಾ ವಲಯದ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿರುವ ಜನರನ್ನು ಶ್ರಮ ಶಕ್ತಿ ಎನ್ನುತ್ತೇವೆ.ಮಾನವ ಸಂಪತ್ತು ದುಡಿಮೆಗೆಅಗತ್ಯವಾದ ಶ್ರಮಶಕ್ತಿಯನ್ನು ಪೂರೈಸುತ್ತದೆ. ಮಾನವ ಬಂಡವಾಳವು ಹೆಚ್ಚಿನ ಸಂಶೋಧನೆಗಳನ್ನು ಕೈಗೊಂಡು, ಜನಸಮುದಾಯಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ. ನಾವುಪಡೆಯುವ ವಿದ್ಯುತ್, ಟಿ.ವಿ., ಕಂಪ್ಯೂಟರ್, ಮೊಬೈಲ್, ವಾಹನಗಳು ಮುಂತಾದುವು ಮಾನವ ಬಂಡವಾಳದ ಕೊಡುಗೆಯಾಗಿವೆ.

3. ಮಾನವ ಬಂಡವಾಳವನ್ನು ರೂಪಿಸುವಲ್ಲಿ ಆರೋಗ್ಯ ಮತ್ತು ಶಿಕ್ಷಣಗಳ ಪಾತ್ರವೇನು?

ಉತ್ತರ: ಭಾರತದ ರಾಷ್ಟ್ರೀಯ ಆರೋಗ್ಯ ನೀತಿಯು ಜನರ ಆರೋಗ್ಯ ಸುರಕ್ಷತೆ, ಕುಟುಂಬ ಕಲ್ಯಾಣ ಮತ್ತುಪೌಷ್ಠಿಕತೆ ಒದಗಿಸುವ ಸೇವೆಗಳನ್ನು ಉತ್ತಮಪಡಿಸುವ ಗುರಿ ಹೊಂದಿದೆ. ವ್ಯಾಪಕವಾದ ಆರೋಗ್ಯ ಮೂಲಸೌಲಭ್ಯಗಳನ್ನು ಸೃಷ್ಟಿಸುವ ಮೂಲಕ ಜನರ ಗುಣಮಟ್ಟದ ಅಭಿವೃದ್ಧಿ ಸಾಧಿಸಿದೆ.ಇದರಿಂದ ದುಡಿಯುವ ಆರೋಗ್ಯವಂತರ ಸಂಖ್ಯೆ ಹೆಚ್ಚಾಗಲಿದೆ. ಮಾನವ ಸಂಪನ್ಮೂಲಕ್ಕೆ ಉತ್ತಮ ಶಿಕ್ಷಣ, ತರಬೇತಿ ಮತ್ತು ಆರೋಗ್ಯ ಸುರಕ್ಷತೆಗಳನ್ನು ಒದಗಿಸಿದರೆ, ಅವರು ಮಾನವ ಬಂಡವಾಳವಾಗಿ ಮಾರ್ಪಡುತ್ತಾರೆ.

4. ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಮಾತ್ರ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿರುತ್ತದೆಕಾರಣವೇನು?

ಉತ್ತರ:

- ಹಿಂದುಳಿದ ದೇಶವು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ತೀವ್ರ ಪ್ರಯತ್ನಗಳನ್ನು ಕೈಗೊಳ್ಳುತ್ತದೆ.
- ಸರ್ಕಾರ ಜನರಿಗೆ ಶಿಕ್ಷಣ & ಆರೋಗ್ಯ ಸೌಲಭ್ಯಗಳನ್ನು ಒದಗಿಸಿಕೊಡಲು ಮುಂದಾಗುತ್ತದೆ. ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲಾಗುತ್ತದೆ.
- ಮರಣದರ ಶೀಘ್ರವಾಗಿ ಕಡಿಮೆಯಾಗುತ್ತದೆ. ಆದರೆ ಜನನ ದರವು ಹೆಚ್ಚಾಗಿಯೇ ಇದ್ದು, ಅದು ನಿಧಾನವಾಗಿ ಕಡಿಮೆಯಾಗುತ್ತಿರುತ್ತದೆ.

- ಈ ಹಂತದಲ್ಲಿ ಜನನ ದರ ಹೆಚ್ಚಿದ್ದು, ಮರಣ ದರ ಕಡಿಮೆಯಾಗುವುದರಿಂದ ಜನಸಂಖ್ಯಾ ಬೆಳವಣಿಗೆ ದರ ಹೆಚ್ಚಾಗಿರುತ್ತದೆ.

5. ಜನಸಂಖ್ಯೆಯ ಗುಣಮಟ್ಟವನ್ನು ಹೆಚ್ಚಿಸಲು ಯಾವ ಕ್ರಮಗಳನ್ನು ಸೂಚಿಸುವಿರಿ?

- ಉತ್ತಮ ಆರೋಗ್ಯ ಸೌಲಭ್ಯಗಳನ್ನು ನೀಡುವುದು.
- ಜನರ ಸಾಕ್ಷರ ಮಟ್ಟವನ್ನು ಹೆಚ್ಚಿಸುವುದು.
- ಕೌಶಲ್ಯ ಮತ್ತು ತರಬೇತಿ ನೀಡುವುದು.
- ತಾಂತ್ರಿಕತೆಯ ಜ್ಞಾನ ನೀಡುವುದು.
- ಪೌಷ್ಠಿಕಾಂಶವುಳ್ಳ ಆಹಾರ ಒದಗಿಸುವುದು.
- ಮೂಲಭೂತ ಸೌಲಭ್ಯಗಳನ್ನು ನೀಡುವುದು.

**ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಪ್ರಸ್ತುತ ದೇಶದಲ್ಲಿರುವ ಉತ್ಪಾದನಾ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ ಹೊಂದಿರುವ ದುಡಿಯುವ ಜನರನ್ನು **ಮಾನವ ಸಂಪನ್ಮೂಲ**ಎಂದು ಕರೆಯಲಾಗುತ್ತಿದೆ.

2. 2011 ರಲ್ಲಿ ಭಾರತದ ಲಿಂಗ ಅನುಪಾತವು**1000/943**.

3. ಭಾರತದಲ್ಲಿ ಜನಗಣತಿಯು ಪ್ರತಿ **ಹತ್ತು** ವರ್ಷಗಳಿಗೊಮ್ಮೆ ನಡೆಯುತ್ತದೆ.

4.ಒಂದು ದೇಶದ ಸಂಖ್ಯೆಯ ಗುಣಮಟ್ಟವು **ಆರೋಗ್ಯ** ಮತ್ತು **ಶಿಕ್ಷಣವ**ನ್ನು ಅವಲಂಬಿಸಿದೆ

5. ಒಂದು ವರ್ಷದಲ್ಲಿ ಜನಿಸಿದಪ್ರತಿ ಸಾವಿರ ಮಕ್ಕಳಲ್ಲಿ ಮರಣ ಹೊಂದುವ ಶಿಶುಗಳ ಸರಾಸರಿ ಸಂಖ್ಯೆಗೆ ಶಿಶು **ಮರಣದರ** ಎನ್ನುವರು.

6. ಭಾರತದಲ್ಲಿ ಜನನ ದರ ಹೆಚ್ಚಾಗಿದ್ದು, ಮರಣ ದರ**ಕಡಿಮೆ**ಆಗುತ್ತಿರುವುದರಿಂದಜನಸಂಖ್ಯಾ ಬೆಳವಣಿಗೆ ದರ ಹೆಚ್ಚಾಗಿದೆ.

*****************************************

ಅಧ್ಯಾಯ ೩

## ಹಸಿವು ಮತ್ತು ಬಡತನ

**ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆಯ ಪ್ರಕಾರ 2004-05 ರಲ್ಲಿ ಭಾರತದಲ್ಲಿ ಶೇ. **27.7** ಭಾಗದಷ್ಟು ಬಡಜನರಿದ್ದರು.

2. ಭಾರತದಲ್ಲಿ ಬಡಜನರನ್ನು ಗುರುತಿಸುವುದಕ್ಕಾಗಿ ಮೊಟ್ಟಮೊದಲ ಬಾರಿಗೆ ಬಡತನ ರೇಖೆಯನ್ನುಬಳಕೆಗೆ ತಂದವರು **ದಾದಾಬಾಯಿ ನವರೋಜಿಯವರು.**

3. ಭಾರತ ಸರ್ಕಾರವು ಆಹಾರ ಧಾನ್ಯಗಳನ್ನು ಕೊಂಡು ಸಂಗ್ರಹಿಸಲು **ಭಾರತ ಆಹಾರ ನಿಗಮ** ಸಂಸ್ಥೆಯನ್ನು ಸ್ಥಾಪಿಸಿದೆ.

4. ಬಡಜನರಿಗೆ ಒದಗಿಸಲಾಗಿರುವ ಆರೋಗ್ಯ ವಿಮೆಗೆ **ಯಶಸ್ವಿನಿ** ಎಂದು ಹೆಸರಿಸಲಾಗಿದೆ.

5. ವೃದ್ಧಾಪ್ಯ ವೇತನಕ್ಕಾಗಿ ಜಾರಿಗೊಂಡಿರುವ ಯೋಜನೆಯ ಹೆಸರು **ಸಂಧ್ಯಾ ಸುರಕ್ಷಾ ಯೋಜನೆ.**

6. ಸರ್ಕಾರವು ಆಹಾರ ಧಾನ್ಯಗಳನ್ನು ಖರೀದಿಸುವ ಬೆಲೆಗೆ**ಕನಿಷ್ಟ ಬೆಂಬಲ**ಬೆಲೆ ಎಂದು ಕರೆಯಲಾಗುತ್ತದೆ.

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1. ಬಡತನದ ಅರ್ಥ ತಿಳಿಸಿ.

ಕನಿಷ್ಠ ಮೂಲಭೂತ ಅವಶ್ಯಕತೆಗಳಿಂದ ವಂಚಿತ ರಾಗಿರುವ ಸ್ಥಿತಿಯನ್ನು ಬಡತನ ಎನ್ನಬಹುದು.

2. ಮಾನವನ ಕನಿಷ್ಠ ಮೂಲಭೂತ ಅವಶ್ಯಕತೆಗಳಾವುವು?

ಉತ್ತರ : ಮಾನವನ ಬದುಕಿಗೆ ಅಗತ್ಯವಾದ ಊಟ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯಮುಂತಾದ ಕನಿಷ್ಠ ಮೂಲಭೂತ ಅವಶ್ಯಕತೆಗಳು.

3. ಬಡತನ ರೇಖೆ ಎಂದರೇನು?

SS STF DIGITAL GROUP

ಉತ್ತರ : ಮೂಲ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಅವಶ್ಯವಿರುವ ಕನಿಷ್ಠ ಆದಾಯದ ಪ್ರಮಾಣವೇ ಬಡತನ ರೇಖೆಯಾಗಿದೆ.

4. ಹಸಿವಿನ ಪ್ರಮಾಣವನ್ನು ಅಳೆಯಲು ರೂಪಿಸಲಾಗಿರುವ ಸೂಚಿ ಯಾವುದು?

ವಿಶ್ವದ ಹಸಿವಿನ ಪ್ರಮಾಣವನ್ನು ಅಳೆಯಲು ಅಂತರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆಯು "ವಿಶ್ವ ಹಸಿವಿನ ಸೂಚ್ಯಂಕ' ಎಂಬ ಮಾನದಂಡವನ್ನು ರೂಪಿಸದೆ.

5. ಆಹಾರ ಭದ್ರತೆಯ ಅರ್ಥ ತಿಳಿಸಿ.

ಉತ್ತರ : ದೇಶದ ಪ್ರತಿಯೊಬ್ಬರಿಗೂ ಕನಿಷ್ಠ ಪ್ರಮಾಣದ ಆಹಾರವನ್ನು ಅವರು ನೀಡಬಹುದಾದ ಬೆಲೆಗೆ ಮತ್ತು ಅವರು ವಾಸಿಸುವ ಸ್ಥಳದ ಸಮೀಪ ಒದಗಿಸುವುದು ಅತ್ಯಾವಶ್ಯಕ. ಇದನ್ನೇ ನಾವು ಆಹಾರ ಭದ್ರತೆ ಎನ್ನುವುದು.

6. ಕಾಪು ದಾಸ್ತಾನು ಎಂದರೇನು?

ಉತ್ತರ : ಸರ್ಕಾರವು ಪ್ರತಿವರ್ಷ ಮಾರುಕಟ್ಟೆಯಿಂದ ಕನಿಷ್ಠ ಬೆಂಬಲ ಬೆಲೆ ನೀಡಿ ಆಹಾರಧಾನ್ಯಗಳನ್ನು ಖರೀದಿಸಿ ದಾಸ್ತಾನು ಮಾಡುತ್ತದೆ. ಇದನ್ನೆ ಕಾಪು ದಾಸ್ತಾನು ಎಂದು ಕರೆಯುತ್ತೇವೆ.

**ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾರತದಲ್ಲಿ ಬಡತನವನ್ನು ಹೇಗೆ ಗುರುತಿಸಲಾಗುತ್ತಿದೆ?

ಉತ್ತರ :2005ರಲ್ಲಿ ಪ್ರೊ. ಸುರೇಶ ತೆಂಡುಲ್ಕರ ಸಮಿತಿಯ ಶಿಫಾರಸ್ಸುಗಳನ್ನು ಅನುಸರಿಸಿ ಆಹಾರದ ಜೊತೆಗೆ ಶಿಕ್ಷಣ, ಆರೋಗ್ಯ, ವಿದ್ಯುತ್‌ಶಕ್ತಿ ಮತ್ತು ಸಾರಿಗೆಗಳ ಮೇಲೆ ಮಾಡುವ ತಲಾ ಮಾಸಿಕ ಅನುಭೋಗಿ ವೆಚ್ಚವನ್ನುಅಂದಾಜಿಸಿ ಬಡತನ ರೇಖೆಯನ್ನು ರೂಪಿಸಲಾಗಿದೆ. ತದನಂತರ ಸಿ.ರಂಗರಾಜನ್ ಸಮಿತಿಯು ತೆಂಡುಲ್ಕರಸಮಿತಿಯ ಶಿಫಾರಸ್ಸುಗಳನ್ನು ಅನುಸರಿಸಿ ಗ್ರಾಮೀಣ ಭಾಗಗಳಲ್ಲಿ ರೂ. 32 ಮತ್ತು ನಗರ ಭಾಗಗಳಲ್ಲಿ ರೂ.47 ರಷ್ಟು ತಲಾ ಮಾಸಿಕ ಅನುಭೋಗಿ ವೆಚ್ಚವನ್ನು ಬಡತನ ರೇಖೆಯೆಂದು ನಿಗದಿಗೊಳಿಸಿದೆ.

2. ಬಡತನದ ಸೂಚಿಗಳಾವುವು?

ಉತ್ತರ : ಆಹಾರ, ಶಿಕ್ಷಣ, ಆರೋಗ್ಯ, ವಿದ್ಯುತ್‌ಶಕ್ತಿ ಮತ್ತು ಸಾರಿಗೆಗಳ ಮೇಲೆ ಮಾಡುವ ವೆಚ್ಚ.

3. ಭಾರತದಲ್ಲಿ ಹಸಿವಿನ ತೀವ್ರತೆ ಮುಂದುವರೆದಿರುವುದರ ಕಾರಣಗಳೇನು?

ಜನಸಂಖ್ಯೆಯಲ್ಲಿನ ತೀವ್ರ ಹೆಚ್ಚಳ.

- ಕಡಿಮೆ ರಾಷ್ಟ್ರೀಯ ಆದಾಯ ಹಾಗೂ ಅದರ ನಿಧಾನ ಬೆಳವಣಿಗೆ
- ಬೆಲೆಗಳಲ್ಲಿಹೆಚ್ಚಳ
- ಬಂಡವಾಳದ

4. ಭಾರತದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ತಿಳಿಸಿರಿ.

ಉತ್ತರ:ಭಾರತೀಯ ಆಹಾರ ನಿಗಮದ ಮೂಲಕ ಖರೀದಿಸಿ ದ ಧಾನ್ಯಗಳನ್ನುಮಾರುಕಟ್ಟೆಯಲ್ಲಿನ ಬೆಲೆಗಳಿಗಿಂತ ಕಡಿಮೆ ಬೆಲೆಗೆ ಸರ್ಕಾರವು ಬಡಜನರಿಗೆ ನ್ಯಾಯ ಬೆಲೆ ಅಂಗಡಿ ಗಳಮೂಲಕ ವಿತರಿಸುತ್ತದೆ. ಇದೇ ಸಾರ್ವಜನಿಕ ವಿತರಣಾ ವ್ಯವಸ್ಥೆ. ಆಹಾರ ಧಾನ್ಯಗಳಲ್ಲದೇ, ಖಾದ್ಯತೈಲ, ಸಕ್ಕರೆ, ಸೀಮೆ ಎಣ್ಣೆ ಹಾಗೂ ಇತರ ಅವಶ್ಯಕ ವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಿಸುವ ಕಾರ್ಯವನ್ನು ಸರ್ಕಾರ ಕೈಗೊಂಡಿದೆ. ಭಾರತದಾದ್ಯಂತ 5 ಲಕ್ಷಕ್ಕೂ ಹೆಚ್ಚು ನ್ಯಾಯ ಬೆಲೆ ಅಂಗಡಿಗಳು 16ಕೋಟಿಗಿಂತಲೂ ಅಧಿಕ ಕುಟುಂಬಗಳಿಗೆ ಸೇವೆ ಸಲ್ಲಿಸುತ್ತಿವೆ.

5. ಬಡತನ ನಿರ್ಮೂಲನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿರಿ.

1. ಆರ್ಥಿಕ ಅಭಿವೃದ್ಧಿ ಕ್ರಮಗಳು
2. ಬಡತನ ನಿರ್ಮೂಲನಾ ಕಾರ್ಯಕ್ರಮಗಳು

- ಸ್ವ-ಉದ್ಯೋಗ ಕಾರ್ಯಕ್ರಮಗಳು:
- ಕೂಲಿ ಉದ್ಯೋಗ ಕಾರ್ಯಕ್ರಮಗಳು:
- ಕನಿಷ್ಠ ಮೂಲ ಅವಶ್ಯಕತೆಗಳ ಪೂರೈಕೆ :
- ಸಾಮಾಜಿಕ ಭದ್ರತಾ ಕ್ರಮಗಳು

6. ಬಡಜನರಿಗೆ ಒದಗಿಸಲಾಗುತ್ತಿರುವ ಸಾಮಾಜಿಕ ಭದ್ರತಾ ಕ್ರಮಗಳನ್ನು ತಿಳಿಸಿ

ಸಮಾಜದ ಅತಿ ಬಡಕುಟುಂಬಗಳ ಅಸಹಾಯಕರು, ವಯಸ್ಸಾದವರು, ಅಂಗವಿಕಲರು ಮುಂತಾದವರಿಗೆ ಸರ್ಕಾರ ಒದಗಿಸುವ ರಕ್ಷಣೆಗೆ ಸಾಮಾಜಿಕ ಭದ್ರತೆ ಎನ್ನುತ್ತೇವೆ. ಅನಾಥರಾದ ಮುದುಕರಿಗೆ 'ಸಂಧ್ಯಾ ಸುರಕ್ಷಾ ಯೋಜನೆ'ಯ ಮೂಲಕ ಪ್ರತಿ ತಿಂಗಳು ವೃದ್ಧಾಪ್ಯ ವೇತನ ನೀಡಲಾಗುತ್ತಿದೆ. ದುಡಿಯಲು ಅಸಮರ್ಥರಾದ ಅಂಗವಿಕಲರಿಗೆ ಮತ್ತು ಬಡವಿಧವೆಯರಿಗೆ ವಿಧವಾ ಮಾಶಾಸನನೀಡಲಾಗುತ್ತಿದೆ.

*****************************************

ಅಧ್ಯಾಯ ೩

# 4. ಶ್ರಮ ಹಾಗೂ ಉದ್ಯೋಗ

## I. ಕೆಳಗಿನ ವಾಕ್ಯಗಳಲ್ಲಿ ಸೂಕ್ತವಾದ ಶಬ್ದವನ್ನು ತುಂಬಿರಿ.

1. ಉತ್ಪಾದನೆಯಲ್ಲಿ ಶ್ರಮವು **ಮಹತ್ವದ ಹಾಗೂ ಅನಿವಾರ್ಯ** ಉತ್ಪಾದನಾಂಗವಾಗಿದೆ.
2. ಕೆಲಸ ಮಾಡುವ ವಯೋಮಾನವು **15 ರಿಂದ 60** ವರ್ಷವಾಗಿದೆ.
3. ಭಾರತದ ಒಟ್ಟು ಶ್ರಮಶಕ್ತಿಯಲ್ಲಿ ಮಹಿಳಾ ಶ್ರಮಶಕ್ತಿಯ ಪಾಲು **ಶೇ 35** ಆಗಿರುತ್ತದೆ.
4. ಆರ್ಥಿಕ ಅಭಿವೃದ್ಧಿಯಾದಂತೆ **ಪ್ರಾಥಮಿಕ** ವಲಯದಲ್ಲಿ ಕಾರ್ಮಿಕರ ಪಾಲು ಇಳಿಕೆಯಾಗುತ್ತದೆ.
5. ಎಮ್‌ಜಿನರೇಗ ಕಾನೂನನ್ನು ಪಾಸು ಮಾಡಿದ ವರ್ಷವು **2005** .

## II.ಈ ಕೆಳಗಿನವುಗಳ ಕುರಿತು ಚರ್ಚೆ ಮಾಡಿ ಉತ್ತರಿಸಿ.

**1. ಶ್ರಮದ ಅರ್ಥವೇನು?**

ಸರಕು ಅಥವಾ ಸೇವೆಗಳ ಉತ್ಪಾದನೆಗಾಗಿ ಮಾನವರು ಹಾಕುವ ಭೌತಿಕ ಅಥವಾ ಬೌದ್ಧಿಕ ಸಾಮರ್ಥ್ಯವನ್ನು ಶ್ರಮ ವೆಂದು ಕರೆಯಬಹುದು. ಅದು ಜೀವನೋಪಾಯ ಗಳಿಕೆ ಗಾಗಿ ಮಾನವರು ಮಾಡುವ ಎಲ್ಲ ಕಾರ್ಯಗಳನ್ನು ಒಳಗೊಂಡಿದೆ.

**2. ಅಸಂಘಟಿತ ವಲಯವೆಂದರೇನು?**

ದೇಶದಲ್ಲಿ ಯಾವುದೇ ನೋಂದಣಿ ಮಾಡಲಾರದ ಉದ್ದಿಮೆಗಳನ್ನು ಅಸಂಘಟಿತ ವಲಯವೆಂತಲೂ ಕರೆಯುತ್ತೇವೆ. ಅಸಂಘಟಿತ ವಲಯದಲ್ಲಿನ ಕಾರ್ಮಿಕರಿಗೆ ಕೂಲಿ ಹಾಗೂ ಕೆಲಸದ ಭದ್ರತೆ ಇರುವುದಿಲ್ಲ. ಉದಾಹರಣೆಗೆ ಕಟ್ಟಡ ಕಾರ್ಮಿಕರು, ಬೀದಿ ಬದಿ ವ್ಯಾಪಾರಸ್ಥರು, ಸಣ್ಣ ಅಂಗಡಿಗಳನ್ನು ಹೊಂದಿದವರು ಮುಂತಾದವರು ಈ ವರ್ಗದಲ್ಲಿ ಬರುತ್ತಾರೆ.

**3. ನಿರುದ್ಯೋಗವನ್ನು ವ್ಯಾಖ್ಯಾನಿಸಿ.**

ಪ್ರಸ್ತುತ ಕೂಲಿದರದಲ್ಲಿ ಕೆಲಸ ಮಾಡಲು ಇಚ್ಛಿಸುವ ಒಬ್ಬ ವ್ಯಕ್ತಿಗೆ ಕೆಲಸ ದೊರಕದೇ ಇರುವ ಸ್ಥಿತಿಯನ್ನು ನಿರುದ್ಯೋಗ ಎಂದು ಕರೆಯುತ್ತೇವೆ.

**4. ನಿರುದ್ಯೋಗದ ದರವನ್ನು ಹೇಗೆ ಅಳೆಯಲಾಗುತ್ತದೆ?**

ಒಂದು ದೇಶದ ಒಟ್ಟು ಶ್ರಮಶಕ್ತಿ (15 ರಿಂದ 60ವರ್ಷ) ಯಲ್ಲಿ ಕೆಲಸ ದೊರಕದಿರದವರ ಪ್ರತಿಶತ ಪ್ರಮಾಣ ದಿಂದ ನಿರುದ್ಯೋಗ ದರವನ್ನು ಅಳೆಯಲಾಗುವುದು

**5.ಭಾರತದಲ್ಲಿ ನಿರುದ್ಯೋಗದ ಸಮಸ್ಯೆಗೆ ಕಾರಣಗಳನ್ನು ವಿವರಿಸಿ.**

ಭಾರತದ ನಿರುದ್ಯೋಗದ ಸಮಸ್ಯೆಗೆ ಕಾರಣಗಳೆಂದರೆ

- ಉದ್ಯೋಗ ರಹಿತ ಆರ್ಥಿಕ ಬೆಳವಣಿಗೆ : ಭಾರತದಲ್ಲಿ ಬೆಳವಣಿಗೆಯು ಬಂಡವಾಳ ಸಾಂದ್ರ

ತಂತ್ರಜ್ಞಾನ ಬೆಳವಣಿಗೆಯಾದ್ದರಿಂದ ಕಡಿಮೆ ಪ್ರಮಾಣದ ಉದ್ಯೋಗ ನಿರ್ಮಾಣವಾಗಿದೆ.

- ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳ : ಏರುತ್ತಿರುವ ಜನಸಂಖ್ಯೆಯು ಕಾರ್ಮಿಕರ ಸಂಖ್ಯೆಯನ್ನು ದಿನೇ ದಿನೇ ಅಧಿಕಗೊಳಿಸುತ್ತಲಿದೆ..
- ಅಸಮಂಜಸ ತಂತ್ರಜ್ಞಾನ : ಭಾರತದಲ್ಲಿ ಬಳಸುತ್ತಿರುವ ತಂತ್ರಜ್ಞಾನವು ಬಂಡವಾಳ ಸಾಂದ್ರವಾಗಿದ್ದು ಭಾರತದ ಪರಿಸ್ಥಿತಿಗೆ ಅಸಮಂಜಸ ವಾಗಿದೆ.
- ಕೃಷಿಯ ಮೇಲಿನ ಅವಲಂಬನೆ : ಕೃಷಿಯಲ್ಲಿ ತೊಡಗಿಕೊಂಡವರಿಗೆ ವರ್ಷದ ಕೆಲವು ತಿಂಗಳುಗಳಿಗೆ ಮಾತ್ರ ಉದ್ಯೋಗ ಲಭ್ಯತೆ ಇರುತ್ತದೆ.
- ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅವನತಿ : ಭಾರತದಲ್ಲಿ ಸಾಕಷ್ಟು ಉದ್ಯೋಗ ಒದಗಿಸುತ್ತಿದ್ದ ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅವನತಿಯಿಂದಾಗಿ ನಿರುದ್ಯೋಗ ಅಧಿಕವಾಗಿದೆ.
- ಕಾರ್ಮಿಕರ ಕಡಿಮೆ ಚಲನಶೀಲತೆ : ಭಾಷೆ, ಧರ್ಮ, ಸಂಸ್ಕೃತಿಯಲ್ಲಿನ ಭಿನ್ನತೆಗಳು ಕಾರ್ಮಿಕರು ದೂರದ ಊರುಗಳಿಗೆ ವಲಸೆ ಹೋಗುವುದನ್ನು ನಿರ್ಬಂಧಿಸಿ ಭಾರತದಲ್ಲಿ ನಿರುದ್ಯೋಗದ ಪ್ರಮಾಣ ಅಧಿಕವಿದೆ.

**6. ಭಾರತದ ಮಹಿಳಾ ಉದ್ಯೋಗದ ಲಕ್ಷಣಗಳನ್ನು ತಿಳಿಸಿ.**

- ಭಾರತದಲ್ಲಿ ಮಹಿಳಾ ಕಾರ್ಮಿಕರ ಪ್ರಮಾಣ ಇಳಿಕೆ ಯಾಗುತ್ತಿದ್ದು, 1990ರಲ್ಲಿ ಸುಮಾರು ಶೇ.40ರಷ್ಟಿದ್ದು 2011-12ರ ವೇಳೆಗೆ ಶೇ.22.5ಕ್ಕೆ ಇಳಿಕೆಯಾಗಿದೆ.
- ಉದ್ಯೋಗಕ್ಕೆ ಅಡೆತಡೆಗಳು: ಮಹಿಳೆಯರು ಉದ್ಯೋಗದ ಆಯ್ಕೆ, ಕೆಲಸದ ಪರಿಸ್ಥಿತಿಗಳು, ಕೆಲಸದ ಭದ್ರತೆ, ವೇತನ ತಾರತಮ್ಯ, ಮುಂತಾದ ಸಮಸ್ಯೆಗಳು ಕಠಿಣಗೊಳಿಸುತ್ತವೆ.
- ಅನಿಯಮಿತ ಉದ್ಯೋಗ: ಬಹಳಷ್ಟು ಮಹಿಳಾ ಕಾರ್ಮಿಕರು ಪ್ರಾಥಮಿಕ ವಲಯದಲ್ಲಿ ಕೆಲಸ ಮಾಡುತ್ತಲಿದ್ದು ಅಲ್ಲಿ ಉತ್ಪಾದಕತೆ ಕಡಿಮೆಯಿರುತ್ತದೆ.
- ನಗರ ಪ್ರದೇಶಗಳಲ್ಲಿ ಮಹಿಳೆಯರು ಮನೆಕೆಲಸದ ಉದ್ಯೋಗ ಮಾಡುತ್ತಲಿದ್ದು ಅವರು ತುಂಬಾ ನಿಕೃಷ್ಟ ಸ್ಥಿತಿಯಲ್ಲಿದ್ದಾರೆ.

**7. ಎಮ್‌ಜಿ ನರೇಗ ಯೋಜನೆಯ ಉದ್ದೇಶಗಳನ್ನು ಮತ್ತು ಕಾರ್ಯಾಚರಣೆಯ ಕುರಿತು ಬರೆಯಿರಿ.**

- ಒಂದು ಕುಟುಂಬದ ಒಬ್ಬ ಕಾರ್ಮಿಕನಿಗೆ ಪ್ರತಿವರ್ಷ ನೂರು ದಿನಗಳ ಉದ್ಯೋಗ ನೀಡುವ ಸಾಂವಿಧಾನಿಕ ಖಾತ್ರಿ ಒದಗಿಸುತ್ತದೆ.
- ಉದ್ಯೋಗ ನೀಡುವಲ್ಲಿ ಸರ್ಕಾರ ವಿಫಲವಾದರೆ, ಆ ವ್ಯಕ್ತಿಗೆ ನಿರುದ್ಯೋಗ ಭತ್ಯೆಯನ್ನು ಒಳಗೊಂಡಿದೆ.
- ನೂರು ಪ್ರತಿಶತ ನಗರ ಜನಸಂಖ್ಯೆ ಇರುವ ಜಿಲ್ಲೆಗಳನ್ನು ಹೊರತು ಪಡಿಸಿ ಭಾರತದ ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ.
- ವಿಶ್ವದ ಅತ್ಯಂತ ಬೃಹತ್ತಾದ ಬಡತನ ನಿರ್ಮೂಲನಾ ಕಾರ್ಯಕ್ರಮವಾಗಿದೆ.
- ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಕೂಲಿ ನೀಡಲಾಗುತ್ತದೆ.
- .ಯೋಜನೆಯ ದೆಸೆಯಿಂದಾಗಿ ಜನರು ಬ್ಯಾಂಕ್ ಸೇವೆ ಪಡೆಯುವ ಪ್ರಮಾಣವೂ ಹೆಚ್ಚಿದೆ.

*******************************

# ವ್ಯವಹಾರ ಅಧ್ಯಯನ

## ಅಧ್ಯಾಯ – 1

# ವ್ಯವಹಾರ ನಿರ್ವಹಣೆ

**I.ಕೆಳಗಿನ ಪ್ರತಿಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ನಿರ್ವಹಣೆ ಎಂದರೇನು?

ಸಂಸ್ಥೆಯ ಪೂರ್ವ ನಿರ್ಧಾರಿತ ಗುರಿಗಳ ಈಡೇರಿಕೆಗಾಗಿ ಜನರ ಪ್ರಯತ್ನಗಳನ್ನು ಸಮನ್ವಯಗೊಳಿಸುವ ಮತ್ತು ಸಂಯೋಜಿಸುವ ರೀತಿಯಲ್ಲಿನಿರ್ದೇಶಿಸುವುದರ ಮೂಲಕ ಬೇರೆಯವರಿಂದ ಕೆಲಸಮಾಡಿಸುವ ಪ್ರಕ್ರಿಯೆಯಾಗಿರುತ್ತದೆ.

2. ನಿರ್ಧಾರ ಕೈಗೊಳ್ಳುವುದು ಎಂದರೇನು?

ಉತ್ತರ:ಪ್ರತಿಯೊಂದು ವ್ಯವಹಾರ ಸಂಘಟನೆಯು ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನುಈಡೇರಿಸಿಕೊಳ್ಳಲು ಒಂದುನಿರ್ಣಯವನ್ನು ತೆಗೆದುಕೊಳ್ಳಬೇಕಾಗಿರುತ್ತದೆ.ಇದನ್ನೇ ನಿರ್ಧಾರ ಕೈಗೊಳ್ಳುವುದು ಎನ್ನುತ್ತೇವೆ.

3.ವೈಯಕ್ತಿಕ ನಿರ್ಧಾರ ಹಾಗೂ ಗುಂಪು ನಿರ್ಧಾರಗಳೆಂದರೇನು?

ಏಕ ಒಡೆತನರೂಪವಾದ ಸಣ್ಣಪ್ರಮಾಣದ ವ್ಯವಹಾರ ಸಂಘಟನೆಗಳಲ್ಲಿ, ಒಬ್ಬ ವ್ಯಕ್ತಿ ನಿರ್ಧಾರಗಳನ್ನು ತೆಗೆದುಕೊಳ್ಳು ತ್ತಾನೆ. ಇವುಗಳನ್ನು ವೈಯಕ್ತಿಕ ನಿರ್ಧಾರಗಳೆನ್ನುತ್ತೇವೆ.

ಒಂದು ತಂಡ ತೆಗೆದುಕೊಳ್ಳುವ ನಿರ್ಧಾರಗಳನ್ನು ಗುಂಪು ನಿರ್ಧಾರಗಳೆನ್ನುತ್ತೇವೆ.

4. ನಿರ್ವಹಣೆಯ ತತ್ವಗಳಲ್ಲಿ ಅಧಿಕಾರ ಮತ್ತು ಜವಾಬ್ಧಾರಿಯ ತತ್ವವೇನು?

,,ಈ ತತ್ವವು ಅಧಿಕಾರ ಮತ್ತು ಜವಾಬ್ದಾರಿಗೆ ಸಂಬಂಧ ಪಟ್ಟಿದ್ದಾಗಿದೆ. ಈ ಎರಡೂ ಅಂಶಗಳು ಆಡಳಿತಗಾರನ ಅಧಿಕಾರ ಮತ್ತು ನೌಕರರೊಂದಿಗಿನ ಜವಾಬ್ದಾರಿಯನ್ನು ತೋರಿಸುತ್ತವೆ. ಈ ಅಂಶಗಳು ಆಡಳಿತಗಾರರ ಬುದ್ಧಿವಂತಿಕೆ, ಈಗಿನ ಅನುಭವ, ಹಿಂದಿನ ಅನುಭವ, ನೈತಿಕ ಗುಣ ಮುಂತಾದುವುಗಳ ಸಮ್ಮಿಲನವಾಗಿರುತ್ತದೆ.

**II. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಹೆನ್ರಿ ಫಯೋಲರ ಪ್ರಕಾರ ನಿರ್ವಹಣೆಯ ತತ್ವಗಳಾವುವು

1).ಕಾರ್ಯವಿಭಜನೆ

2).ಅಧಿಕಾರ ಮತ್ತು ಜವಾಬ್ದಾರಿ

3). ಶಿಸ್ತು

4).ಏಕರೂಪದ ಆಜ್ಞೆ

5).ಏಕರೂಪದ ಆದೇಶ

6) ವ್ಯಕ್ತಿ ಹಿತಾಸಕ್ತಿ ಮತ್ತು ಸಾಮಾನ್ಯ ಹಿತಾಸಕ್ತಿಯ ಅಧೀನತೆ

7).ಉದ್ಯೋಗಿಗಳ ವೇತನ

8) ಕೇಂದ್ರೀಕೃತ ನಿರ್ವಹಣೆ :

9).ಹಂತಸರಪಳಿ

1).ಸಮಾನತೆ

11).ಉದ್ಯೋಗಿಗಳ ಅಧಿಕಾರಾವಧಿಯ ಸ್ಥಿರತೆ :

12). ನೇತೃತ್ವ:

13).ಒಗ್ಗಟ್ಟಿನಲ್ಲಿ ಬಲ

2. ನಿರ್ವಹಣೆಯ ಕಾರ್ಯಗಳಾವುವು? ಹೆಸರಿಸಿ.

1) ಯೋಜನೆ

2) ಸಂಘಟನೆ

3) ಸಿಬ್ಬಂದಿ ಪೂರೈಕೆ

4) ನಿರ್ದೇಶನ

SS STF DIGITAL GROUP

5) ಸಂಯೋಜನೆ

6) ನಿಯಂತ್ರಣ

3. ಅಧಿಕಾರ ಮತ್ತು ಜವಾಬ್ಧಾರಿ, ಹಂತ ಸರಪಳಿ ಮತ್ತು ಕೇಂದ್ರೀಕೃತ ತತ್ವಗಳನ್ನು ವ್ಯವಹಾರ ಸಂಸ್ಥೆಯ ನಿರೂಪಣೆಗೆ ಹೊಂದುವಂತೆ ಬರೆಯಿರಿ.

1.ಅಧಿಕಾರ ಮತ್ತು ಜವಾಬ್ದಾರಿ : ಈ ತತ್ವವು ಅಧಿಕಾರ ಮತ್ತು ಜವಾಬ್ದಾರಿಗೆ ಸಂಬಂಧಪಟ್ಟಿದ್ದಾಗಿದೆ.ಈ ಎರಡೂ ಅಂಶಗಳು ಆಡಳಿತಗಾರನ ಅಧಿಕಾರ ಮತ್ತು ನೌಕರರೊಂದಿಗಿನ ಜವಾಬ್ದಾರಿಯನ್ನು ತೋರಿಸುತ್ತವೆ.

2.ಹಂತಸರಪಳಿ: ಈ ತತ್ವದ ಪ್ರಕಾರ ಪ್ರತಿ ಸಂಘಟನೆಯಲ್ಲು ಅಧಿಕಾರ ವರ್ಗದ ಹಂತಗಳಿರಬೇಕು. ಅಧಿಕಾರದ ಶ್ರೇಣಿ, ಅಧಿಕಾರ ವರ್ಗದವರ ಮತ್ತು ಕೆಳಉದ್ಯೋಗಿಗಳ ಮಧ್ಯೆ ಸ್ಪಷ್ಟವಾಗಿ ನಿರ್ಧಾರವಾಗಿರಬೇಕು.

3.ಕೇಂದ್ರೀಕೃತ ನಿರ್ವಹಣೆ : ಈ ತತ್ವದ ಪ್ರಕಾರ ಅಧಿಕಾರವು ಕೇಂದ್ರೀಕೃತವಾಗಿದ್ದು ವ್ಯಾಪಾರ ಸಂಘಟನೆಗೆ ಉತ್ತಮ ಫಲ ದೊರಕುವಂತಿರಬೇಕು.

4. ವ್ಯವಹಾರ ನಿರ್ವಹಣೆಯಲ್ಲಿ ನಿರ್ಧಾರ ತೆಗೆದುಕೊಳ್ಳುವುದರ ಪ್ರಾಮುಖ್ಯತೆ ಏನು?

ಉತ್ತರ::* ವ್ಯವಹಾರ ಸಂಘಟನೆಗಳಲ್ಲಿ ಉಂಟಾಗುವ ಅನೇಕಸಮಸ್ಯೆಗಳಿಗೆ ಒಳ್ಳೆಯ ನಿರ್ಧಾರಗಳು ಪರಿಹಾರ ಕೊಡುತ್ತವೆ.

*ಉತ್ತಮ ನಿರ್ಧಾರದಿಂದ ಸಂಘಟನೆಯು ಉತ್ತಮ ಲಾಭ ಪಡೆದು ಸುಗಮ ರೀತಿಯಲ್ಲಿ ನಡೆದುಕೊಂಡು ಹೋಗುತ್ತದೆ.ತಪ್ಪು ನಿರ್ಧಾರಗಳುಸಂಘಟನೆಯ ನಷ್ಟಗಳಿಗೆ ಕಾರಣವಾಗುತ್ತವೆ.

*ಯಾವುದಾದರೂ ಒಂದು ಸಮಸ್ಯೆಯನ್ನು ಪರಿಹರಿಸಬೇಕಾದರೆ ಉತ್ತಮ ನಿರ್ಧಾರ ತೆಗೆದುಕೊಳ್ಳುವುದರ ಮೂಲಕ ಮಾತ್ರ ಸಾಧ್ಯವಾಗುತ್ತದೆ.

5. ನಿರ್ಧಾರ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಮುಖ್ಯ ಮೂಲಭೂತ ತತ್ವಗಳಾವುವು?

- ಗುರಿಗಳನ್ನು ಸ್ಥಿರಪಡಿಸುವುದು•
- ಗುರಿಗಳ ನಿರ್ದಿಷ್ಟತೆ.
- ಪರ್ಯಾಯ ನಿರ್ಧಾರಗಳನ್ನು ಹುಡುಕುವುದು.
- ಯೋಜನೆಗಳನ್ನು ಪಕ್ವಗೊಳಿಸುವುದು.
- ವಿವೇಚನಾಯುಕ್ತ ತರ್ಕಬದ್ದ ಯೊಜನೆಗಳು.
- ವಸ್ತುಸ್ಥಿತಿ ಅರಿಯುವುದು.
- ಮೌಲ್ಯೀಕರಿಸುವುದು.

6.ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳಾವುವು?

- ಸಮಸ್ಯೆಯನ್ನು ವಿಶ್ಲೇಷಿಸುವುದು
- ಕಾರ್ಯಗತ ಮಾಡಲು ಯೋಜನೆ ರೂಪಿಸುವುದು.
- ಧೈರ್ಯ ಮತ್ತು ತಾಳ್ಮೆಗಳನ್ನು ಪಾಲಿಸುವುದು.
- ಮುಂದಾಲೋಚನೆಯನ್ನು ಗಮನದಲ್ಲಿಡುವುದು.
- ವಿವೇಕಯುಕ್ತ ನಿರ್ಧಾರವನ್ನು ಶೀಘ್ರದಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು.

7. ಯೋಜನೆ ಮತ್ತು ಸಂಘಟನೆಗಳು, ನಿರ್ವಹಣೆಯ ಮುಖ್ಯ ಕಾರ್ಯಕ್ಷೇತ್ರದಲ್ಲಿ ವಹಿಸುವ ಪಾತ್ರವೇನು?

**ಯೋಜನೆ :** ಇದು ನಿರ್ವಹಣೆಯ ಕಾರ್ಯಕ್ಷೇತ್ರದಲ್ಲಿ ಒಂದು ಮುಖ್ಯವಾದ ಕ್ಷೇತ್ರವಾಗಿದೆ. ಯೋಜನೆಯೆಂದರೆ ಒಂದು ನಿರ್ದಿಷ್ಟ ಅವಧಿಗೆ ಭವಿಷ್ಯದ ಕಾರ್ಯಾಚರಣೆಗಳನ್ನು ಮುಂದಾಗಿ ನಿರ್ಧರಿಸುವುದೇ ಆಗಿದೆ .ಯೋಜನೆಯ ಪ್ರಕ್ರಿಯೆಯು ಸಂಸ್ಥೆಯ ಗುರಿಗಳ ಸಾಧನೆಗಾಗಿ ಉದ್ದೇಶಗಳ ನಿರ್ಣಯ, ನೀತಿ, ಕಾರ್ಯತಂತ್ರಗಳು, ಕಾರ್ಯಕ್ರಮಗಳು, ಕಾರ್ಯಾನುಗತಿಗಳ ಮತ್ತು ಪರಿಶಿಷ್ಟಗಳ ನಿರೂಪಣೆಯನ್ನು ಒಳಗೊಂಡಿರುತ್ತದೆ.

**2. ಸಂಘಟನೆ :** ಸಂಘಟನೆಯೆಂದರೆ ಮಾನವ ಶಕ್ತಿ ಮತ್ತು ಭೌತಿಕ ಸಂಪನ್ಮೂಲಗಳನ್ನು ಒಂದೆಡೆ ಸೇರಿಸುವುದೇ ಆಗಿದೆ. ಕೆಲವು ಯಂತ್ರಗಳು ಮತ್ತು ಯಂತ್ರೋಪಕರಣ ಸಂಪನ್ಮೂಲಗಳನ್ನು ಮಾನವ ಸಂಪನ್ಮೂಲದ ಜೊತೆ ಸೇರಿಸಿ, ಕಾರ್ಯಕ್ಕೆ ತೊಡಗಿಸಿ ಸಂಸ್ಥೆಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದೇ ಸಂಘಟನೆಯ ಮುಖ್ಯ ಧ್ಯೇಯವಾಗಿರುತ್ತದೆ. ಈ ಅಂಶವು ಪ್ರತಿನಿಧಿಯನ್ನು ನೇಮಿಸಿ ಇಲಾಖಾ ಪ್ರತಿನಿಧಿಗಳಿಗೆ ಅಗತ್ಯವಾದ ಭೌತಿಕ ಸೌಲಭ್ಯಗಳನ್ನು ಒದಗಿಸಿ ಬೇರೆ ಬೇರೆ ಹಂತಗಳ ಕೆಲಸಗಾರರಿಗೆ ಸಮನ್ವಯ ರೀತಿಯಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವ ಉದ್ದೇಶವನ್ನು ಹೊಂದಿರುತ್ತದೆ.

******************************

ಅಧ್ಯಾಯ – 2

## ಹಣಕಾಸಿನ ನಿರ್ವಹಣೆ

**I.ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1.ವ್ಯವಹಾರ ಸಂಸ್ಥೆಗಳಿಗೆ ಎರಡು ರೀತಿಯ ಹಣಕಾಸಿನ ಅವಶ್ಯಕತೆ ಇರುತ್ತದೆ. ಅವು ಯಾವುವೆಂದರೆ **ಅಲ್ಪಾವಧಿ ಹಣಕಾಸು** ಮತ್ತು **ದೀರ್ಘಾವಧಿ ಹಣಕಾಸು**

2. ವಸ್ತುಗಳನ್ನು ಪೂರೈಕೆ ಮಾಡುವವರಿಂದ ಸಾಲಪಡೆಯು ತ್ತಾರೆ. ಇದನ್ನು **ವ್ಯಾಪಾರಿ** ಸಾಲ ಎನ್ನುತ್ತಾರೆ.

3. ವ್ಯವಹಾರ ಸಂಸ್ಥೆಗಳು ತಮ್ಮ ದಿನವಹಿ ಕಾರ್ಯಗಳಿಗಾಗಿ **ಅಲ್ಪಾವಧಿ ಹಣಕಾಸು** ರೀತಿಯ ಸಾಲವನ್ನು ಪಡೆಯುತ್ತಾರೆ.

4.ಅತ್ಯಂತ ತ್ವರಿತ ಬೇಡಿಕೆಗಳಿಗಾಗಿ ವ್ಯವಹಾರ ಸಂಸ್ಥೆಗಳು **ಸ್ಥಳೀಯ ಲೇವಾದೇವಿಗಾರರಿಂದ** ಸಾಲ ಪಡೆಯುತ್ತಾರೆ.

5. ಕೂಡು ಬಂಡವಾಳ ಸಂಸ್ಥೆಗಳ ಬಂಡವಾಳವನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಂಗಡಿಸಿರುತ್ತಾರೆ ಇವುಗಳನ್ನು **ಷೇರುಗಳು** ಎಂದು ಕರೆಯುತ್ತಾರೆ.

6.ವ್ಯವಹಾರ ಸಂಸ್ಥೆಗಳ ಆಯಾತ ಮತ್ತು ನಿರ್ಯಾತಗಳಿಗಾಗಿ ಸಾಲ ನೀಡುವಬ್ಯಾಂಕು **ಆಮದು ಮತ್ತು ರಫ್ತು** ಬ್ಯಾಂಕಾಗಿದೆ.

7. ಭಾರತೀಯ ಕೈಗಾರಿಕಾ ಹಣಕಾಸು ನಿಗಮವು **1948 ರ** ಇಸವಿಯಲ್ಲಿ ಸ್ಥಾಪಿತವಾಯಿತು.

8. ಭಾರತದಲ್ಲಿ ಮೊಟ್ಟಮೊದಲ ಷೇರುಮಾರುಕಟ್ಟೆ **ಮುಂಬೈ** ಪಟ್ಟಣದಲ್ಲಿ ಪ್ರಾರಂಭವಾಯಿತು.

**II.ಈ ಕೆಳಗಿನ ಪ್ರಶ್ನೆಗಳಿಗೆ ಚರ್ಚಿಸಿ ಎರಡು,ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1.ವ್ಯವಹಾರ ಶಾಸ್ತ್ರದಲ್ಲಿ ಹಣಕಾಸು ನಿರ್ವಹಣೆ ಎಂದರೇನು?

ಹಣಕಾಸು ನಿರ್ವಹಣೆ ಎಂದರೆ ವ್ಯವಹಾರ ಸಂಸ್ಥೆಗಳ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಹಣದ ಸಂಗ್ರಹಣೆ ಮತ್ತು ಅದನ್ನು ಲಾಭದಾಯಕ ಬಳಕೆಗಾಗಿ ಉಪಯೋಗಿಸುವುದು ಎಂದರ್ಥ.

2. ವ್ಯವಹಾರ ಸಂಸ್ಥೆಗಳಿಗೆ ಬೇಕಾದ ಎರಡು ರೀತಿಯ ಸಾಲಗಳಾವುವು?

1.ಅಲ್ಪಾವಧಿ ಹಣಕಾಸು

2.ದೀರ್ಘಾವಧಿ ಹಣಕಾಸು

3.ವ್ಯವಹಾರ ಸಂಸ್ಥೆಗಳಿಗೆ ಅಲ್ಪಾ ವಧಿ ಸಾಲಕ್ಕಾಗಿ ಇರುವ ಯಾವುದಾದರೂ ನಾಲ್ಕು ಮೂಲಗಳನ್ನು ತಿಳಿಸಿ?

ಎ) ವ್ಯಾಪಾರ ಸಾಲ

ಬಿ) ಬ್ಯಾಂಕು ಉದ್ದರಿ ಅಥವಾ ಬ್ಯಾಂಕುಸಾಲ

ಸಿ) ಗ್ರಾಹಕ ಮುಂಗಡಗಳು

ಡಿ) ಅಲ್ಪಾವಧಿ ಸಾರ್ವಜನಿಕ ಠೇವಣಿಗಳು

4.ವ್ಯವಹಾರ ಸಂಸ್ಥೆಗಳಿಗೆ ಅಲ್ಪಾವಧಿ ಸಾಲ ಏಕೆ ಬೇಕಾಗುತ್ತದೆ ತಿಳಿಸಿ?

ವ್ಯವಹಾರ ಸಂಸ್ಥೆಗಳಿಗೆ ದಿನವಹಿ ಕಾರ್ಯವಹಿವಾಟುಗಳಿಗಾಗಿ ಅಲ್ಪಾವಧಿ ಸಾಲ ಬೇಕಾಗುತ್ತದೆ.

5. ದೀರ್ಘಾವಧಿ ಸಾಲ ಎಂದರೇನು?

ವ್ಯವಹಾರ ಸಂಸ್ಥೆಗಳಿಗೆ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಅವಶ್ಯಕವಿರುವ ಸಾಲವನ್ನು ದೀರ್ಘಾವಧಿ ಸಾಲ ಎನ್ನುವರು

6. ಅನ್ಯೋನ್ಯ ನಿಧಿಗಳ ಯಾವುದಾದರು ಮೂರು ಸಂಸ್ಥೆಗಳನ್ನು ತಿಳಿಸಿ?

1. ಯುನಿಟ್ ಟ್ರಸ್ಟ್ ಆಫ್ ಇಂಡಿಯಾ.

2.SBI

3.ಬಜಾಜ್ ಅಲಯನ್ಸ್

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಗುಂಪಿನಲ್ಲಿ ಚರ್ಚಿಸಿ, ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವ್ಯವಹಾರ ಸಂಸ್ಥೆಗಳಿಗೆ ಹಣಕಾಸಿನ ಪ್ರಾಮುಖ್ಯತೆ ಮತ್ತು ಪಾತ್ರವನ್ನು ತಿಳಿಸಿ.

ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಪಾತ್ರ ಮತ್ತು ಪ್ರಾಮುಖ್ಯತೆ :

- ಹಣಕಾಸು ವ್ಯವಹಾರ ಸಂಸ್ಥೆಗಳ ಜೀವರಕ್ತವಾಗಿದೆ. ಹಣಕಾಸು ಇಲ್ಲದೆ ಯಾವುದೇ ವ್ಯವಹಾರ ಚಟುವಟಿಕೆಗಳು ಸಾಧ್ಯವಿಲ್ಲ.
- ಉತ್ಪಾದನೆಯ ಕಾರ್ಯದಲ್ಲಿ ಮತ್ತು ವಸ್ತುಗಳನ್ನು ಹಾಗೂ ಸೇವೆಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಬೇಕಾಗುವ ಸಾಧನಗಳನ್ನು ಪೂರೈಸುತ್ತದೆ.
- ವ್ಯವಹಾರ ಸಂಸ್ಥೆಗಳು ತಮ್ಮ ಗುರಿಗಳನ್ನು ಸಾಧಿಸುವುದು ಮತ್ತು ವ್ಯವಹಾರ ನಡೆಸಿಕೊಂಡು ಹೋಗುವ ದಿಕ್ಕಿನಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ಬಂಡವಾಳವನ್ನು ತೊಡಗಿಸುವುದರಲ್ಲಿ ಹಾಗೂ ವಿನಿಯೋಗ ಮಾಡುವ ದಿಕ್ಕಿನಲ್ಲಿ ಒಂದು ನಿಯಂತ್ರಿತ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತದೆ.
- ಸಂಸ್ಥೆಯನ್ನು ಆಧುನಿಕತೆಗೊಳಿಸುವಲ್ಲಿ ಸಹಾಯ ಮಾಡುತ್ತದೆ.
- ಸಂಸ್ಥೆಯು ಕೈಗೊಳ್ಳುವ ಹೊಸ ಪರಿಶೋಧನೆಗಳು, ಮಾರುಕಟ್ಟೆ ಸಮೀಕ್ಷೆ, ಜಾಹಿರಾತುಗಳಿಗಾಗಿ ಅವಶ್ಯಕ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹಣಕಾಸಿನ ಅವಶ್ಯಕತೆ ಹೆಚ್ಚಾಗಿದೆ.
- ಹಣಕಾಸಿನ ಸ್ಥಿರತೆ ಒಂದು ಸಂಸ್ಥೆಯ ಯೋಗ್ಯತೆಯನ್ನು ಹೆಚ್ಚಿಸುತ್ತದೆ.

2. ವ್ಯವಹಾರ ಸಂಸ್ಥೆಗಳಿಗೆ ದೀರ್ಘಾವಧಿ ಸಾಲದ ಅವಶ್ಯಕತೆಗಳಾವುವು? ಸ್ಥೂಲವಾಗಿ ವಿವರಿಸಿ

ವ್ಯವಹಾರ ಸಂಸ್ಥೆಗಳಿಗೆ ಬೇಕಾಗುವ ದೀರ್ಘಾವಧಿ ಹಣಕಾಸು ಸಾಮಾನ್ಯವಾಗಿ ಒಂದು ವರ್ಷಕ್ಕೆ ಮೀರಿದ ಅವಧಿಯಾಗಿರುತ್ತದೆ. ಈ ಸಾಲವು ಅಭಿವೃದ್ಧಿ ಕಾರ್ಯಗಳಾದ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುವುದು, ಆಧುನಿಕ ಉತ್ಪಾದನಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವುದು,ಯಂತ್ರೋಪಕರಣಗಳನ್ನು ಕೊಳ್ಳುವುದು ಮುಂತಾದುವುಗಳಿಗೆ ಅನ್ವಯವಾಗುತ್ತದೆ. ಈ ರೀತಿಯ ಸಾಲವು ಸ್ಥಿರಬಂಡವಾಳದ ಕೆಲಸಗಳನ್ನು ಮಾಡುವುದಕ್ಕೆ ಬೇಕಾಗುತ್ತದೆ. ಉದಾ : ಸ್ಥಿರ ಆಸ್ತಿಗಳನ್ನು ಹೊಂದುವುದು, ಮತ್ತು ಪ್ರಸ್ತುತ ಉತ್ಪಾದನಾ ಕಾರ್ಯಗಳನ್ನು ಆಧುನಿಕ ಕಾರ್ಯಗಳಿಗೆ

SS STF DIGITAL GROUP

ವಿಸ್ತರಿಸುವುದು, ಕಟ್ಟಡ ನಿರ್ಮಾಣ ಮಾಡುವುದು ಮುಂತಾದುವು.

3. ಷೇರುಗಳು ಮತ್ತು ಸಾಲ ಪತ್ರಗಳು ದೀರ್ಘಾವಧಿ ಸಾಲದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ." ಅವುಯಾವುವು ? ಅವು ಹೇಗೆ ಸಹಾಯ ಮಾಡುತ್ತವೆ?

ಷೇರುಗಳು ದೀರ್ಘಾವಧಿ ಸಾಲದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಕೂಡು ಬಂಡವಾಳ ಸಂಸ್ಥೆಗಳು ಬಂಡವಾಳವನ್ನು ಸಣ್ಣ ಸಣ್ಣ ಕನಿಷ್ಠ ಮೊತ್ತದ ಮೂಲಕ ಸಂಗ್ರಹಿಸುತ್ತವೆ. ಇವುಗಳಿಗೆ ಷೇರುಗಳು ಎನ್ನಲಾಗುತ್ತದೆ. ಕೂಡು ಬಂಡವಾಳ ಸಂಸ್ಥೆಗಳನ್ನು ಪ್ರಾರಂಭಿಸುವಾಗ ಪ್ರವರ್ತಕರು ಷೇರುಗಳನ್ನು ಸಾರ್ವಜನಿಕರಿಗೆ ಹಂಚುತ್ತಾರೆ ಹಾಗೂ ಈ ಸಂಸ್ಥೆಗಳು ತಮಗೆ ಬಂಡವಾಳ ಹೆಚ್ಚಿಸಿಕೊಳ್ಳಬೇಕಾದ ಸಂದರ್ಭಗಳು ಬಂದಾಗಲೂ ಷೇರುಗಳನ್ನು ಸಾರ್ವಜನಿಕರಿಗೆ ಹಂಚುತ್ತವೆ.ಕೂಡು ಬಂಡವಾಳ ಸಂಸ್ಥೆಗಳು ದೀರ್ಘಾವಧಿ ಸಾಲವನ್ನು ಸಂಗ್ರಹಿಸಲು ಸಾಲಪತ್ರಗಳನ್ನು ಸಾರ್ವಜನಿಕರಿಗೆ ನೀಡುವುದರ ಮೂಲಕ ಹಣವನ್ನು ಸಂಗ್ರಹಿಸಲು ಅವಕಾಶವಿದೆ. ಒಂದು ಸಂಸ್ಥೆಯು ಸಾರ್ವಜನಿಕರಿಗೆ ಸಾಲಪತ್ರ ಗಳನ್ನು ನೀಡಿ ಸಾಲವನ್ನು ಒಂದು ಅವಧಿಯ ನಂತರ ಮರುಪಾವತಿ ಮಾಡುವ ಕರಾರನ್ನು ಸಾಲಪತ್ರಗಳಲ್ಲಿ ತಿಳಿಸಿರುತ್ತವೆ. ಒಂದು ನಿರ್ಧಿಷ್ಟ ದರದ ಬಡ್ಡಿ ಹಾಗೂ ಸಾಲಪತ್ರವನ್ನು ಹೊಂದಿರುವವರಿಗೆ ಕೊಡಲು ಒಪ್ಪಿರುತ್ತವೆ, ಈಮೂಲಕ ಕೂಡ ವ್ಯವಹಾರ ಸಂಸ್ಥೆಗಳು ದೀರ್ಘಾವಧಿ ಸಾಲವನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತವೆ.

4. ಭಾರತದ ಹಣಕಾಸು ನಿಗಮ ಮತ್ತು ರಾಜ್ಯ ಹಣಕಾಸು ನಿಗಮಗಳು ವಾಣಿಜ್ಯ ಸಂಸ್ಥೆಗಳಿಗೆ ವ್ಯವಹಾರಕ್ಕೆ ಹಣಕಾಸು ಪೂರೈಸಲು ಯಾವ ಪಾತ್ರ ವಹಿಸುತ್ತವೆ?

ಭಾರತೀಯ ಕೈಗಾರಿಕಾ ಹಣಕಾಸು ನಿಗಮವು ದೀರ್ಘಾವಧಿ ಸಾಲಗಳನ್ನು ಕೊಡಲು 1948 ರಲ್ಲಿ ಸ್ಥಾಪಿತವಾಯಿತು. ಈ ನಿಗಮವು ಸಾರ್ವಜನಿಕ ನಿಯಮಿತ ಕಂಪನಿ ಗಳು, ಸಹಕಾರಿ ಸಂಘಗಳು ಮತ್ತು ರಾಜ್ಯ ಸರ್ಕಾರದಒಡೆತನ ದಲ್ಲಿನ ನಿಯಮಿತ ಕಂಪನಿಗಳಿಗೆ ಸಾಲವನ್ನು ಕೊಡುತ್ತದೆ. ರಾಜ್ಯ ಹಣಕಾಸು ನಿಗಮಗಳು ತಮ್ಮ ರಾಜ್ಯಗಳಲ್ಲಿನ ಸಣ್ಣ ಪ್ರಮಾಣದ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸನ್ನು ಒದಗಿಸುತ್ತವೆ.

5. ಸಾರ್ವಜನಿಕ ದೀರ್ಘಾವಧಿ ಠೇವಣಿಗಳೆಂದರೇನು? ಅವುಗಳಿಂದ ಸಾರ್ವಜನಿಕರಿಗಾಗುವ ಅನುಕೂಲತೆಗಳೇನು?

ವ್ಯವಹಾರ ಸಂಸ್ಥೆಗಳು ಸಾರ್ವಜನಿಕರಿಂದ ದೀರ್ಘಕಾಲದ ಅವಧಿಗೆ ಅಂದರೆ ಐದು ವರ್ಷಗಳ ಅವಧಿಗೆ ಠೇವಣಿ ರೂಪದಲ್ಲಿ ಸಂಗ್ರಹಿಸುವ ಬಂಡವಾಳಕ್ಕೆ ಸಾರ್ವಜನಿಕ ಠೇವಣಿಗಳೆನ್ನುವರು. ಈ ರೀತಿ ಠೇವಣಿಗಳನ್ನು ಪಡೆಯಲು ಹೆಚ್ಚು ನಿಯಮಾಚರಣೆಗಳಿಲ್ಲದೆ ಸುಲಭವಾಗಿ ಪಡೆಯಬಹುದು. ಸಂಸ್ಥೆಗಳು ಈ ಠೇವಣಿಗಳ ಮೇಲೆ ಶೇ.8 ರಿಂದ 10ರವರೆಗೆ ಬಡ್ಡಿಯನ್ನು ಕೊಡವುದರಿಂದ ಸಾರ್ವಜನಿಕರೂ ತಮ್ಮ ಹಣವನ್ನು ಠೇವಣಿಗಳಂತೆ ಇಟ್ಟು ಲಾಭ ಪಡೆಯಲು ಸಾಧ್ಯವಾಗುತ್ತದೆ.

6. ಹಣಕಾಸು ಮಾರುಕಟ್ಟೆ ಎಂದರೇನು? ಇದು ಬಂಡವಾಳ ಮಾರುಕಟ್ಟೆಗಿಂತ ಹೇಗೆ ಭಿನ್ನವಾಗಿದೆ ?

1. **ಹಣದ ಮಾರುಕಟ್ಟೆ**


SSTF DIGITAL GROUP

- ಅಲ್ಪಾವಧಿ ಸಾಲಗಳಿಗೆ ಸಂಬಂಧ ಪಟ್ಟಿದ್ದಾಗಿದೆ.
- ಕಾರ್ಯಶೀಲ ಬಂಡವಾಳಕ್ಕಾಗಿ ಹಣಕಾಸನ್ನು ಒದಗಿಸುತ್ತದೆ.
- ಬಡ್ಡಿ ದರಕ್ಕಿಂತ ಹೆಚ್ಚಾಗಿರುತ್ತದೆ
- ಸಾಲಗಳನ್ನು ಒಂದು ದಿನದಿಂದ ಒಂದುವಾರ, 1 ರಿಂದ 6 ತಿಂಗಳುಗಳ ಅವಧಿಗೆ ಪಡೆಯಬಹುದು.
- ಈ ಸಾಲಗಳನ್ನು ವ್ಯಾಪಾರಿ ವಿನಿಮಯ ಪತ್ರಗಳು, ಅಲ್ಪಾವಧಿ ಸಹಕಾರಿ ಬಾಂಡ್‌ಗಳು, ಖಜಾನೆ ವಿನಿಮಯ ಪತ್ರಗಳು ಮುಂತಾದುವುಗಳ ಉದ್ದರಿ ಸಾಧನಗಳ ಮೇಲೆ ಪಡೆಯಬಹುದು.

2. **ಬಂಡವಾಳ ಮಾರುಕಟ್ಟೆ**

- ದೀರ್ಘಾವಧಿಗೆ 20 ರಿಂದ 30 ವರ್ಷದ ಅವಧಿಗೆ ಸಾಲ ನೀಡುತ್ತವೆ.
- ಇವು ಸಂಸ್ಥೆಗಳ ಸ್ಥಿರ ಬಂಡವಾಳಕ್ಕಾಗಿ ಸಾಲವನ್ನು ನೀಡುತ್ತವೆ.
- ಇಲ್ಲಿ ಬಡ್ಡಿದರವು ಹಣದ ಮಾರುಕಟ್ಟೆ ವಿಧಿಸುವುದಕ್ಕಿಂತ ಕಡಿಮೆ ಇರುತ್ತದೆ.
- ಬಂಡವಾಳ ಮಾರುಕಟ್ಟೆಯಲ್ಲಿ ಹಣಕಾಸಿನ ಸಂಸ್ಥೆಗಳು, ಬಂಡವಾಳ ಸಂಸ್ಥೆಗಳು
- ಹೂಡಿಕೆ ವಿಶ್ವಸ್ಥಸಮಿತಿಗಳು ಅನ್ಯೋನ್ಯ ನಿಧಿಗಳು ಪ್ರಮುಖವಾದವು.

7. **ವ್ಯವಹಾರ ಸಂಸ್ಥೆಗಳಿಗೆ ಷೇರುಮಾರುಕಟ್ಟೆಗಳ ಪಾತ್ರವನ್ನು ಸ್ಥೂಲವಾಗಿ ವಿವರಿಸಿ**

ಷೇರುಮಾರುಕಟ್ಟೆಗಳು ಬಂಡವಾಳ ಮಾರುಕಟ್ಟೆಯ ಒಂದು ಘಟಕವಾಗಿದೆ. ಚಾಲ್ತಿಯಲ್ಲಿರುವ ಷೇರುಗಳನ್ನು ಮತ್ತು ಬಾಂಡುಗಳನ್ನು ಖರೀದಿದಾರರು ಮತ್ತು ಮಾರಾಟಗಾರರು ಅಥವಾ ಅವರ ಪ್ರತಿನಿಧಿಗಳು ವ್ಯವಹಾರ ಮಾಡುವ ಒಂದು ಸ್ಥಳವಾಗಿದೆ.ಷೇರುಮಾರುಕಟ್ಟೆಗಳು ಷೇರುಗಳನ್ನು ಮತ್ತು ಭದ್ರತಾ ಪತ್ರಗಳನ್ನು ಕೊಳ್ಳುವಿಕೆ ಮತ್ತು ಮಾರುವಿಕೆಯನ್ನು ನಿಯಂತ್ರಿಸುತ್ತವೆ ಮತ್ತು ಹಿಡಿತದಲ್ಲಿಟ್ಟು ಕೊಂಡಿರುತ್ತವೆ. ಇವು ಸರ್ಕಾರದಿಂದ ನಿಯಂತ್ರಿಸಲ್ಪಡುತ್ತವೆ. ಇವು ಷೇರುಗಳನ್ನು ಮತ್ತು ಬಾಂಡುಗಳನ್ನು ಮಾರುವುದು ಮತ್ತು ಕೊಳ್ಳುವುದೇ ಅಲ್ಲದೆ ಇವುಗಳನ್ನು ಹೊಂದಿರುವ ಷೇರು ಮಾರುಕಟ್ಟೆಯ ಸದಸ್ಯರಿಗೆ ತಮ್ಮ ವಹಿವಾಟುಗಳನ್ನು ನಿರ್ವಹಿಸಲು ಸ್ಥಳಾವಕಾಶವನ್ನು ಮಾಡಿ ಕೊಡುತ್ತದೆ. ಈ ಸದಸ್ಯರು ತಮ್ಮದೇ ಲೆಕ್ಕದಲ್ಲಿ ನಿಯಮಗಳು, ಕಾಯಿದೆಗಳು ಮತ್ತು ನಿಯಂತ್ರಣಗಳಿಗೆ ಒಳಪಟ್ಟಿರುತ್ತಾರೆ.

ಅಧ್ಯಾಯ – 3

## ವ್ಯವಹಾರಶಾಸ್ತ್ರದಲ್ಲಿ ಲೆಕ್ಕಬರಹ

1. ವ್ಯಾಪಾರದ ದಿನವಹಿ ವಹಿವಾಟುಗಳನ್ನು ಬರೆದಿಡುವ ಪುಸ್ತಕವನ್ನು **ಕಚ್ಚಾಪುಸ್ತಕ** ಎನ್ನುತ್ತೇವೆ.
2. ಸಂಬಳ ಕೊಟ್ಟ ವಹಿವಾಟು **ನಾಮಮಾತ್ರ** ಖಾತೆಯಡಿಯಲ್ಲಿ ಬರುತ್ತದೆ.
3. ನವೀನ ಮತ್ತು ಶಾಸ್ತ್ರೀಯ ಲೆಕ್ಕಪತ್ರಗಳನ್ನಿಡುವ ಪದ್ದತಿಯನ್ನು **ದ್ವಿ ನಮೂನು** ಪದ್ದತಿ ಎನ್ನುತ್ತಾರೆ.
4. ಒಂದು ಖಾತೆಯ ಜಮ ಮತ್ತು ಖರ್ಚುಗಳ ವ್ಯತ್ಯಾಸವನ್ನು **ಅಖೈರು ಶಿಲ್ಕು** ಎನ್ನುತ್ತೇವೆ.
5. ನಗದಿನೊಂದಿಗೆ ವ್ಯಾಪಾರ ಪ್ರಾರಂಭಿಸಿದ ಎರಡು ಖಾತೆಗಳು **ಬಂಡವಾಳ ಖಾತೆ ಮತ್ತು ನಗದು ಖಾತೆ ಆಗಿವೆ.**

SS STF DIGITAL GROUP

6.ಅಖೈರು ಲೆಕ್ಕಗಳಲ್ಲಿ ವ್ಯಾಪಾರದಿಂದ ಬಂದ ಲಾಭವನ್ನು **ಲಾಭ ಮತ್ತು ನಷ್ಟದ ಖಾತೆಗೆ** ವರ್ಗಾಯಿಸುತ್ತಾರೆ.

7. ಸ್ಥಿರಾಸ್ತಿಗಳು ಪ್ರತಿವರ್ಷ ತಮ್ಮ ಮುಖಬೆಲೆಯಲ್ಲಿ ಕಳೆದುಕೊಳ್ಳುವ ಕೊಂಚ ಭಾಗವನ್ನು **ಸವಕಳಿ** ಎನ್ನುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಲೆಕ್ಕಬರಹದಲ್ಲಿ ಮೂಲ ದಾಖಲೆಯ ಪುಸ್ತಕ ಯಾವುದು? ಅದನ್ನು ಏಕೆ ಮೂಲದಾಖಲೆಯ ಪುಸ್ತಕ ಎನ್ನುತ್ತೇವೆ?

ಉತ್ತರ: ರೋಜು ಪುಸ್ತಕ. ವಹಿವಾಟುಗಳ ದಾಖಲೆಗಳು ಪೂರ್ಣ ವಿವರಗಳೊಂದಿಗೆ ಮೊದಲು ರೋಜು ಪುಸ್ತಕದಲ್ಲಿ ದಾಖಲಾಗುವುದರಿಂದ ರೋಜು ಪುಸ್ತಕವನ್ನು ದಾಖಲೆಗಳ ಮೂಲಪುಸ್ತಕ ಎನ್ನುತ್ತಾರೆ.

2. ಖಾತೆಗಳ ವಿಧಗಳಾವುವು? ಉದಾಹರಣೆ ಕೊಡಿ.

ಉತ್ತರ: 1. ವ್ಯಕ್ತಿ ಖಾತೆಗಳು ಅಥವಾ ವ್ಯಕ್ತಿ ವಾಚಕ ಖಾತೆಗಳು : ಉದಾ: ಸುರೇಶ್‌ರವರ ಖಾತೆ, ಬ್ಯಾಂಕು ಖಾತೆ, ರಾಜನ್‌ರವರ ಖಾತೆ. ABC ಪಾಲುದಾರಿಕೆ ಖಾತೆ, X ಕಂಪನಿ ಖಾತೆ ಇತ್ಯಾದಿ

2. ಆಸ್ತಿ ಖಾತೆಗಳು ಅಥವಾ ವಸ್ತು ವಾಚಕ ಖಾತೆಗಳು : ಉದಾ : ಕಟ್ಟಡಗಳ ಖಾತೆ, ನಗದು ಖಾತೆ, ಪೀಠೋಪಕರಣಗಳ ಖಾತೆ, ಯಂತ್ರಗಳ ಖಾತೆ, ಇತ್ಯಾದಿ.

3. ನಾಮ ಮಾತ್ರ ಖಾತೆಗಳು ಅಥವಾ ನಾಮವಾಚಕ ಖಾತೆಗಳು : ಉದಾ: ಸಂಬಳಗಳು ಕೊಟ್ಟಿದ್ದು, ಬ್ಯಾಂಕಿನಿಂದ ಬಡ್ಡಿ ಬಂದಿದ್ದು, ಕೂಲಿ ಕೊಟ್ಟಿದ್ದು, ತೆರಿಗೆಗಳನ್ನು ಪಾವತಿ ಮಾಡಿದ್ದು, ಬಾಡಿಗೆ ಕೊಟ್ಟಿದ್ದು, ಬಾಡಿಗೆ ಪಡೆದಿದ್ದು, ಕಮೀಷನ್ ಪಾವತಿ ಮಾಡಿದ್ದು, ಕಮೀಷನ್ ಪಡೆದಿದ್ದು, ವಿಮೆ ವೆಚ್ಚ, ಸಾರಿಗೆ ವೆಚ್ಚ ಮುಂತಾದವು.

3. ವ್ಯಾಪಾರದಲ್ಲಿ ಲೆಕ್ಕಬರಹದ ಅವಶ್ಯಕತೆ ಏನು?

ಉತ್ತರ: * ಒಂದು ನಿರ್ದಿಷ್ಟ ಅವಧಿಗೆ ವ್ಯಾಪಾರ ಸಂಘಟನೆಯು ಗಳಿಸಿದ ನಿವ್ವಳ ಲಾಭ ಎಷ್ಟು ಅಥವಾ ಅನುಭವಿಸಿದ ನಷ್ಟ ಎಷ್ಟೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿರುತ್ತದೆ.

* ಇತರರಿಂದ ಬರಬೇಕಾದ ಹಣ ಎಷ್ಟು ಮತ್ತು ಇತರರಿಗೆ ಕೊಡಬೇಕಾದ ಹಣ ಎಷ್ಟು ಎಂಬುದನ್ನೂ ಸಹ ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲ ಲೆಕ್ಕಗಳನ್ನು ಬರೆದಿಡಬೇಕಾಗುತ್ತದೆ.

* ಹಲವಾರು ವಹಿವಾಟುಗಳನ್ನು ನಡೆಸುವ ಒಂದು ವ್ಯಾಪಾರ ಸಂಸ್ಥೆ ವಹಿವಾಟುಗಳ ಪರಿಣಾಮಗಳನ್ನು ತಿಳಿದುಕೊಳ್ಳಲು ಬೇರೆ ಬೇರೆಯಾಗಿ ಲೆಕ್ಕಗಳನ್ನು ಬರೆದಿಡಬೇಕಾಗುತ್ತದೆ.

* ಒಂದು ಅವಧಿಯಲ್ಲಿ ಸಂಸ್ಥೆ ಗಳಿಸಿದ ಲಾಭ ಅಥವಾ ಅನುಭವಿಸಿದ ನಷ್ಟ ಎಷ್ಟು ಎಂಬುದನ್ನು ತಿಳಿದುಕೊಳ್ಳಬೇಕಾದರೆ ಲೆಕ್ಕಬರಹ ಅವಶ್ಯಕವಾಗಿರುತ್ತದೆ.

4. ದ್ವಿನಮೂದು ಪದ್ಧತಿಯ ಲೆಕ್ಕಬರಹ ಎಂದರೇನು?

ಉತ್ತರ: ಪ್ರತಿಯೊಂದು ವ್ಯಾಪಾರ ವಹಿವಾಟು ಎರಡು ಅಂಶ ಗಳಿಂದ ಕೂಡಿರುತ್ತದೆ. ಒಂದು ಅಂಶ ಫಲ ಕೊಡುತ್ತದೆ, ಮತ್ತೊಂದು ಅಂಶ ಫಲ ಪಡೆಯುತ್ತದೆ. ಒಂದು ಲೆಕ್ಕ ಫಲ ಪಡೆದರೆ ಮತ್ತೊಂದು ಲೆಕ್ಕ ಫಲ ಕೊಡುತ್ತದೆ. ಇವುಗಳನ್ನು ದಾಖಲೆ ಮಾಡುವಾಗ ಒಂದು ವಹಿವಾಟನ್ನು ಎರಡು ಖಾತೆಗಳಲ್ಲಿ ವಿರುದ್ಧ ಕಡೆಗಳಲ್ಲಿ ದಾಖಲೆ ಮಾಡುತ್ತೇವೆ. ಇದನ್ನು ದ್ವಿ-ನಮೂದು ಪದ್ಧತಿ ಎನ್ನುತ್ತೇವೆ.

5. ಆಖೈರು ಲೆಕ್ಕಗಳಾವುವು? ಲಾಭನಷ್ಟದ ಖಾತೆಯ ಫಲಿತಾಂಶದ ಪರಿಣಾಮವೇನು?

ಉತ್ತರ: ಅಖೈರು ಲೆಕ್ಕಗಳು ಸಾಮಾನ್ಯವಾಗಿ ಎರಡು ಪಟ್ಟಿಗಳಿಂದ ಕೂಡಿರುತ್ತದೆ.

1. ವ್ಯಾಪಾರ ಮತ್ತು ಲಾಭದ ನಷ್ಟದ ಖಾತೆ.

2. ಆಸ್ತಿ ಮತ್ತು ಜವಾಬ್ದಾರಿ ಪಟ್ಟಿ

ವ್ಯಾಪಾರ ಮತ್ತು ಲಾಭ ನಷ್ಟದ ಖಾತೆಯನ್ನು ಕೆಲವೊಮ್ಮೆ ಎರಡು ಭಾಗಗಳಾಗಿ ವ್ಯಾಪಾರಖಾತೆ ಮತ್ತು ಲಾಭದ ನಷ್ಟದ ಖಾತೆ ಎಂದು ತಯಾರಿಸಲಾಗುತ್ತದೆ. ಸಾಮಾನ್ಯವಾಗಿ ಇವೆರಡನ್ನು ಒಟ್ಟಿಗೆ ಸೇರಿಸಿ ವ್ಯಾಪಾರ ಮತ್ತು ಲಾಭನಷ್ಟದ ಖಾತೆ ಎಂದು ಒಂದನ್ನೇ ತಯಾರಿಸುವುದು ರೂಢಿಯಲ್ಲಿದೆ.

ವ್ಯಾಪಾರ ಖಾತೆಯು ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಸರಕುಗಳ ಪ್ರಾರಂಭ ಶಿಲ್ಕು, ಸರಕುಗಳನ್ನು ಕೊಂಡಿದ್ದು, ಸರಕುಗಳನ್ನು ಮಾರಿದ್ದು, ಸರಕುಗಳನ್ನು ಹಿಂದಿರುಗಿಸಿದ್ದ ಹಾಗೂ ಹಿಂದಿರುಗಿ ಬಂದಿದ್ದು, ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಉಂಟಾದ ವೆಚ್ಚಗಳು ಉದಾ: ಸಾಗಾಣಿಕೆ ವೆಚ್ಚ, ಆಮದು ಸುಂಕ

ತಯಾರಿಕಾ

ವೆಚ್ಚಗಳು, ಕೂಲಿ, ಮಜೂರಿ ಮಂತಾದುವನ್ನು ಒಳಗೊಂಡಿರುತ್ತದೆ.

6.ಸರಕು ಮಾರಿದ್ದು ಮತ್ತು ಸರಕು ಖರೀದಿ ಖಾತೆಗಳ ಶಿಲ್ಕು ಕಂಡು ಹಿಡಿಯುವ ಅವಶ್ಯಕತೆ ಇಲ್ಲ. ಏಕೆ?

ಉತ್ತರ: ಸರಕು ಖಾತೆಯನ್ನು ಬೇರೆ ಬೇರೆಯಾಗಿ, ಸರಕು ಮಾರಿದ ಖಾತೆ ಮತ್ತು ಸರಕುಕೊಂಡ ಖಾತೆ ಎಂದು ತೋರಿಸಬೇಕು ಹಾಗೆಯೇ ಸರಕು ಹಿಂದಿರುಗಿಸಿದ್ದು ಮತ್ತು ಸರಕು ಹಿಂದಿರುಗಿ ಬಂದದ್ದನ್ನು ಬೇರೆ ಬೇರೆಯಾಗಿ ತೋರಿಸಬೇಕು. ಈ ಖಾತೆಗಳ ಮೊತ್ತಗಳನ್ನು ತಾಳೆ ಪಟ್ಟಿಯಲ್ಲಿ ತೋರಿಸಲಾಗುತ್ತದೆ.

ಆದ್ದರಿಂದ ಶಿಲ್ಕು ಮಾಡುವ ಅವಶ್ಯಕತೆ ಇರುವುದಿಲ್ಲ.

7. ಸ್ಥಿರಾಸ್ತಿಗಳ ಸವಕಳಿಯ ಪರಿಣಾಮ ಏನಾಗಿರುತ್ತದೆ?

ಉತ್ತರ: ಸ್ಥಿರಾಸ್ತಿಗಳುಪ್ರತಿವರ್ಷ ತಮ್ಮ ಮುಖ ಬೆಲೆಯಲ್ಲಿ ಕೊಂಚ ಭಾಗ ಕಳೆದುಕೊಳ್ಳುತ್ತವೆ. ಇದನ್ನು ಸವಕಳಿ ಎನ್ನುತ್ತೇವೆ. ಈ ಸವಕಳಿಯನ್ನು ಸ್ಥಿರಾಸ್ತಿಗಳಲ್ಲಿ ಕಳೆಯಬೇಕು ಹಾಗೂ ಸವಕಳಿಯನ್ನು ಲಾಭ-ನಷ್ಟದ ಖಾತೆಯಲ್ಲಿ ಖರ್ಚಿನ ಕಡೆ ತೋರಿಸಬೇಕು.

# ಸಮಾಜವಿಜ್ಞಾನ



೯ನೇ ತರಗತಿ

# ಎಕ್ಸಲೆಂಟ್ ಪ್ರಶ್ನೋತ್ತರ ಮಾಲಿಕೆ

## (ಪರಿಷ್ಕೃತ ಪಠ್ಯ ಆಧಾರಿತ)



## ಹಿನ್ನುಡಿ

ಕಲಿಕೆ ಸರಳೀಕರಣಗೊಳ್ಳುವುದರ ಜೊತೆಗೆ ಆಕರ್ಷಣೀಯಗೊಳ್ಳುವುದು ಅಗತ್ಯ.  ಈ ನಿಟ್ಟಿನಲ್ಲಿ ಎಸ್.ಎಸ್. ಎಸ್.ಟಿ.ಎಫ್. ಡಿಜಿಟಲ್ ಗ್ರೂಪ್ ತನ್ನದೇ ಆದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ರಾಜ್ಯದ ಸಮಸ್ತ ಶಿಕ್ಷಕರಿಗೆ ಹಾಗೂ ಮಕ್ಕಳಿಗಾಗಿ ಸಂಪನ್ಮೂಲ ನಿರ್ಮಾಣದಲ್ಲಿ ತೊಡಗಿದೆ. ಈ ಹಾದಿಯಲ್ಲಿ ೯ನೇ ತರಗತಿಯ ಸಮಾಜವಿಜ್ಞಾನ ಪ್ರಶ್ನೋತ್ತರ ಮಾಲಿಕೆ 'ಎಕ್ಸಲೆಂಟ್' ಪರಿಷ್ಕೃತ ಆವೃತ್ತಿಯು ಒಂದು. ಇದು ಮಕ್ಕಳ ಕಲಿಕೆಗೆ ದಾರಿದೀಪವಾಗಲಿ ಎಂದು ಆಶಿಸುತ್ತೇವೆ.

ವೀರೇಶ್ ಪಿ.
ಎಕ್ಸ್.ಮುನ್ಸಿಪಲ್ ಪ್ರೌಢಶಾಲೆ
ದಾವಣಗೆರೆ ತಾ. & ಜಿ.

ಕಾಂತೇಶ್ ಟಿ.
ಸರ್ಕಾರಿ ಪ್ರೌಢಶಾಲೆ ಸೋಮನಹಳ್ಳಿ
ಕಡೂರು ತಾ. ಚಿಕ್ಕಮಗಳೂರು ಜಿ.

ಸಮಾಜವಿಜ್ಞಾನ
ಎಸ್.ಟಿ.ಎಫ್. ಕರ್ನಾಟಕ ಡಿಜಿಟಲ್ ಗ್ರೂಪ್